

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 20 ಭಾನುವಾರ 2023

ಸಂಪುಟ: 44 | ಸಂಚಿಕೆ: 125 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಆ.30ರಂದು ಮೈಸೂರಲ್ಲಿ ಗೃಹಲಕ್ಷ್ಮಿಗೆ ಚಾಲನೆ



ಕುಟುಂಬದ ಯಜಮಾನಿಗೆ ₹2000

ಸಂದಾಯ ಮಾಡುವ ಮೂಲಕ ಪಕ್ಷದ ಅಧಿನಾಯಕ ರಾಹುಲ್ ಗಾಂಧಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯರ ನೂರು ದಿನಗಳ ಆಡಳಿತ ಸಾಧನೆ ಅನಾವರಣ



● ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಅದ್ಧೂರಿ ಸಮಾರಂಭ ಆಯೋಜನೆ ● ಡಿಸಿಎಂ ಡಿ.ಕೆ.ಶಿವಕುಮಾರ್, ಕಂದಾಯ ಸಚಿವ ಕೃಷ್ಣ ಭೈರೇಗೌಡ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್‌ಗೆ ಕಾರ್ಯಕ್ರಮ ಯಶಸ್ವಿ ಜವಾಬ್ದಾರಿ

ಬೆಂಗಳೂರು, ಆ. 19(ಕೆಎಂಶಿ)– **ಗೃಹಲಕ್ಷ್ಮೀ ಯೋಜನೆಯಡಿ ಮಾಸಿಕ ಎರಡು ಸಾವಿರ ರೂ.ಗಳನ್ನು ಒಂದು ಕೋಟಿಗೂ ಹೆಚ್ಚು ಮನೆಯೊಡತಿಯರ ಖಾತೆಗಳಿಗೆ ಆಗಸ್ಟ್ 30ರಂದು ಜಮೆ ಮಾಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಆಡಳಿತದ ನೂರು ದಿನಗಳ ಸಾಧನೆ ಅನಾವರಣ ಮಾಡಲಿದ್ದಾರೆ.**

ತಮ್ಮ ನೇತೃತ್ವದ ಸರ್ಕಾರಕ್ಕೆ ನೂರು ದಿನಗಳು ತುಂಬುತ್ತಿರುವ ಬೆನ್ನಲ್ಲೇ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಅವರ ಮೂಲಕವೇ ಸಾಂಕೇತಿಕವಾಗಿ ಕೆಲವು ಫಲಾನುಭವಿಗಳಿಗೆ ಹಣ ಸಂದಾಯ ಮಾಡುವ ಮೂಲಕ ಗ್ಯಾರಂಟಿಯ ನಾಲ್ಕನೇ ಯೋಜನೆ ಅನುಷ್ಠಾನಗೊಳಿಸುತ್ತಿದ್ದಾರೆ. ತಮ್ಮ ತವರು ಜಿಲ್ಲೆ ಮೈಸೂರು ನಗರದ ಮಹಾರಾಜ ಕಾಲೇಜಿನ ಮೈದಾನದಲ್ಲಿ ನಡೆಯುವ ಸಮಾರಂಭದಲ್ಲಿ ರಾಹುಲ್‌ಗಾಂಧಿ ಈ ಯೋಜನೆಗೆ ಚಾಲನೆ ನೀಡಲಿದ್ದಾರೆ.

ಯೋಜನೆಗೆ ಚಾಲನೆ ನೀಡುವುದರ ಜತೆಗೆ ತಮ್ಮ ಆಡಳಿತದ ನೂರು ದಿನಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯ ಹಾಗೂ ಯೋಜನೆಗಳ ಮಾಹಿತಿಯುಳ್ಳ ಕಿರು ಹೊತ್ತಿಗೆಯನ್ನು ರಾಹುಲ್‌ಗಾಂಧಿ ಬಿಡುಗಡೆಗೊಳಿಸಲಿದ್ದಾರೆ. ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ರಾಹುಲ್‌ಗಾಂಧಿ ಮನೆಯೊಡತಿಗೆ ಮಾಸಿಕ 2000 ರೂ. ನೀಡುವ ಪಕ್ಷದ ನಿರ್ಧಾರವನ್ನು ಬಹಿರಂಗ ಭಾಷಣದಲ್ಲಿ ಘೋಷಣೆ ಮಾಡಿದ್ದರು. ಇದು ರಾಜ್ಯದ ನಾಯಕರಿಗೂ ತಿಳಿದಿರಲಿಲ್ಲ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದರೆ, ಮನೆಯೊಡತಿಯ ಕಷ್ಟ–ಸುಖಗಳಿಗೆ ಸಹಕಾರಿಯಾಗಲು ಹಣ ನೀಡುವುದಾಗಿ ಪ್ರಕಟಿಸಿದ್ದರು. ನಂತರ ಐದು ಗ್ಯಾರಂಟಿಗಳಲ್ಲಿ ರಾಹುಲ್ ಪ್ರಕಟಣೆಯನ್ನು ಪ್ರಮುಖವಾಗಿ ಅಳವಡಿಸಿಕೊಳ್ಳಲಾಯಿತು. ಅವರ ಕನಸ್ಸನ್ನು ನನಸು ಮಾಡಿರುವ ರಾಜ್ಯ ಸರ್ಕಾರ, ಅವರಿಂದಲೇ ಫಲಾನುಭವಿಗಳಿಗೆ ಯೋಜನೆಯ ಸವಲತ್ತನ್ನು ಮುಖ್ಯಮಂತ್ರಿ ಕೊಡಿಸುತ್ತಿದ್ದಾರೆ.



ಮೈಸೂರು ಮಹಾರಾಜ ಕಾಲೇಜು ಮೈದಾನ

ಕಾರ್ಯಕ್ರಮವನ್ನು ಯಶಸ್ವಿ ಹಾಗೂ ಅರ್ಥಪೂರ್ಣಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ಎರಡು ದಿನಗಳಿಂದ ತಮ್ಮೆಲ್ಲಾ ಅಧಿಕೃತ ಕಾರ್ಯಕ್ರಮಗಳನ್ನು ಬದಿಗಿಟ್ಟು ಸಿದ್ಧತೆ ಬಗ್ಗೆ ಸಂಬಂಧಪಟ್ಟವರೊಂದಿಗೆ ಸಮಾಲೋಚನೆ ನಡೆಸಿ ಮಾರ್ಗದರ್ಶನ ಮಾಡುತ್ತಿದ್ದಾರೆ.

ಮೈಸೂರಿನ ಕಾರ್ಯಕ್ರಮ ಯಶಸ್ವಿಗೊಳಿಸುವ ಉದ್ದೇಶದಿಂದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಂದಾಯ ಸಚಿವ ಕೃಷ್ಣಬೈರೇಗೌಡ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮತ್ತು ಅಧಿಕಾರಿಗಳೊಂದಿಗೆ ಎರಡು ಸಭೆ ನಡೆಸಿದ್ದಾರೆ. ಅರಮನೆ ನಗರಿಯಲ್ಲಿ ರಾಜ್ಯಮಟ್ಟದ ಮುಖ್ಯ ಕಾರ್ಯಕ್ರಮವನ್ನು ಸರ್ಕಾರ ಆಯೋಜಿಸಿದ್ದರೆ, ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅಂದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ನೂರು ದಿನಗಳ ಸಾಧನೆಯ ಪರಿಚಯವನ್ನು ಜಿಲ್ಲಾಡಳಿತ ನಡೆಸಲಿದೆ. ಪಕ್ಷ ಅಧಿಕಾರಕ್ಕೆ ಬಂದರೆ ಅನ್ನಭಾಗ್ಯ, ಶಕ್ತಿ, ಗೃಹ ಜ್ಯೋತಿ, ಗೃಹಲಕ್ಷ್ಮೀ ಹಾಗೂ ಯುವನಿಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಭರವಸೆಯನ್ನು ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಪಕ್ಷ ನೀಡಿತ್ತು. ಅದರಂತೆ ಈಗಾಗಲೇ ಮೂರು ಗ್ಯಾರಂಟಿಗಳು ಅನುಷ್ಠಾನಗೊಂಡಿದ್ದು, ನಾಲ್ಕನೇ ಗ್ಯಾರಂಟಿ ಗೃಹಲಕ್ಷ್ಮೀ ಆ.30ರಿಂದ ಚಾಲನೆಯಾಗಲಿದೆ. ಇನ್ನೂ ಯುವನಿಧಿ ಡಿಸೆಂಬರ್ ತಿಂಗಳಲ್ಲಿ ಅನುಷ್ಠಾನಗೊಳ್ಳಲಿದೆ. ರಾಹುಲ್ ಗಾಂಧಿ ಪ್ರಕಟಿಸಿದ ● 9ನೇ ಪುಟಕ್ಕೆ

ಇವಿ ಚಾರ್ಜಿಂಗ್ ಸ್ಟೇಷನ್, ವಾಹನ ಡೀಲರ್‌ಶಿಪ್ ವಂಚನೆ ಬಗ್ಗೆ ಎಚ್ಚರವಾಗಿರಿ...!

ಮೈಸೂರು ಎಸ್ಪಿ ಸೀಮಾ ಲಾಟ್ಕರ್ ಟ್ವೀಟ್



ಎಸ್ಪಿ ಸೀಮಾ ಲಾಟ್ಕರ್



ಮೈಸೂರು, ಆ. 19(ಆರ್‌ಕೆ)– ಎಲೆಕ್ಟ್ರಿಕ್ ವಾಹನಗಳು (ಇವಿ) ಹಾಗೂ ಚಾರ್ಜಿಂಗ್ ಸ್ಟೇಷನ್ ಡೀಲರ್‌ಶಿಪ್ ನೀಡುತ್ತೇವೆಂದು ಬರುವವರ ಬಗ್ಗೆ ಜಾಗರೂಕರಾಗಿರಿ ಎಂದು ಮೈಸೂರು ಎಸ್ಪಿ ಸೀಮಾ ಲಾಟ್ಕರ್ ಅವರು ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಬರುವ ಜಾಹೀರಾತುಗಳಲ್ಲಿ ಎಲೆಕ್ಟ್ರಿಕ್ ವಾಹನಗಳ ಮಾರಾಟ ಮತ್ತು ಚಾರ್ಜಿಂಗ್ ಸ್ಟೇಷನ್‌ಗಳನ್ನು ನಿರ್ಮಿಸಲು ಡೀಲರ್‌ಶಿಪ್ ನೀಡುತ್ತೇವೆಂದು ನಮೂದಾಗಿರುವ ಮಾಹಿತಿ ನಂಬಿ ನಿಮ್ಮ ಹಣವನ್ನು ಕಳೆದುಕೊಳ್ಳಬೇಡಿ ಎಂದು ಅವರು ಟ್ವೀಟ್ ಮೂಲಕ ಸಲಹೆ ನೀಡಿದ್ದಾರೆ.

ಆನ್‌ಲೈನ್ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಎಚ್ಚೆತ್ತ ಸೀಮಾ ಲಾಟ್ಕರ್, ಸಾರ್ವಜನಿಕರು ಮೋಸಕ್ಕೊಳಗಾಗಬಾರದೆಂಬ ಕಾರಣಕ್ಕೆ ಟ್ವಿಟರ್‌ನಲ್ಲಿ ಮಾಹಿತಿ ನೀಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ಆಮಿಷ ಒಡ್ಡುತ್ತಿರುವ ಬಗ್ಗೆ ಎಚ್ಚರವಾಗಿರಬೇಕು, ವಂಚಕರು ಕೇಳಿದ ಮಾಹಿತಿಗಳನ್ನು ನೀಡಿದಲ್ಲಿ ಅನಗತ್ಯವಾಗಿ ಹಣ ಕಳೆದುಕೊಳ್ಳಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ. ಎಲೆಕ್ಟ್ರಾನಿಕ್ ವಾಹನಗಳ ಖರೀದಿ ಮತ್ತು ಎಲೆಕ್ಟ್ರಿಕ್ ಚಾರ್ಜಿಂಗ್ ಸ್ಟೇಷನ್ ನಿರ್ಮಿಸಲು ಡೀಲರ್‌ಶಿಪ್ ಕೊಡಿಸುತ್ತೇವೆಂಬುದಾಗಿ ಆಮಿಷ ತೋರಿದ ತಕ್ಷಣ ನೀವೇನಾದರೂ ಸ್ಪಂದಿಸಿ ಇ–ಮೇಲ್, ವೆಬ್‌ಸೈಟ್‌ನಲ್ಲಿ ಪ್ರತಿಕ್ರಿಯಿಸಿದರೆ ಸಾಕು, ನಿಮ್ಮ ಬಳಿಯಿಂದ ನೋಂದಣಿ ಶುಲ್ಕ ಮತ್ತು ಇನ್ನಿತರ ಬಾಬತ್ತಿಗಾಗಿ ಹಣ ಪಡೆದುಕೊಳ್ಳುತ್ತಾರೆ. ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರಂಗಳಲ್ಲಿ ವಂಚಕರ ಜಾಹೀರಾತುಗಳು ಬಲು ಬೇಗ ಹರಡಿ ಸಾರ್ವಜನಿಕರನ್ನು ಮರಳು ಮಾಡುತ್ತಿರುವ ಪ್ರಕರಣಗಳ ಸಂಖ್ಯೆ ದಿನೇ ದಿನೆ ಹೆಚ್ಚುತ್ತಿವೆ. ಆಮಿಷಕ್ಕೆ ಬಲಿಯಾಗಿ ಅಮಾಯಕರು ತಮ್ಮ ವೈಯಕ್ತಿಕ ದಾಖಲೆಗಳಾದ ಆಧಾರ್, ಕಂಪನಿ ಸರ್ಟಿಫಿಕೇಟ್‌ಗಳು, ಪ್ಯಾನ್ ಕಾರ್ಡನ್ನುಹ ● 6ನೇ ಪುಟಕ್ಕೆ

ಕೆಪಿಎಸ್‌ಸಿಗೆ ಮೂವರು ಹೊಸ ಸದಸ್ಯರ ನೇಮಕ

ಬೆಂಗಳೂರು, ಆ. 19(ಕೆಎಂಶಿ)– ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ಮುಖ್ಯಮಂತ್ರಿ ಸಿದ್ದರಾಮಯ್ಯ ಮೂವರು ಹೊಸ ಸದಸ್ಯರನ್ನು ನೇಮಕ ಮಾಡಿದ್ದಾರೆ.

ಬೀದರ್‌ನ ಬಸವರಾಜ್ ಮಲ್ಗೆ, ಬೆಂಗಳೂರಿನ ಡಾ.ಆರ್.ಕಾವಾಲಮ್ಮ ಹಾಗೂ ಕುವೆಂಪು ವಿಶ್ವವಿದ್ಯಾಲಯದ ಮಾಜಿ ರಿಜಿಸ್ಟ್ರಾರ್ ಡಾ.ಹೆಚ್.ಎಸ್.ಭೋಜ್ಯನಾಯ್ಕ್ ಅವರನ್ನು ನೇಮಕ ಮಾಡಿದ್ದಾರೆ.



ಕೆಆರ್‌ಎಸ್, ಕಬಿನಿ ಜಲಾಶಯದಿಂದ ತಮಿಳುನಾಡಿಗೆ ನೀರು ಬಿಡುಗಡೆ

ಎರಡು ಜಲಾಶಯಗಳು ಬರಿದಾಗುವ ಆತಂಕ

● ಕೆಆರ್‌ಎಸ್‌ನಲ್ಲಿ 107 ಅಡಿ, ಕಬಿನಿಯಲ್ಲಿ 2,277 ಅಡಿಗೆ ಕುಸಿತ ● ಮೆಟ್ಟೂರು ಜಲಾಶಯದಲ್ಲಿ 100 ಟಿಎಂಸಿ ನೀರಿದ್ದರೂ ತಮಿಳುನಾಡು 3ನೇ ಬೆಳೆಗೆ ನೀರು ● ರಾಜ್ಯದ ರೈತರು ಒಂದು ಬೆಳೆಗೆ ನೀರು ಪಡೆಯಲಾಗದ ದುಸ್ಥಿತಿ!



ಮೈಸೂರು, ಆ.19– ತಮಿಳುನಾಡು ಸರ್ಕಾರದ ಒತ್ತಡಕ್ಕೆ ಮಣಿದು ನೀರು ಬಿಡುತ್ತಿರುವುದರಿಂದ ಮಂಡ್ಯದ ಕೃಷ್ಣರಾಜ ಸಾಗರ ಹಾಗೂ ಮೈಸೂರಿನ ಕಬಿನಿ ಜಲಾಶಯ ಬರಿದಾಗುವ ಆತಂಕ ಎದುರಾಗಿದೆ.

ಕೊಡಗು ಹಾಗೂ ಕೇರಳದಲ್ಲಿ ಮಳೆಯ ಪ್ರಮಾಣ ಕಡಿಮೆ ಯಾಗಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್ ಜಲಾಶಯ ಭರ್ತಿಯಾಗಿಲ್ಲ. ಈ ಕಾರಣದಿಂದ ತಮಿಳುನಾಡಿಗೆ ನೀರು ಬಿಡುವುದಿಲ್ಲ. ಮಳೆ ಬಾರದೆ ಜಲಾಶಯ ತುಂಬದ ಪರಿಸ್ಥಿತಿಯಲ್ಲಿ ತಮಿಳುನಾಡು ಸರ್ಕಾರ ಸಂಕಷ್ಟ ಸೂತ್ರ ಪಾಲಿಸಬೇಕು ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಹೇಳಿದ್ದರು.

ಆದರೆ ಈಗ ಕರ್ನಾಟಕ ಸರ್ಕಾರವೇ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಿಂದ ಪ್ರತಿದಿನ ನೀರು ಬಿಡುತ್ತಿದೆ. ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 107 ಅಡಿ ಇದೆ. ಜಲಾಶಯಕ್ಕೆ ಒಳ ಹರಿವಿನ ಪ್ರಮಾಣ ಕಡಿಮೆಯಾಗಿದ್ದು, ಕೇವಲ 2,349 ಕ್ಯೂಸೆಕ್ ನೀರು ಮಾತ್ರ ಬರುತ್ತಿದೆ. ಆದರೆ ಕೆಆರ್‌ಎಸ್‌ನಿಂದ ಪ್ರತಿದಿನ 12,960 ಕ್ಯೂಸೆಕ್ ನೀರು ಬಿಡಲಾಗುತ್ತಿದೆ. ಜಲಾಶಯ ಇನ್ನು ಭರ್ತಿಯಾಗದೇ, ಆಗಲೇ ಜಲಾಶಯದಿಂದ ನೀರು ಬಿಟ್ಟರೆ ● 9ನೇ ಪುಟಕ್ಕೆ

ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಬಿಜೆಪಿ ನೇತೃತ್ವದಲ್ಲಿ

ನಾಳೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಬಂದ್

● ಮೈಸೂರು ವಿಭಾಗೀಯ ಮಟ್ಟದ ಬಿಜೆಪಿ ಸಭೆಯಲ್ಲಿ ನಿರ್ಧಾರ ● ಧರಣಿಯಲ್ಲಿ ಬಿಎಸ್‌ವೈ ಭಾಗಿ ಸಾಧ್ಯತೆ



ಮಂಡ್ಯ, ಆ.19(ಮೋಹನ್‌ರಾಜ್)– ತಮಿಳುನಾಡಿಗೆ ಕೆಆರ್‌ಎಸ್‌ನಿಂದ ನೀರು ಬಿಡುಗಡೆ ಮಾಡಿ ಕಾವೇರಿ ಕೊಳ್ಳದ ರೈತರಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಅನ್ಯಾಯ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿರುವ ಬಿಜೆಪಿ, ಆ.21ರಂದು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಬಂದ್ ಮಾಡಲು ನಿರ್ಧರಿಸಿದೆ.

ಶನಿವಾರ ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಐದು ಜಿಲ್ಲೆ ಗಳ ಬಿಜೆಪಿ ಜನಪ್ರತಿನಿಧಿಗಳು ಹಾಗೂ ಪ್ರಮುಖ ಮುಖಂಡರ ಸಭೆಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ನಡೆಸಲು ನಿರ್ಧರಿಸಲಾಯಿತು.

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಧಾನ ಪರಿಷತ್ ಮಾಜಿ ಸದಸ್ಯ ಅಶ್ವಥ್ ನಾರಾಯಣಗೌಡ, ಕಾವೇರಿ ಕೊಳ್ಳದ ಜಲಾಶಯಗಳಿಂದ ರಾಜ್ಯ ಸರ್ಕಾರ ನೀರು ಬಿಡುಗಡೆ ಮಾಡುವ ಮೂಲಕ ರೈತರಿಗೆ ದ್ರೋಹ ಮಾಡಿದೆ. ರಾಜ್ಯದಲ್ಲಿ ಮಳೆ ಪ್ರಮಾಣ ಕಡಿಮೆಯಾಗಿದ್ದು, ಜಲಾಶಯಗಳಲ್ಲಿ ನೀರಿನ ಪ್ರಮಾಣ ಕುಸಿದಿದ್ದರೂ ಏಕಾಏಕಿ ತೀರ್ಮಾನ ಕೈಗೊಂಡು ನೀರು ಬಿಡುಗಡೆ ಮಾಡಲಾಗಿದೆ ● 9ನೇ ಪುಟಕ್ಕೆ

ನಾಳಿದ್ದು ರೈತ ಸಂಘದಿಂದ ಹೆದ್ದಾರಿ ತಡೆ

ಮಂಡ್ಯ, ಆ.19–ಮಳೆ ಇಲ್ಲದ ಸಂಕಷ್ಟ ಸಮಯದಲ್ಲೂ ಕೆಆರ್‌ಎಸ್ ಅಣೆಕಟ್ಟೆಯಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಆ.22ರಂದು ಬೆಳಗ್ಗೆ 10.30ಕ್ಕೆ ತಾಲೂಕಿನ ಇಂಡುವಾಳು ಬಳಿ ಮೈಸೂರು–ಬೆಂಗಳೂರು ಹೆದ್ದಾರಿ ತಡೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ (ಮೂಲ ಸಂಘಟನೆ) ಜಿಲ್ಲಾಧ್ಯಕ್ಷ ಇಂಡುವಾಳು ಚಂದ್ರಶೇಖರ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ರೈತರ ಬೆಳೆಗೇ ನೀರಿಲ್ಲ. ಮಳೆ ಅಭಾವದಿಂದ ಪೂರ್ಣ ಪ್ರಮಾಣದಲ್ಲಿ ಜಲಾಶಯ ತುಂಬದಿದ್ದರೂ ತಮಿಳುನಾಡಿಗೆ ನೀರು ಹರಿಸುತ್ತಿರುವುದು ಖಂಡನೀಯ. ರಾಜ್ಯ ಸರ್ಕಾರ ಸಲ್ಲದ ನೆಪಮಾತ್ರ ಮೀಟಿಂಗ್ ಮಾಡಿ ಕಟ್ಟು ಪದ್ಧತಿ (ಆನ್ ಅಂಡ್ ಆಫ್) ಅಡಿ ಜಿಲ್ಲೆಯ ರೈತರಿಗೆ ನೀರು ಕೊಡಲು ತೀರ್ಮಾನ ಪ್ರಕಟಿಸಿ, ತಮಿಳು ನಾಡಿಗೆ ನೀರು ಬಿಟ್ಟ ಮೇಲೆ ನಮಗೆ ನೀರು ಎಲ್ಲಿ ಉಳಿಯುತ್ತದೆ ಎಂದು ಪ್ರಶ್ನಿಸಿದರು.

ಈ ಬಾರಿಯ ಮುಂಗಾರು ಬೆಳೆಗೆ ಈ ಕಟ್ಟುಪದ್ಧತಿ ನೀರಿನಿಂದ ಯಾವುದೇ ಪ್ರಯೋಜನವಿಲ್ಲ. ಒಂದೆಡೆ ಭತ್ತದ ಸಸಿಮಡಿ ಒಣಗುತ್ತಿದ್ದರೆ, ಬೆಳೆದು ನಿಂತಿರುವ ಕಬ್ಬು, ತೆಂಗು, ರೇಷ್ಮೆ ಇಳು ವರಿಯಲ್ಲಿ ಕುಂಠಿತವಾಗುತ್ತಿದೆ. ನೀರಿಲ್ಲದೆ ಒಣಗುತ್ತಿರುವ ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಕಾರ್ಯ ಪ್ರಗತಿಯಾಗಿಲ್ಲ. ಇಂತಹ ಘೋರ ಸಂದಿಗ್ಧ ಪರಿಸ್ಥಿತಿಯಲ್ಲಿ ರೈತರಿರುವಾಗ ಇದಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೇ ತಮಿಳುನಾಡಿಗೆ ನೀರು ಹರಿಸುತ್ತಿರುವುದು ಸರಿಯಲ್ಲ ಎಂದು ಕಿಡಿಕಾರಿದರು. ● 9ನೇ ಪುಟಕ್ಕೆ

“ ಮೈಸೂರು ಅರಮನೆಗೆ ಬಾರದಂತೆ ಪ್ರವಾಸಿಗರನ್ನು ತಡೆಯುತ್ತಿರುವ ವಿಚಾರ ನಮಗೆ ಈ ತನಕ ತಿಳಿದಿಲ್ಲ. ಮೈಸೂರು ಅರಮನೆ ಮಂಡಳಿಯಿಂದ ಈ ತನಕ ಯಾವುದೇ ಪತ್ರವೂ ನನಗೆ ಬಂದಿಲ್ಲ. ಒಂದು ವೇಳೆ ಅರಮನೆ ಮಂಡಳಿಯವರು ದೂರು ನೀಡಿದರೆ ಕೂಡಲೇ ಕ್ರಮ ಕೈಗೊಳ್ಳುತ್ತೇನೆ. –ಬಿ.ರಮೇಶ್, ಮೈಸೂರು ನಗರ ಪೊಲೀಸ್ ಆಯುಕ್ತರು



ತಪ್ಪು ಮಾಹಿತಿ ನೀಡಿ ಪ್ರವಾಸಿಗರು ಮೈಸೂರು ಅರಮನೆ ಭೇಟಿಗೆ ‘ಮಾಫಿಯಾ’ ಅಡ್ಡಿ!

ಶಾಪಿಂಗ್ ನೆಪದಲ್ಲಿ ಕಮಿಷನ್ ದಂಧೆ

● ಅರಮನೆಗೆ ರಜೆ ಇದೆ, ಧಾರ್ಮಿಕ ಕಾರ್ಯ ನಡೆಯುತ್ತಿದೆ, ಖಾಸಗಿ ಕಾರ್ಯಕ್ರಮವಿದೆ ಎಂದು ಸುಳ್ಳು ಮಾಹಿತಿ ● ಪ್ರವಾಸಿಗರಿಂದ ಶಾಪಿಂಗ್ ಮಾಡಿಸಿ ಕಮಿಷನ್ ಕಮಾಯ್ ● ನಕಲಿ ಶ್ರೀಗಂಧದ ಎಣ್ಣೆ, ಕರಕುಶಲ ವಸ್ತು ಮಾರಾಟ ● ಅರಮನೆ ಮಂಡಳಿ ಅಸಹಾಯಕ; ಕಣ್ಣುಚ್ಚಿ ಕುಳಿತಿರುವ ಪೋಲಿಸರು

ಬಾಪುಲಿಂಗರಾಜ್ ಅರಸ್

ಮೈಸೂರು, ಆ.19– ವಿಶ್ವ ವಿಖ್ಯಾತ ಮೈಸೂರು ಅರಮನೆ ವೀಕ್ಷಣೆಗೆ ಪ್ರತಿ ದಿನ ದೇಶ ವಿದೇಶದಿಂದ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಆದರೆ, ಪ್ರವಾಸಿಗರಿಗೆ ತಪ್ಪು ಮಾಹಿತಿ ನೀಡಿ, ಅರಮನೆಗೆ ಬರುವುದನ್ನು ತಡೆಯುವ ದೊಡ್ಡ ‘ಮಾಫಿಯಾ’ ನಗರದಲ್ಲಿ ತಲೆ ಎತ್ತಿದೆ.

ಮೈಸೂರು ಅರಮನೆ ಸೌಂದರ್ಯ ಸವಿಯುವ ಜೊತೆಗೆ ರಾಜರ ಕಾಲದ ಗತವೈಭವ ಅರಿಯುವ ಕುತೂಹಲದಿಂದ ನಗರಕ್ಕೆ ಬರುವ ಪ್ರವಾಸಿಗರ ದಾರಿ ತಪ್ಪಿಸಲಾಗುತ್ತಿದೆ. ಮೈಸೂರು ಅರಮನೆಯ ಘನತೆ ಗೌರವಕ್ಕೂ ಧಕ್ಕೆ ತರುವಂತಹ ಈ ಮಾಫಿಯಾ ಮಟ್ಟ ಹಾಕುವಂತೆ ಮೈಸೂರು ಅರಮನೆ ಮಂಡಳಿಯ ಕಾರ್ಯನಿರ್ವಾಹಕ ನಿರ್ದೇಶಕರೂ ಆದ ಜಿಲ್ಲಾಧಿಕಾರಿಗಳು ನಗರ ಪೊಲೀಸ್ ಆಯುಕ್ತರಿಗೆ ಪತ್ರ ಬರೆದರೂ ಯಾವುದೇ ಪ್ರಯೋಜನವಾಗಿಲ್ಲ.

ಆಗ್ರಾದ ತಾಜ್ ಮಹಲ್ ಬಿಟ್ಟರೆ ಭಾರತದಲ್ಲಿ ಅತೀ ಹೆಚ್ಚು ಪ್ರವಾಸಿ ಗರು ಭೇಟಿ ನೀಡುವ, ಪ್ರವಾಸಿಗರ ಅಚ್ಚುಮೆಚ್ಚಿನ ತಾಣವೆಂದರೆ ಅದು ಮೈಸೂರು ಅರಮನೆ. ಒಂದು ವರ್ಷಕ್ಕೆ ಸರಾಸರಿ 35 ಲಕ್ಷ ಪ್ರವಾಸಿಗರು ಮೈಸೂರು ಅರಮನೆಗೆ ಭೇಟಿ ನೀಡುತ್ತಾರೆ. ಇಂಡೋ ಸಾರ್ಸನಿಕ್ ಶೈಲಿಯಲ್ಲಿ ಅದ್ಭುತವಾಗಿ ನಿರ್ಮಾಣವಾಗಿರುವ ರಾಜರ ಕಾಲದ ಮೈಸೂರು ಅರಮನೆ ನೋಡಲು ಪ್ರವಾಸಿಗರಲ್ಲಿ ತೀವ್ರ ಕುತೂಹಲವಿರುತ್ತದೆ. ಅದರಲ್ಲೂ ಜಗಮಗಿಸುವ ವಿದ್ಯುತ್ ಬೆಳಕಲ್ಲಿ ಮೈಸೂರು ಅರಮನೆ ಅಂದ ಸವಿಯಲು ಕಾತುರರಾಗಿರುತ್ತಾರೆ. ಆದರೆ ಮೈಸೂರು ಅರಮನೆಗೆ ಕಾಲಿಡದಂತೆ ತಡೆಯುವ ದೊಡ್ಡ ಮಾಫಿಯಾ ನಗರದಲ್ಲಿ ಕಾರ್ಯಪ್ರವೃತ್ತವಾಗಿದೆ. ಮೈಸೂರಿಗೆ ಬರುವ ಪ್ರವಾಸಿಗರ ವಾಹನಗಳನ್ನು ನಗರ ಪ್ರವೇಶ ಸ್ಥಳದಲ್ಲೇ ತಡೆಗಟ್ಟಿ, ತಪ್ಪು ಮಾಹಿತಿ ನೀಡಿ, ಬೇರೆಡೆ ಕರೆದುಕೊಂಡು ಹೋಗುವ, ಅವರನ್ನು ಸುಲಿಗೆ ಮಾಡುವ ದಂಧೆ ರಾಜಾರೋಷವಾಗಿ ನಡೆಯುತ್ತಿದೆ. **ಇಂದು ರಾಜಮನೆತನದ ಧಾರ್ಮಿಕ ಕಾರ್ಯಕ್ರಮವಿರುವ ಕಾರಣ ಅರಮನೆಗೆ** ● 6ನೇ ಪುಟಕ್ಕೆ

“ ಮೈಸೂರು ಅರಮನೆಯಲ್ಲಿ ರಾಜಮನೆತನದ ಖಾಸಗಿ ಕಾರ್ಯಕ್ರಮ ಇರುವ ಕಾರಣ ಅರಮನೆಗೆ ರಜೆ ಇದೆ ಎಂದು ಅನಾಮಧೇಯ ವ್ಯಕ್ತಿಗಳು ತಪ್ಪು ಮಾಹಿತಿ ನೀಡಿ ಪ್ರವಾಸಿಗರಿಗೆ ಮೋಸ ಮಾಡುತ್ತಿದ್ದಾರೆ. ಈ ಬಗ್ಗೆ ಹಿಂದಿನಿಂದಲೂ ನಾಲ್ವರು ಜಿಲ್ಲಾಧಿಕಾರಿಗಳು, ನಗರ ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ಆದರೆ ಪೋಲಿಸರು ಈ ತನಕ ಕ್ರಮ ಕೈಗೊಂಡಿಲ್ಲ. –ಟಿ.ಎಸ್.ಸುಬ್ರಹ್ಮಣ್ಯ, ಉಪ ನಿರ್ದೇಶಕ, ಮೈಸೂರು ಅರಮನೆ ಮಂಡಳಿ

ಆ.22ರಂದು ವಿಶೇಷ ಸ್ವಾತಿ ಪೂಜೆ




ಮೈಸೂರು,ಆ.19–ನಗರದ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಆ.22 ರಂದು ಮಂಗಳವಾರ 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತು ಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ವಿದ್ವಾನ್ ಶ್ರೀ.ಕೆ. ಯೋಗನರಸಿಂಹನ್ (ಮುರಳಿ) ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿ ಮೊಬೈಲ್ 9342188323, 7598832271 ಸಂಪರ್ಕಿಸಬಹುದು.

ಲೇಹ್‌ನಿಂದ ಪ್ಯಾಂಗಾಂಗ್ ಸರೋವರದವರೆಗೆ ರಾಹುಲ್ ಗಾಂಧಿ ಜಾಲಿ ಬೈಕ್ ರೈಡ್



ಲೇಹ್ (ಲಡಾಖ್): ಬೈಕ್ ರೈಡಿಂಗ್‌ಗೆ ಪ್ರಸಿದ್ಧಿಯಾಗಿರುವ ಲಡಾಖ್‌ನಲ್ಲಿ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಅವರು ಶನಿವಾರ ಬೈಕ್ ಓಡಿಸಿ ಗಮನ ಸೆಳೆದರು. ಲಡಾಖ್ ಪ್ರವಾಸದಲ್ಲಿರುವ ಕಾಂಗ್ರೆಸ್ ಸಂಸದ, ಕೆಟಿಎಂ 390 ಡ್ಯೂಕ್ ಬೈಕ್ ಅನ್ನು ಸವಾರಿ ಮಾಡಿದರು. ಇದರ ಚಿತ್ರಗಳನ್ನು ಸಾಮಾಜಿಕ ಜಾಲತಾಣವಾದ ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ.

ಲೇಹ್ ನಗರದಿಂದ ಪ್ಯಾಂಗಾಂಗ್ ಸರೋವರಕ್ಕೆ ರಾಹುಲ್ ಮತ್ತು ಅವರ ಸಂಗಡಿಗರು ಮೆಮೋರಿ ಲೈನ್‌ನಲ್ಲಿ ಬೈಕ್ ರೈಡ್ ನಡೆಸಿದರು. ತಮ್ಮ ಈ ಸವಾರಿಯ ಅನುಭವವನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಚಿತ್ರಗಳ ಸಮೇತ ಹಂಚಿಕೊಂಡಿದ್ದಾರೆ.

ನಮ್ಮ ತಂದೆ(ರಾಜೀವ್ ಗಾಂಧಿ) ಹೇಳುತ್ತಿದ್ದ ಹಾಗೆ, ಪ್ಯಾಂಗಾಂಗ್ ಸರೋವರ ವಿಶ್ವದ ಅತಿ ಸುಂದರ ತಾಣಗಳಲ್ಲಿ ಒಂದಾಗಿದೆ. ಇಲ್ಲಿ ಬೈಕ್ ಓಡಿಸಿದ ಅನುಭವ ಖುಷಿ ನೀಡಿತು ಎಂದು ಅವರು ಬರೆದುಕೊಂಡಿದ್ದಾರೆ.

ಪ್ಯಾಂಗಾಂಗ್ ಸರೋವರದಲ್ಲಿ ರಾಜೀವ್ ಗಾಂಧಿಗೆ ಪೂಜೆ: ಕಾಂಗ್ರೆಸ್ ಪಕ್ಷದ ಮೂಲಗಳ ಪ್ರಕಾರ, ರಾಹುಲ್ ಗಾಂಧಿ ಅವರು ಭಾನುವಾರ ತಮ್ಮ ತಂದೆ ದಿವಂಗತ ರಾಜೀವ್ ಗಾಂಧಿ ಅವರ ಜನ್ಮದಿನದ ಅಂಗವಾಗಿ ಪ್ಯಾಂಗಾಂಗ್ ಸರೋವರದಲ್ಲಿ ಪೂಜೆ ಸಲ್ಲಿಸಲಿದ್ದಾರೆ ಎಂದು ತಿಳಿದುಬಂದಿದೆ. ರಾಜೀವ್ ಗಾಂಧಿ ಅವರು ಲಡಾಖ್ ಪ್ರದೇಶವನ್ನು ಬಹುವಾಗಿ ಇಷ್ಟಪಟ್ಟ ಪ್ರದೇಶವಾಗಿತ್ತು. ಹೀಗಾಗಿ ಅವರು ಇಲ್ಲೇ ಪೂಜೆ ಸಲ್ಲಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಭಾರತ್ ಜೋಡೋ ಯಾತ್ರೆ ವೇಳೆ ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದ್ದ ರಾಹುಲ್ ಗಾಂಧಿ ಲಡಾಖ್‌ಗೆ ಬರಲು ಆಗಿರಲಿಲ್ಲ. ಬಳಿಕವೂ ಕಾಶ್ಮೀರಕ್ಕೆ ಮಾತ್ರ ಬಂದಿದ್ದರು. ಹೀಗಾಗಿ ಲಡಾಖ್‌ಗೆ ಪ್ರತ್ಯೇಕ ಭೇಟಿ ನೀಡಿದ್ದಾರೆ. ನಿನ್ನೆ (ಶುಕ್ರವಾರ) ಇಲ್ಲಿಗೆ ಬಂದಿಳಿದ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಅದ್ದೂರಿ ಸ್ವಾಗತ ನೀಡಿದ್ದರು. ಇನ್ನು ಆರು ದಿನಗಳ ಕಾಲ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ನಿನ್ನೆ, ಕಾಂಗ್ರೆಸ್ ಸಂಸದರು ಯುವ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ನಂತರ ಫುಟ್ಬಾಲ್ ಪಂದ್ಯವನ್ನು ವೀಕ್ಷಿಸಿದ್ದರು.

ಭಾನುವಾರ ಪ್ಯಾಂಗಾಂಗ್ ಸರೋವರದಲ್ಲಿ ನಡೆಯುವ ರಾಜೀವ್ ಗಾಂಧಿ ಜನ್ಮದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಳಿಕ, ಕಾರ್ಗಿಲ್‌ಗೆ ಭೇಟಿ ನೀಡಿ ಅಲ್ಲಿ ನಡೆಯುವ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಬಳಿಕ ಆರು ದಿನ ನಡೆಯುವ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಭಾರತ್ ಜೋಡೋ ಯಾತ್ರೆಯ ಸಂದರ್ಭದಲ್ಲೂ ರಾಹುಲ್ ಪಕ್ಷದ ಮುಖಂಡರೊಂದಿಗೆ ಬೈಕ್‌ಗಳಲ್ಲಿ ಸಂಚರಿಸಿದ್ದರು. ಈ ಹಿಂದೆ ತಮಗೂ ಕೂಡ ಬೈಕ್ ಕ್ರೇಜ್ ಇದ್ದು, ಭದ್ರತಾ ಕಾರಣಗಳಿಗಾಗಿ ಓಡಿಸಲು ಸಾಧ್ಯವಾಗುತ್ತಿಲ್ಲ ಎಂದಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಆ.19–ನಿರ್ವಹಣಾ ಕಾಮಗಾರಿ ನಿಮಿತ್ತ ಆ.21ರಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಮೆಲ್ಲಹಳ್ಳಿ, ಹಾರೋಹಳ್ಳಿ, ಹಳೆಕೆರಿಹುಂಡಿ, ಶಿವಪುರ, ಹಲಗಯ್ಯನಹುಂಡಿ, ಪಿಲ್ಲಹಳ್ಳಿ, ವರಕೂಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ವರುಣ, ದಂಡಿಕೆರೆ, ವಾಜಮಂಗಲ, ಮೊಸಂಬಾಯನಹಳ್ಳಿ, ಯಾಂದಳ್ಳಿ, ಸಜ್ಜೆಹುಂಡಿ, ಜಂತಗಳ್ಳಿ, ಮಹದೇಶ್ವರ ಬಡಾವಣೆ, ಇಂಡಸ್ ಬಡಾವಣೆ, ಭುಗತಗಳ್ಳಿ ಗೇಟ್, ಚಿಕ್ಕಹಳ್ಳಿ, ಚೋರನಹಳ್ಳಿ, ಭೂಗತಗಳ್ಳಿ, ನಾಡನಹಳ್ಳಿ, ಪೊಲೀಸ್ ಬಡಾವಣೆ, ನೇತಾಜಿನಗರ, ಐಪಿಎಸ್ ನಗರ, ಲಾಲ್ ಬಹದ್ದೂರು ಶಾಸ್ತ್ರೀ ನಗರ, ಎಸ್.ಎಂ.ಪಿ. ಡೆವಲಪರ್ಸ್, ಶೋಭ ಡೆವಲಪರ್ಸ್, ಯಶಸ್ವಿನಿ ಹಿಲ್ ವ್ಯೂ, ಜೆ.ಎಸ್.ಎಸ್. ಬಡಾವಣೆ, ವಸಂತನಗರ, ಸುಕದಾಯಿ ಬಡಾವಣೆ, ಶಾಂತವೇರಿ ಗೋಪಾಲಗೌಡನಗರ, ಸಪ್ತಮಾತೃಕ ಬಡಾವಣೆ, ಸಹೃದಯ ನಗರ, ಪ್ರಕೃತಿ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅನಿಯಮಿತ ನಿಲುಗಡೆಯಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಬಾಂಗಿಯಾ ಸಮಿತಿ ಅಧ್ಯಕ್ಷ ಯೂರೋಪ್‌ನಲ್ಲಿ ನಿಧನ

ಮೈಸೂರು, ಆ.19–ಮೈಸೂರಿನ ಬಾಂಗಿಯಾ ಸಮಿತಿ ಅಧ್ಯಕ್ಷರು ಹಾಗೂ ಗೋಕುಲಂ



ನಿವಾಸಿಯಾದ ಆಶಿಷ್ ಕುಮಾರ್ ದಾಸ್ (77) ಆ.15ರಂದು ಯೂರೋಪ್‌ನ ಪ್ರಾಗ್‌ನಲ್ಲಿ ನಿಧನರಾದರು. ಶ್ರೀಯುತರು ಕುಟುಂಬದವರೊಂದಿಗೆ ಯೂರೋಪ್ ಪ್ರವಾಸದಲ್ಲಿದ್ದರು. ಮೃತರು ಪತ್ನಿ ರಿಟಾ ದಾಸ್, ಪುತ್ರಿಯರಾದ ಸುಲಗ್ನ ಮತ್ತು ಸುನಯನ, ಅಳಿಯಂದಿರು, ನಾಲ್ವರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಇಬ್ಬರು ಪುತ್ರಿಯರು ವಿದೇಶದಲ್ಲಿ ನೆಲೆಸಿದ್ದಾರೆ. ಅಂತ್ಯಕ್ರಿಯೆ ಯೂರೋಪ್‌ನ ಪ್ರಾಗ್‌ನಲ್ಲಿ ಅದೇ ದಿನ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲ್‌ಹಾಜ್ ಸೈಯದ್ ಅಮೀರ್ ಅಹಮದ್



ಮೈಸೂರಿನ ಸೈಯ್ಯದ್ ಕೇಟರರ್ಸ್‌ನ ಪಾಲುದಾರರು ಹಾಗೂ ಬನ್ನಿಮಂಟಪ 'ಸಿ' ಬಡಾವಣೆ ನಿವಾಸಿ ಅಲ್‌ಹಾಜ್ ಸೈಯದ್ ಅಮೀರ್ ಅಹಮದ್ (82) ಶನಿವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ದಿವಂಗತ ಸೈಯ್ಯದ್ ಅಬ್ದುಲ್ ವಾಹಬ್ (ವಿಂಕೋ ಮ್ಯಾಚಸ್) ಅವರ ಪುತ್ರರಾದ ಇವರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಮೆಗ್ರೇಬ್ ನಮಾಜ್ ನಡೆದ ನಂತರ ಮಸೀದಿ ಇ ಫಿರ್ದೋಸ್‌ನಲ್ಲಿ ನಮಾಜ್ ಇ ಜನಾಜ ನಡೆಯಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಎಂ.ಎನ್. ಶಂಕರಿ



ಮೈಸೂರಿನ ಕುವೆಂಪುನಗರದ ಪಿ ಅಂಡ್ ಟಿ ಕಾಲೋನಿ ನಿವಾಸಿ ದಿವಂಗತ ಎಂ.ಆರ್.ನರಸಿಂಹಯ್ಯ ಅವರ ಪತ್ನಿ ಎಂ.ಎನ್. ಶಂಕರಿ (89) ಶುಕ್ರವಾರ ನಿಧನರಾದರು. ಮೃತರು, ಅಮೆರಿಕದಲ್ಲಿರುವ ಪುತ್ರಿಯರಾದ ಶ್ರೀಮತಿ ಅನ್ನಪೂರ್ಣ, ಶ್ರೀಮತಿ ಶಾಂತಾ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಶನಿವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೊಹಮ್ಮದ್ ಸಯೀದ್ ಉಲ್ಲಾ ಸಾಹೇಬ್



ಮೈಸೂರಿನ ಬನ್ನಿಮಂಟಪ ಹುಡ್ಕೋ 2ನೇ ಹಂತದ ನಿವಾಸಿ ಮೊಹಮ್ಮದ್ ಸಯೀದ್ ಉಲ್ಲಾ ಸಾಹೇಬ್ (39) ಶುಕ್ರವಾರದ ಪ್ರಾರ್ಥನೆ ತಯಾರಿಯ ಸಮಯದಲ್ಲಿ ಹೃದಯಾಘಾತದಿಂದ ನಿಧನರಾದರು. ಮೃತರು ತಾಯಿ, ಪತ್ನಿ, ಪುತ್ರ, ಪುತ್ರಿ, ಓರ್ವ ಸಹೋದರ, ಸಹೋದರಿ ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಎನ್.ಆರ್. ಮೊಹಲ್ಲಾದ ಮಸೀದಿ ಅಕ್ಸಾದಲ್ಲಿ ನಮಾಜ್–ಎ–ಜನಾಜ ನಡೆದ ನಂತರ ಮೈಸೂರಿನ ಟಿಪ್ಪು ಸರ್ಕಲ್‌ನ ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.8ರಲ್ಲಿ ಅಂತ್ಯಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆನಂದೂರು ಬಳಿ ಆಶ್ರಯ ಬಡಾವಣೆಗೆ ಕಾಯ್ದಿರಿಸಿದ್ದ ಸರ್ಕಾರಿ ಭೂಮಿ ಒತ್ತುವರಿ ತೆರವು



ಮೈಸೂರು, ಆ. 19(ಆರ್‌ಕೆ)– ಬಡ ನಿರಾಶ್ರಿತರಿಗಾಗಿ ಆಶ್ರಯ ವಸತಿ ಬಡಾವಣೆ ನಿರ್ಮಿಸಲು ಆನಂದೂರು ಬಳಿ ಮೀಸಲಾಗಿರಿಸಿದ್ದ ಸರ್ಕಾರಿ ಭೂಮಿ ಒತ್ತುವರಿ ತೆರವುಗೊಳಿಸಿರುವ ಮೈಸೂರು ತಾಲೂಕು ತಹಶೀಲ್ದಾರ್ ಮತ್ತು ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು, ಜಮೀನನ್ನು ಗ್ರಾಮ ಪಂಚಾಯಿತಿ ಸುಪರ್ದಿಗೆ ಪಡೆಸಿದ್ದಾರೆ.

ಮೈಸೂರು ತಾಲೂಕು ಇಲವಾಲ ಹೋಬಳಿ ಆನಂದೂರು ಗ್ರಾಮದ ಸರ್ವೆ ನಂಬರ್ 6ರಲ್ಲಿ 4 ಎಕರೆ ಸರ್ಕಾರಿ ಭೂಮಿಯನ್ನು 1996ರಲ್ಲಿ ಅಂದಿನ ಜಿಲ್ಲಾಧಿಕಾರಿಗಳು ಆಶ್ರಯ ಬಡಾವಣೆಗಾಗಿ ಮಂಜೂರು ಮಾಡಿ ಇಲವಾಲ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಲಾಗಿತ್ತು. ನಂತರ ತಾಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಅಧಿಕಾರಿಗಳು ಆ ಭೂಮಿ ರಕ್ಷಿಸಲಿಲ್ಲ ಹಾಗೂ ಅಲ್ಲಿ ವಸತಿ ಬಡಾವಣೆಯನ್ನೂ ನಿರ್ಮಿಸಲಿಲ್ಲ.

ಪರಿಣಾಮ ಅಲ್ಲಿನ ಸ್ಥಳೀಯರೊಬ್ಬರು ಒತ್ತುವರಿ ಮಾಡಿ 20 ಗುಂಟೆ ಭೂಮಿಯ ಸ್ವಾಧೀನಾನುಭವದಲ್ಲಿದ್ದರು. ಇಲವಾಲ ಗ್ರಾಮ ಪಂಚಾಯಿತಿಯಲ್ಲಿ ಇತ್ತೀಚೆಗೆ ರೈತ ಸಭೆ ನಡೆದಾಗ ಹಲವರು ಸದರಿ ಸರ್ಕಾರಿ ಭೂಮಿಯಲ್ಲಿ ವಸತಿ ಬಡಾವಣೆ ಮಾಡಿ ಸೂರಿಲ್ಲದವರಿಗೆ ನಿವೇಶನ ಮಂಜೂರು ಮಾಡದ ಕಾರಣ, ಖಾಸಗಿ ವ್ಯಕ್ತಿ ಅತಿಕ್ರಮ ಪ್ರವೇಶ ಮಾಡಿದ್ದಾರೆ ಎಂದು ಆರೋಪಿಸಿದ್ದರಲ್ಲದೆ, ಒತ್ತುವರಿ ತೆರವುಗೊಳಿಸದಿದ್ದರೆ ಗ್ರಾಮ ಪಂಚಾಯಿತಿ ಮುಂದೆ ಪ್ರತಿಭಟನೆ ಮಾಡುವುದಾಗಿಯೂ ಎಚ್ಚರಿಕೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ 8ರಿಂದ ಮಧ್ಯಾಹ್ನ 1.30 ಗಂಟೆವರೆಗೆ 3 ಜೆಸಿಬಿಯಂದಿಗೆ ಕಾರ್ಯಾಚರಣೆ ನಡೆಸಿದ ತಹಸೀಲ್ದಾರ್ ಬಿ.ಎನ್. ಗಿರೀಶ್, ಮೈಸೂರು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಗಿರೀಶ್, ಉಪ ತಹಸೀಲ್ದಾರ್ ಕುಬೇರ, ರೆವಿನ್ಯೂ ಇನ್ಸ್‌ಪೆಕ್ಟರ್ ಶಿವಕುಮಾರ್, ಭೂದಾಖಲೆಗಳ ಸಹಾಯಕ ನಿರ್ದೇಶಕ ಚಿಕ್ಕಣ್ಣ ಹಾಗೂ ಸಿಬ್ಬಂದಿ ಒತ್ತುವರಿಯಾಗಿದ್ದ 20 ಗುಂಟೆ ಭೂಮಿಯನ್ನು ತೆರವುಗೊಳಿಸಿದರು. ಬೆಳೆದು ನಿಂತಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಂಡು ರಕ್ಷಿಸಿದ 20 ಗುಂಟೆ ಸೇರಿ 4 ಎಕರೆ ಸರ್ಕಾರಿ ಭೂಮಿಯ ಗಡಿ ಗುರ್ತಿಸಿ ಗುರುತು ಮಾಡಿಸಿದ ತಹಸೀಲ್ದಾರ್ ಬಿ.ಎನ್. ಗಿರೀಶ್, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಗಿರೀಶ್ ಅವರಿಗೆ ಒಪ್ಪಿಸಿದ್ದಾರೆ.

ಸರ್ಕಾರಿ ಕೆರೆ, ಒಣಿ, ಕಟ್ಟೆ, ಸ್ಮಶಾನ, ಭೂಮಿ ಒತ್ತುವರಿ ಮಾಡಿಕೊಂಡಿದ್ದರೆ ತಾವಾಗಿಯೇ ತೆರವುಗೊಳಿಸಬೇಕು. ತಪ್ಪಿದರೆ ಸರ್ಕಾರಿ ಅಧಿಸೂಚನೆಯನ್ವಯ ಜಿಲ್ಲಾಡಳಿತದ ವತಿಯಿಂದ ತೆರವುಗೊಳಿಸಬೇಕಾಗುತ್ತದೆ ಎಂದು ತಹಸೀಲ್ದಾರ್ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದ್ದಾರೆ.

ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ಮೈಸೂರು,ಆ.19–2023–24ನೇ ಸಾಲಿನ ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡಗಳ ಉಪಯೋಜನೆ ಅಡಿಯಲ್ಲಿ 2022ನೇ ವರ್ಷದಲ್ಲಿನ (01.01.2022ರಿಂದ 31.12.2022) ಅಂತರ ರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಿಗೆ ಪ್ರೋತ್ಸಾಹ ಧನ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕರ್ನಾಟಕ ಕ್ರೀಡಾಪಟುಗಳು ತಮ್ಮ ವಿವರಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿಮಾಡಿ ನಜರ್‌ಬಾದ್‌ನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಗೆ ಸೆ.6ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ದ್ವಿತೀಯ ದರ್ಜೆ ಸಹಾಯಕರನ್ನು ಅಥವಾ ಕಚೇರಿ ದೂ.ಸಂ: 0821–2564179 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಜಿಮ್ ಸ್ಥಾಪಿಸಲು ಸಹಾಯ ಧನಕ್ಕೆ ಅರ್ಜಿ ಆಹ್ವಾನ

ಮೈಸೂರು,ಆ.19– 2023–24ನೇ ಸಾಲಿನ ಪರಿಶಿಷ್ಟ ಜಾತಿ ಉಪಯೋಜನೆ ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಕ್ರೀಡಾಪಟುಗಳಿಗೆ ಸ್ವಯಂ ಉದ್ಯೋಗ ಹೊಂದಲು ಜಿಮ್ ಸ್ಥಾಪನೆಗಾಗಿ ಸಹಾಯ ಧನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ, ಪಂಗಡದ ಕರ್ನಾಟಕ ಕ್ರೀಡಾಪಟುಗಳು ತಮ್ಮ ವಿವರಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿಮಾಡಿ ನಜರ್‌ಬಾದ್‌ನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸೆ.6ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ನಜರ್‌ಬಾದ್‌ನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿನ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ದ್ವಿತೀಯ ದರ್ಜೆ ಸಹಾಯಕಿ ಕಾವ್ಯ ಅಥವಾ ಕಚೇರಿ ದೂ.ಸಂ: 0821–2564179 ಸಂಪರ್ಕಿಸಬಹುದು.



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ನಿವೃತ್ತ ನಿರ್ದೇಶಕ ಎಂ.ಕೆ.ಕೆಂಪೇಗೌಡ ಅವರು ರಚಿಸಿರುವ 'ಗ್ರಾಮ ಸುರಾಜ್ಯ' ಕೃತಿಯ ಎರಡನೇ ಮುದ್ರಣದ ಆವೃತ್ತಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಐಟಿಬಿಟಿ ಸಚಿವರಾದ ಪ್ರಿಯಾಂಕ್ ಖರ್ಗೆ ಬಿಡುಗಡೆ ಮಾಡಿದರು. ಸಮಾರಂಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್, ಪಂಚಾಯತ್‌ರಾಜ್ ಆಯುಕ್ತೆ ಪ್ರಿಯಾಂಕಾ ಮೇರಿ ಫ್ರಾನ್ಸಿಸ್, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಂಸ್ಥೆಯ ನಿರ್ದೇಶಕಿ ಕೆ.ಲಕ್ಷ್ಮಿಪ್ರಿಯಾ, ಕೇರಳ ರಾಜ್ಯದ ನಿವೃತ್ತ ಮುಖ್ಯ ಕಾರ್ಯದರ್ಶಿ ಎಸ್.ಎಂ.ವಿಜಯಾನಂದ್, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಪ್ರಮೋದ್ ಹೆಗಡೆ, ತಜ್ಞ ಸದಸ್ಯರಾದ ಡಿ.ಆರ್. ಪಾಟೀಲ್, ಸಿ.ನಾರಾಯಣಸ್ವಾಮಿ, ವಿ.ವೈ.ಘೋರ್ಪಡೆ, ಎಂ.ಕೆ.ಕೆಂಪೇಗೌಡ, ಪ್ರಕಾಶಕ ಪ್ರಕಾಶ್ ಚಿಕ್ಕಪಾಳ್ಯ ಉಪಸ್ಥಿತರಿದ್ದಾರೆ.

ವಿಜ್ಞಾನವೆಂದರೆ ಅನುಭವ; ಪ್ರತಿ ವಿಷಯದಲ್ಲೂ ವಿಜ್ಞಾನವು ಅಡಕ

ವಿದ್ಯಾಭಾರತಿ, ಕರ್ನಾಟಕ, ಮೈಸೂರು ಜಿಲ್ಲಾ ಪ್ರಮುಖರಾದ ರಂಗಣ್ಣ



ಮೈಸೂರು, ಆ. 19– ಮೈಸೂರಿನ ವಿದ್ಯಾ ಭಾರತಿ, ಕರ್ನಾಟಕ ಬೋಗಾದಿಯಲ್ಲಿರುವ ಹರಿವಿದ್ಯಾಲಯದಲ್ಲಿ ಜಿಲ್ಲಾ ಗಣಿತ ಮತ್ತು ವಿಜ್ಞಾನ ಮೇಳ ಆಯೋಜಿಸಲಾಗಿತ್ತು. ವಿಜ್ಞಾನವೆಂದರೆ ಕೇವಲ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರವಲ್ಲ. ವಿಜ್ಞಾನವೆಂದರೆ ಅನುಭವ. ವಿಜ್ಞಾನವು ನಿತ್ಯ ಜೀವನದ ಚಟುವಟಿಕೆಗಳಲ್ಲಿ ಅಡಕವಾಗಿರುತ್ತದೆ ಎಂದು ವಿದ್ಯಾ ಭಾರತಿ, ಕರ್ನಾಟಕ, ಮೈಸೂರು ಜಿಲ್ಲಾ ಪ್ರಮುಖರಾದ ರಂಗಣ್ಣ ತಿಳಿಸಿದರು.

ವಿದ್ಯಾರ್ಥಿಗಳು ಪ್ರಶ್ನಿಸುವ ಮನೋಭಾವ, ವೈಜ್ಞಾನಿಕ ಚಿಂತನೆ, ಯೋಚನಾ ಲಹರಿ, ಗ್ರಹಿಕಾ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು ಎಂದು ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಪ್ರಮುಖರಾದ ಶ್ರೀಪತಿ ತಿಳಿಸಿದರು. ಈ ಸಂದರ್ಭದಲ್ಲಿ ವಿದ್ಯಾಭಾರತಿ, ಕರ್ನಾಟಕ, ಮೈಸೂರು ಜಿಲ್ಲೆಯ ಉಪಾಧ್ಯಕ್ಷ ರಘುವೀರ್, ಹರಿ ವಿದ್ಯಾಲಯ ಸಂಸ್ಥೆ ಸದಸ್ಯ ಎಚ್.ಆರ್.ಭಗವಾನ್, ಹರಿ ವಿದ್ಯಾಲಯದ ಪ್ರಾಂಶುಪಾಲ ಡಾ.ಎನ್. ಭಾರತೀಶಂಕರ್, ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರು ಉಪಸ್ಥಿತರಿದ್ದರು. ವಿಜ್ಞಾನ ಮೇಳದಲ್ಲಿ ಮೈಸೂರಿನ ಸುತ್ತಮುತ್ತಲಿನ ಶಾಲೆಯ ಸುಮಾರು 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.8.2023 ಭಾನುವಾರ, ಮಳೆ ನಕ್ಷತ್ರ: ಮಖ 17.08.2023ರಿಂದ 30.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಮೂಲ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಮದರ್‌ಹುಡ್ ಆಸ್ಪತ್ರೆ :** ಸ್ತನ್ಯಪಾನದ ಬಗ್ಗೆ ಅರಿವು ಮೂಡಿಸಲು ವಾಕಥಾನ್, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 7ಕ್ಕೆ.

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ–2023, ಸ್ಥಳ: ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ.

■ **ಮೈಸೂರು ಸೈನ್ಸ್ ಫೌಂಡೇಷನ್ :** ಶೂನ್ಯ ನೆರಳು ದಿನ –ಕಾರ್ಯಾಗಾರ, ಸ್ಥಳ: ಜ್ಞಾನೋದಯ ಪಿಯು ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.

■ **ತಿಬ್ಬಾಸ್ ಸಮೂಹ ಪ್ರತಿಷ್ಠಾನ :** ನ್ಯಾಷನಲ್ ಐಕಾನ್ ಮಾಡೆಲ್ ಹಂಟ್ ಸೀಸನ್–3 ಫ್ಯಾಷನ್ ಶೋ ಹಾಗೂ ರಾಷ್ಟ್ರೀಯ ಮಾನ್ಯತಾ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಜ್ಯೋತಿಷಿ ಕುಮಾರ್ ಗುರೂಜಿ, ಶೋ ನಿರ್ದೇಶಕ : ಡಿ.ಸಿ. ನಾಗೇಶ್, ಶೋ ಅಂಬಾಸಡರ್ ಡಾ. ಯದುಗಿರಿ, ಗೌರವ ಅತಿಥಿಗಳು : ರಮೇಶ್, ಸ್ಥಳ:ಕಿಂಗ್ಸ್ ಎಲ್ ಡೆನ್ ರೆಸಾರ್ಟ್, ಬೆಳಗ್ಗೆ 10ಕ್ಕೆ.

■ **ಪಡುವಾರಹಳ್ಳಿ ಸ್ನೇಹ ಬಳಗ:** ಡಿ.ದೇವರಾಜ ಅರಸು ಜಯಂತಿ, ಮುಖ್ಯ ಅತಿಥಿಗಳು: ಬಿಜೆಪಿ ಮುಖಂಡ ಎಲ್.ಚೌಡಪ್ಪ, ಕೆ.ಉಮಾಶಂಕರ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ಪಾಲಿಕೆ ಮಾಜಿ ಸದಸ್ಯ ಎಂ.ಚಿಕ್ಕವೆಂಕಟ, ಎನ್.ಬೆಟ್ಟೇಗೌಡ, ಎಸ್.ಬಿ.ಶಿವು, ಸುಂದರ್‌ಕುಮಾರ್, ಸ್ಥಳ: ಶ್ರೀ ಮಹರ್ಷಿ ವಾಲ್ಮೀಕಿ ನಾಮಫಲಕ, ಪಡುವಾರಹಳ್ಳಿ, ಬೆಳಗ್ಗೆ 10.30ಕ್ಕೆ.

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ :** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಸಿ.ಎಸ್.ಶ್ರೀನಿವಾಸಮೂರ್ತಿ ಆಚಾರ್ಯ ಅವರಿಂದ ಉತ್ತರಕಾಂಡ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಸಂಜೆ 6ರಿಂದ 7ರವರೆಗೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಮಹಾಮೇಧಾನಂದ ಅವರಿಂದ ಆಧ್ಯಾತ್ಮಿಕ ಸಾಧನೆಯಾಗಿ ಕರ್ಮಯೋಗ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಸರ್ವೇಶ್ವರ ನೃತ್ಯ ಕಲಾಮಂದಿರ, ಪಂಕಜ ಪ್ರದರ್ಶಕ ಕಲೆಗಳ ಕೇಂದ್ರ, ಮೈಸೂರು:** ಕು.ನಿನಾದ ಎಸ್.ಹೆಗ್ಡೆ ಭರತನಾಟ್ಯ ರಂಗ ಪ್ರವೇಶ, ಸಾನ್ನಿಧ್ಯ: ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಘನ ಉಪಸ್ಥಿತರು: ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ನ್ಯಾಯಮೂರ್ತಿ ಎಸ್.ರಾಚಯ್ಯ, ಮುಖ್ಯ ಅತಿಥಿಗಳು: ಮಾಜಿ ಶಾಸಕ ಆರಗ ಜ್ಞಾನೇಂದ್ರ, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಸಂಸದ ಪ್ರತಾಪ್‌ಸಿಂಹ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ, ಉದ್ಘಾಟನೆ: ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಮಾತಾ ಜಿ.ಮಂಜಮ್ಮ ಜೋಗತಿ, ಸನ್ಮಾನಿತರು: ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಚಂಬಿ ಪುರಾಣಿಕ್, ಶ್ರೀಮತಿ ಸೀತಾ ಕೋಟೆ, ಲಹರಿ ಮ್ಯೂಸಿಕ್ ನಿರ್ದೇಶಕ ಲಹರಿ ವೇಲು, ಉಪಸ್ಥಿತರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಸ್ಥಳ: ಕಲಾಮಂದಿರ, ಸಂಜೆ 5.30ಕ್ಕೆ.

■ **ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರ 36ನೇ ಚಾತುರ್ಮಾಸ್ಯ ಸಮಿತಿ :** ಬೃಹತ್ ಉಚಿತ ಆಯುರ್ವೇದ ತಪಾಸಣಾ ಶಿಬಿರ, ಸಾನ್ನಿಧ್ಯ : ಶ್ರೀ ಪೇಜಾವರ ಮಠ, ಉಡುಪಿ ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು, ಶ್ರೀ ರಾಮಕೃಷ್ಣ ಆಶ್ರಮದ ಸಂಚಾಲಕ ಶ್ರೀ ಮಹಾಮೇಧಾನಂದ ಸ್ವಾಮೀಜಿ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಅತಿಥಿಗಳು : ಡಾ. ರಘುರಾಮ್ ಭಟ್, ಆದಿಚುಂಚನಗಿರಿ ವಿವಿ ಉಪಕುಲಪತಿ ಡಾ. ಎಂ.ಎ. ಶೇಖರ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಡಾ. ರಾಧಾಕೃಷ್ಣ ರಾಮರಾವ್, ಡಾ. ಬಿ. ಗುರುಬಸವರಾಜ್, ಡಾ. ಲಕ್ಷ್ಮೀನಾರಾಯಣ ಶೆಣೈ, ಶ್ರೀಮತಿ ರಮ್ಯ ಅಶೋಕ್, ಡಾ. ರವಿಚಂದ್ರ ಕುಲಕರ್ಣಿ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.

■ **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಮೈಸೂರು ಪಶ್ಚಿಮ :** 24ನೇ ಶ್ರಾವಣ ಯುವ ಸಂಗೀತೋತ್ಸವ, ವೀಣಾ ವಿದುಷಿ ಜಯಮ್ಮ ಸ್ಮಾರಕ ಶಾಸ್ತ್ರೀಯ ಸಂಗೀತ ಸ್ಪರ್ಧೆಗಳ ಬಹುಮಾನ ವಿತರಣೆ, ಮುಖ್ಯ ಅತಿಥಿಗಳು: ಕರ್ನಾಟಕ ಬ್ಯಾಂಕ್ ಸಹಾಯಕ ಪ್ರಧಾನ ವ್ಯವಸ್ಥಾಪಕ ರಮೇಶ್‌ರಾವ್, ಕರ್ನಾಟಕ ಶಾಸ್ತ್ರೀಯ ವಾದ್ಯ ಸಂಗೀತ, ವಿದುಷಿ ವೈ.ಜಿ.ಶ್ರೀಲತಾ–ವೀಣೆ, ವಿದ್ವಾನ್ ನಿಕ್ಷಿತ್ ಪುತ್ತೂರ್–ಮೃದಂಗ, ವಿದ್ವಾನ್ ಬಿ. ರಾಜಶೇಖರ್–ಮೃಚ್ಚಂಗಿ, ಸ್ಥಳ: ರೋಟರಿ ವೆಸ್ಟ್ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಎದುರು, ಸಂಜೆ 6ಕ್ಕೆ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು ನಿಸರ್ಗ, ಲಯನ್ಸ್ ಕ್ಲಬ್ ಆಫ್ ಮೈಸೂರು ಮಯೂರಿ, ಮೈಸೂರು ಡಿಸ್ಟ್ರಿಕ್ಟ್ ಡೆಫ್ ಅಸೋಸಿಯೇಷನ್:** ಉಚಿತ ಅಕ್ಯೂಪ್ರೆಶರ್, ಸುಜೋಕ್ ಮ್ಯಾಗ್ನೆಟ್, ವೈಬ್ರೇಷನ್ ಥೆರಪಿ ಚಿಕಿತ್ಸೆ, ಸ್ಥಳ: ರಾಹುಲ್ ಕನ್ವೆನ್ಷನ್ ಹಾಲ್, ವಿಶ್ವೇಶ್ವರನಗರ, ಜೆ.ಪಿ.ನಗರ, ಬೆಳಗ್ಗೆ 8 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ರಾಘವೇಂದ್ರ ವಿ.ಕಾಂತನವರ್, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಶ್ರೀರಾಂಭಟ್, 9.05 ವಸುದೈವ ಕುಟುಂಬಕಂ– ಭಾರತ ಜಿ20 ಶೃಂಗಸಭೆ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.40 ನಮ್ಮ ಆರೋಗ್ಯ–ಪೆರಿಫೆರಲ್ ನ್ಯೂರೋಪತಿ ಅಂದರೆ ಬಾಹ್ಯ ನರರೋಗ ಸಮಸ್ಯೆಗಳು ಮತ್ತು ಚಿಕಿತ್ಸೆ ಕುರಿತು ಡಾ.ಪಿ.ಶಾಸ್ತಾರ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ರಂಗರಾವ್ ಸ್ಮಾರಕ ವಿಕಲ ಚೇತನರ ಶಾಲೆಯ ಮಕ್ಕಳಿಂದ ಕಾರ್ಯಕ್ರಮ, 10.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ–ಕೆ.ಬಿ. ಮೀನಾ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಬಾಂಬೆ ಜಯಶ್ರೀ, ಮಾಧವಗುಡಿ, 12.45 ಜನಪದ ಸಂಗೀತ–ಯರಗನಹಳ್ಳಿ ಸಣ್ಣಮ್ಮ ಮತ್ತು ಸಂಗಡಿಗರು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಕೆ.ಎಸ್.ಸುರೇಖ, ವೃಂದಗಾನ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪಿ.ಸಿ.ಮಳಿಮಠ ಮತ್ತು ಕೆ.ಬಿ. ಮೀನಾ, 3.15 ಸ್ವರಾಜ್–ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಶಲ್ಯಾವಸಾನ, ಪ್ರಸ್ತುತಿ–ಬೆಳ್ತಂಗಡಿ ತಾಲೂಕು ವೇಣೂರಿನ ಮಹಾಲಿಂಗೇಶ್ವರ ಯಕ್ಷಗಾನ ಸಂಘದ ಸದಸ್ಯರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಪಶುರಂಗ–ಮಂದೆ ಕುರಿ ಸಾಕಾಣೀಕೆ ಕುರಿತು ರಾಜಶೇಖರ ಅವರೊಂದಿಗೆ ಸಂದರ್ಶನ, 8.00 ವಿಶಿಷ್ಟ ವ್ಯಕ್ತಿ–ವಿಶೇಷ ಯತ್ನ–ಬಾನುಲಿ ಸರಣಿ ಬಾನುಲಿ ಸರಣಿ ದೇಸಿ ಹಸುಗಳ ಗವ್ಯೋದ್ಯಮಿ, ಕೆ.ಆರ್.ನಗರ ತಾಲೂಕು ಹಂಪಾಪುರದ ಸ್ವರೂಪ ರಾಣಿ ಅವರೊಂದಿಗೆ ಅವರೊಂದಿಗೆ ಸಂವಾದ. ಭಾಗವಹಿಸುವವರು ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ನಫಿಸ್ ಅಹಮದ್–ತಬಲಾ, ಪಂಡಿತ್ ಕುಬೇರ್ ನಾಥ್ ಮಿಶ್ರೆ – ತಬಲಾ

■ **ಸನಾತನ ಸಭಾ :** ಸಂಜೆ 6ಕ್ಕೆ ರಾಮಾಯಣ ಪ್ರವಚನ ಮಾಲಿಕೆ ಮತ್ತು ಉದ್ಘಾಟನೆ, ಅಧ್ಯಕ್ಷತೆ: ಸನಾತನ ಸಭಾ ಅಧ್ಯಕ್ಷ ಎನ್.ಎಸ್. ದ್ವಾರಕಾನಾಥ್, ಉದ್ಘಾಟನೆ : ಉದ್ಯಮಿ ಡಾ. ಎಂ. ಜಗನ್ನಾಥ ಶೆಣೈ, ಮುಖ್ಯ ಅತಿಥಿಗಳು : ಹಿರಿಯ ಸಾಹಿತಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಉಪಸ್ಥಿತರು : ಸನಾತನ ಸಭಾ ಉಪಾಧ್ಯಕ್ಷ ಪ್ರೊ. ಎಸ್. ರಾಮಪ್ರಸಾದ್, ಸಂಜೆ 6.30 ರಿಂದ ವಿಮರ್ಶಕ, ಚಿಂತಕ ವಿದ್ವಾನ್ ಗ.ನಾ. ಭಟ್ಟ ಅವರಿಂದ ಶ್ರೀ ಮದ್ವಾಲ್ಮೀಕಿ ರಾಮಾಯಣದ ಕಿಷ್ಕಿಂದಕಾಂಡ ಕುರಿತು ಪ್ರವಚನ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಕೆ.ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ.

■ **ನಮೋ ಯೋಗ ಭವನ, ಮೈಸೂರು ಯೋಗ ಅಸೋಸಿಯೇಷನ್ :** ಯೋಗ ನಮನ, ಅಭಿನಂದನಾ ಕಾರ್ಯಕ್ರಮ, ಅಧ್ಯಕ್ಷತೆ : ಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್, ಪ್ರಾಸ್ತಾವಿಕ ನುಡಿ : ಯೋಗ ಪ್ರಕಾಶ್, ಉದ್ಘಾಟನೆ : ಆಧ್ಯಾತ್ಮ ಚಿಂತಕರಾದ ಡಾ.ಕೆ. ಲೀಲಾ ಪ್ರಕಾಶ್, ಮುಖ್ಯ ಅತಿಥಿಗಳು : ಡಾ. ಶೀಲಾ ಶ್ರೀಧರ್, ಸಾಂಬುಮೂರ್ತಿ, ಸ್ಥಳ: ನಮೋ ಯೋಗ ಭವನ, ರಾಮಾನುಜ ರಸ್ತೆ, ಸಂಜೆ 6ಕ್ಕೆ.

■ **ಅರಸು ಮಂಡಳಿ ಸಂಘ :** ವಿಶೇಷ ಮಹಾಸಭೆ, ಸ್ಥಳ: ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ತ್ಯಾಗರಾಜ ರಸ್ತೆ, ಬೆಳಗ್ಗೆ 10ಕ್ಕೆ

■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಬಿಲ್ಡರ್ಸ್ ಚಾರಿಟೆಬಲ್ ಟ್ರಸ್ಟ್, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ, ಮೈಸೂರು ಜಿಲ್ಲಾ ಘಟಕ :** 77 ಮಾಜಿ ಸೈನಿಕರು ಹಾಗೂ ವೀರ ನಾರಿಯರಿಗೆ ಸ್ವಾತಂತ್ರ್ಯೋತ್ಸವದ ಅಂಗವಾಗಿ ಅಭಿನಂದನಾ ಕಾರ್ಯಕ್ರಮ, ಉದ್ಘಾಟನೆ : ಡಾ. ಎಂ. ಮಹೇಶ್ ಶೆಣೈ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಡಾ.ಎಂ.ಬಸವರಾಜು, ರಾಘವೇಂದ್ರ, ಚನ್ನಪ್ಪಾಜಿ, ನಾಗರಾಜ ವಿ.ಭೈರಿ, ಡಿ.ಪಿ.ಚಿಕ್ಕಣ್ಣ, ಸ್ಥಳ: ಎಂಬಿಸಿಟಿ ಆಡಿಟೋರಿಯಂ, ಅಕ್ಕಮಹಾದೇವಿ ರಸ್ತೆ, ಸಂಜೆ 4.30ಕ್ಕೆ.

■ **ಅಖಿಲ ನಾಮಧಾರಿಗೌಡ ಸಂಘ :** ಬದುಕಿನ ನಡಿಗೆ ಜ್ಞಾನದ ಕಡೆಗೆ ಕಾರ್ಯಕ್ರಮ, ಅಧ್ಯಕ್ಷತೆ : ಸಂಘದ ರಾಜ್ಯಾಧ್ಯಕ್ಷ ಪಿ.ಚನ್ನರೇವಣ್ಣ, ಅನುಭಾವ : ಸಂಸ್ಕೃತಿ ಚಿಂತಕ ಶಂಕರ ದೇವನೂರು, ಗಾಯನ : ಜಾನಪದ ಗಾಯಕ ಅಮ್ಮ ರಾಮಚಂದ್ರಜಿ, ಸ್ಥಳ: ವಿದ್ಯಾರ್ಥಿ ನಿಲಯ, ಸಂಜೆ 4.30ಕ್ಕೆ.

■ **ರಂಗಾಯಣ:** ರಂಗಾಯಣ ಕಲಾವಿದರಿಂದ ಪಿ. ಲಂಕೇಶ್ ಅವರ 'ಮುಟ್ಟಿಸಿಕೊಂಡವನು' ನಾಟಕ ಪ್ರದರ್ಶನ, ಸಂಗೀತ ವಿನ್ಯಾಸ: ಪ್ರಶಾಂತ್ ಹಿರೇಮಠ, ರಂಗವಿನ್ಯಾಸ: ಹೆಚ್.ಕೆ.ದ್ವಾರಕಾನಾಥ್, ಬೆಳಕಿನ ವಿನ್ಯಾಸ: ಮಹೇಶ್ ಕಲ್ಲತ್ತಿ, ರಂಗರೂಪ, ನಿರ್ದೇಶನ: ಕೆ.ಆರ್.ನಂದಿನಿ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ನಟನ ರಂಗಶಾಲೆ :** ವಾರಾಂತ್ಯ ರಂಗ ಪ್ರದರ್ಶನ, ಪ್ಲೇಯರ್ಸ್ ಥಿಯೇಟರ್ ಕಲಾವಿದರಿಂದ ಕತ್ತಲೆ ದಾರಿ ದೂರ ನಾಟಕ ಪ್ರದರ್ಶನ, ನಿರ್ದೇಶನ : ಬಿ.ಎಸ್. ಶ್ರೀನಿಧಿ, ಸ್ಥಳ: ನಟನ ರಂಗ ಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಸುತ್ತೂರು ಶ್ರೀ ಕ್ಷೇತ್ರ, ನಂಜನಗೂಡು ತಾ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ ಕುರಿತು ಪ್ರವಚನ, ವಿದಾನ್ ಕೃ.ರಾಮಚಂದ್ರ ಅವರಿಂದ ವಾಚನ, ಸ್ಥಳ: ಸುತ್ತೂರು.

ಮೆಗಾ ರಕ್ತದಾನ ಅಭಿಯಾನದಲ್ಲಿ 950 ಯೂನಿಟ್ ರಕ್ತ ಸಂಗ್ರಹ



ಮೈಸೂರು,ಆ.19–77ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ನಾಲ್ಕು ದಿನಗಳ ಮೆಗಾ ರಕ್ತದಾನ ಅಭಿಯಾನದಲ್ಲಿ 950 ಯೂನಿಟ್ ರಕ್ತ ಸಂಗ್ರಹವಾಗಿದೆ.

ರೋಟರಿ ಮೈಸೂರು, ರೋಟರಿ ಕ್ಲಬ್ ಆಫ್ ಮೈಸೂರು ಸೌತ್–ಈಸ್ಟ್, ರೋಟರಿ ಕ್ಲಬ್ ಆಫ್ ವಿಜಯನಗರ, ಬ್ಲಡ್ ಆನ್ ಕಾಲ್ ಕ್ಲಬ್ ಮತ್ತು ಜಿಎಸ್‌ಎಸ್ ಯೋಗ ಸಂಸ್ಥೆ ಸೇರಿದಂತೆ 19 ಸಂಸ್ಥೆಗಳ ಸಹಕಾರದೊಂದಿಗೆ ನಗರದ ವಿವಿಧೆಡೆ ಆಯೋಜಿಸಿದ್ದ ನಾಲ್ಕು ದಿನಗಳ ಮೆಗಾ ರಕ್ತದಾನ ಅಭಿಯಾನ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಸ್ವಯಂಪ್ರೇರಣೆಯಿಂದ ದಾನಿಗಳು ರಕ್ತದಾನ ಮಾಡಿದ್ದಾರೆ.

ಆ.17ರಿಂದ 19ರವರೆಗೂ ನಗರದ ಇನ್‌ಫೋಸಿಸ್, ಗಂಗೋತ್ರಿಯ ಪತ್ರಿಕೋದ್ಯಮ ವಿಭಾಗ ಮತ್ತು ಎಟಿಎಂಇ ಕಾಲೇಜಿನಲ್ಲಿ ನಡೆದ ಶಿಬಿರಗಳು ಉತ್ತಮ ಯಶಸ್ಸು ಕಂಡವು. ರೋಟರಿ ಮೈಸೂರು ಸೆಂಟರ್, ಎನ್‌ಪಿಎಸ್ ಇಂಟರ್‌ನ್ಯಾಷನಲ್ ಸ್ಕೂಲ್, ಯೂತ್ ಹಾಸ್ಟೆಲ್ ಗೋಕುಲಂ, ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನ, ಜಿಎಸ್‌ಎಸ್ ಆಫೀಸ್, ಬಿಲ್ಡರ್ಸ್ ಅಸೋಸಿಯೇಷನ್, ಸಿಪಿಸಿ ಪಾಲಿಟೆಕ್ನಿಕ್, ಕೆಎಸ್‌ಒಯು ಮತ್ತು ಎಸ್‌ಡಿಎಂ ಐಎಂಡಿಯಲ್ಲಿ ಸೇರಿದಂತೆ ಹನ್ನೆರಡು ಸ್ಥಳಗಳಲ್ಲಿ ದಾನಿಗಳು ರಕ್ತದಾನ ಮಾಡಿದರು. ಆ.19ರಂದು ಅಭಿಯಾನ ಮುಕ್ತಾಯಗೊಂಡಿತು.

ಈ ಮೆಗಾ ಅಭಿಯಾನದಿಂದ ಒಟ್ಟು 950 ಯೂನಿಟ್ ರಕ್ತ ಸಂಗ್ರಹಿಸಲಾಗಿದೆ.

ಮೂರು ಜಿಲ್ಲೆಗಳ ಆರು ಬ್ಲಡ್ ಬ್ಯಾಂಕ್‌ಗಳು ರಕ್ತ ಸಂಗ್ರಹಿಸಿದವು. ಎನ್‌ಪಿಎಸ್ ಶಾಲೆಯ ಶಿಬಿರದ ವೈಶಿಷ್ಟ್ಯವೆಂದರೆ ಅದು ಸಂಪೂರ್ಣವಾಗಿ ಮಹಿಳೆಯರೇ ನಡೆಸಿದ ಶಿಬಿರವಾಗಿದ್ದು, ಮೈಸೂರಿನ ಇನ್ನರ್ ವ್ಹೀಲ್ ಕ್ಲಬ್‌ನ ಮಹಿಳೆಯರು ಮತ್ತು ಎನ್‌ಪಿಎಸ್ ಶಾಲೆಯ ಶಿಕ್ಷಕಿಯರು ಮುನ್ನಡೆಸಿದರು.

ನಗರದ 12 ಸ್ಥಳಗಳಲ್ಲಿ ನಡೆದ ಅಭಿಯಾನವನ್ನು ನಗರ ಗಣ್ಯರು ಉದ್ಘಾಟಿಸಿದರು. ಅದರಂತೆ ರಕ್ತ ಶಿಬಿರದ ಆತಿಥ್ಯ ವಹಿಸುವ ಸಂಸ್ಥೆಗಳ ಮುಖ್ಯಸ್ಥರ ಜೊತೆಗೆ, ರೋಟರಿ ಮೈಸೂರು ಶಿಬಿರವನ್ನು ಔಪಚಾರಿಕವಾಗಿ ಪೊಲೀಸ್ ಆಯುಕ್ತ ರಮೇಶ್ ಭಾನೋತ್, ರೋಟರಿ ಜಿಲ್ಲೆ 3181 ಗವರ್ನರ್ ಹೆಚ್ ಆರ್ ಕೇಶವ್ (ದಾನವನ್ನೂ ಕೂಡ ಮಾಡಿದರು) ಹಾಗೂ ಉದ್ಯಮಿ ಆರ್.ಗುರು ಅವರು ಉದ್ಘಾಟಿಸಿದರು. ಡಿಸಿಪಿ (ಅಪರಾಧ ಮತ್ತು ಸಂಚಾರ) ಎಸ್.ಜಾಹ್ನವಿ ಅವರು ಕನ್ನಿಕಾ ಪರಮೇಶ್ವರಿ ಸಭಾಂಗಣದಲ್ಲಿ ಮತ್ತು ಎಸ್‌ಪಿ ಸೀಮಾ ಲಾಟ್ಕರ್ ಎನ್‌ಪಿಎಸ್ ಇಂಟರ್‌ನ್ಯಾಷನಲ್ ಸ್ಕೂಲ್ ಆವರಣದಲ್ಲಿ ಉದ್ಘಾಟಿಸಿದರು. ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಅಭಿಯಾನದಲ್ಲಿ ಪಾಲ್ಗೊಳ್ಳುವಂತೆ ಆಡಿಯೋ–ವೀಡಿಯೋ ಮೂಲಕ ಮೆಗಾ ರಕ್ತದಾನ ಅಭಿಯಾನಕ್ಕೆ ಬೆಂಬಲ ನೀಡಿದರು.

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ–ಟೆಂಡರು ಸೂಚನೆ ಸಂ. 30/MYS/2023
ದಿನಾಂಕ: 14.08.2023

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಉಪ–ಕಾಮಗಾರಿ–1: ಚಿಕ್ಕಜಾಜೂರು–ರಾಯದುರ್ಗ ವಿಭಾಗ: ಕಿಮೀ. 1/000 ರಿಂದ 34/000, ಕಿಮೀ. 46/000 ರಿಂದ ಕಿಮೀ. 69/100, ಕಿಮೀ. 86/000 ರಿಂದ 91/500 ಒಟ್ಟು 61.6 ಕಿಮೀ. ಉದ್ದದಲ್ಲಿ ಈಗಿರುವ 52ಕೆಜಿ/90 ಯುಟಿಎಸ್ ರೈಲ್‌ಗಳನ್ನು ಹೊಸ 60 ಕೆಜಿ.–110 ಯುಟಿಎಸ್ ರೈಲ್‌ಗಳಾಗಿ ಟಿಆರ್‌ಆರ್ (ಪಿ) ಮಾಡುವುದು. ಉಪ–ಕಾಮಗಾರಿ–2: ಚಿಕ್ಕಜಾಜೂರು–ಚಳ್ಳಕೆರೆ ನಿಲ್ದಾಣಗಳ ನಡುವೆ 31.00 ಕಿಮೀ. ಉದ್ದಕ್ಕೆ ಕಿಮೀ. 10/800–10/900, 12/400–12/500, 13/350–13/500, 23/870–25/763, 33/988–34/135, 46/00–69/100, 86/00–91/500 ವರೆಗೆ ಥ್ರೂ ಫಿಟಿಂಗ್ ರಿನ್ಯೂವಲ್ (ಟಿಎಫ್‌ಆರ್) ಕಾಮಗಾರಿ.	ರೂ. 4,19,09,781/-
2	ಮೇಲ್ವಿಚಾರಣೆಯೊಂದಿಗೆ ಆರ್‌ಡಿಎಸ್‌ಓ ಯಿಂದ ಅನುಮೋದಿಸಲ್ಪಟ್ಟ 60 ಕೆಜಿ. ಅಲ್ಯುಮಿನೋ ಥರ್ಮಿಕ್ ವೆಲ್ಡಿಂಗ್ ಭಾಗಗಳೊಂದಿಗೆ ಇತರ ಬಿಡಿಭಾಗಗಳ ಪೂರೈಕೆ.	ರೂ. 1,36,07,528/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **05.09.2023, 11:00 ಗಂಟೆಯವರೆಗೆ**

ಇ–ಟೆಂಡರು ಸೂಚನೆ ಸಂ. 31/MYS/2023
ದಿನಾಂಕ: 16.08.2023

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಉಪ–ಕಾಮಗಾರಿ–1: ಮೈಸೂರು – ಮೈಸೂರಿನ ಹಳೆಯ ಅಧಿಕಾರಿಗಳ ವಿಶ್ರಾಂತಿ ಗೃಹ (ವಿಐಪಿ ಸೂಟ್, ಸೂಟ್ ಎ, ಬಿ, ಸಿ, ಡಿ & ಇ) ಮತ್ತು ಹೊಸ ಅಧಿಕಾರಿಗಳ ವಿಶ್ರಾಂತಿ ಗೃಹಗಳ ದುರಸ್ತಿ (ನೆಲ ಮಹಡಿ: ಸೂಟ್ ಎಫ್, ಜಿ, ಹೆಚ್, ಐ ಮತ್ತು ಪ್ರಥಮ ಮಹಡಿ: ಎ, ಬಿ, ಸಿ, ಡಿ, ಎ1 & ಬಿ1) ಉಪ–ಕಾಮಗಾರಿ–2: ಮೈಸೂರು – ಮೈಸೂರಿನ ಅಧಿಕಾರಿಗಳ ರಜಾ ಗೃಹದ ದುರಸ್ತಿ. ಉಪ–ಕಾಮಗಾರಿ–3: ಮೈಸೂರು – ಮಡಿಕೇರಿಯಲ್ಲಿರುವ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ರಜಾಗೃಹಗಳ ದುರಸ್ತಿ. ಉಪ–ಕಾಮಗಾರಿ–4: ಅಶೋಕಪುರಂ – ಅಶೋಕಪುರಂ ಕಾಲೊನಿಗೆ ಕಾಂಪೌಂಡ್ ಗೋಡೆ/ಬೌಂಡರಿ ಗೋಡೆಗಳ ನಿರ್ಮಾಣ ಕಾರ್ಯ. ಉಪ–ಕಾಮಗಾರಿ–5: ಸಹಾಯಕ ವಿಭಾಗೀಯ ಇಂಜಿನಿಯರ್ / ಸಕಲೇಶಪುರ ಉಪ ವಿಭಾಗ: ಸಕಲೇಶಪುರ–ಸುಬ್ರಮಣ್ಯ ರೋಡ್ ಘಾಟ್ ವಿಭಾಗದ ನಿಲ್ದಾಣಗಳಲ್ಲಿ (ಡೋಣಿಗಲ್, ಕಡಗರವಳ್ಳಿ, ಯಡಕುಮರಿ, ಅರೆಬೆಟ್ಟ ಮತ್ತು ಶಿರಿಬಾಗಿಲು) ಸ್ಟೇಷನ್ ಬಿಲ್ಡಿಂಗ್ ಮತ್ತು ವಿಶ್ರಾಂತಿ ಗೃಹಗಳ ದುರಸ್ತಿ ಕಾರ್ಯ.	ರೂ. 2,39,42,651/-
2	ಹಾಸನ–ಮಂಗಳೂರು ವಿಭಾಗ: ಎಸ್‌ಎಸ್‌ಇ/ಬ್ರಿಡ್ಜ್‌ಗಳು/ಸಕಲೇಶಪುರ ವ್ಯಾಪ್ತಿಯಲ್ಲಿ ಹಾಸನ–ಮಂಗಳೂರು ವಿಭಾಗದಲ್ಲಿ ಪ್ಲಾಟ್‌ಫಾರ್ಮ್‌ನ ಅಬುಟ್‌ಮೆಂಟ್ ಮತ್ತು ಪಿಯರ್‌ಗಳ ಪರಿಶೀಲನಾ ಪೂರೈಕೆ (ಬ್ರಿಡ್ಜ್ ಸಂ. 15, 23, 28, 37, 43, 56, 118, 186, 187, 246, 256, 281, 283, 287, 289, 297, 322, 327, 328, 335, 367, 385, 400, 446, 474, 485, 507, 578, 582, 593, 597, 613, 630, 366, 484, 500, 577) (ಬ್ರಿಡ್ಜ್‌ಗಳ ಒಟ್ಟು ಸಂಖ್ಯೆ – 37 ನಂ.)	ರೂ. 1,54,84,676/-
3	ಹಾಸನ–ಮಂಗಳೂರು ಜಂ. ವಿಭಾಗ: ಎಸ್‌ಎಸ್‌ಇ/ಬ್ರಿಡ್ಜ್‌ಗಳು/ಸಕಲೇಶಪುರ ವ್ಯಾಪ್ತಿಯಲ್ಲಿ ಬ್ರಿಡ್ಜ್ ಸಂ. 23, 185, 186, 366, 367, 385, 446, 484, 500, 507, 539, 577, 578, 582, 593, 597, 613, 630 ರಲ್ಲಿ ಸೈಡ್ ಫುಟ್‌ಪಾಥ್ ಗಳ ಪೂರೈಕೆ (ಬ್ರಿಡ್ಜ್‌ಗಳ ಒಟ್ಟು ಸಂಖ್ಯೆ – 18 ನಂ.)	ರೂ. 97,18,862/-


ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08.09.2023, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ
ಮೈಸೂರು

PUB/309/AAD/PRB/SWR/2023-24

S.W.Railways SWRRLY SWRRLY



ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರ ಕಛೇರಿ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು

ಸಂಖ್ಯೆ:ಬಿ2/ಟಿ.ಸಿ.ಎಫ್/ಪಡಿತರ/ಸಿಆರ್–77/2022–23 ದಿನಾಂಕ: 07–08–2023
ದೂರವಾಣಿ: 08222–252041 E-Mail : dirnagarahole@aranya.gov.in

–:ಟೆಂಡರ್ ಅದಿಸೂಚನೆ:–

2023–24ನೇ ಸಾಲಿನಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯ ವಿವಿಧ ವನ್ಯಜೀವಿ ವಲಯಗಳಲ್ಲಿ ಇರುವ 54 ಕಳ್ಳಬೇಟೆ ಶಿಬಿರ ಹಾಗೂ 03 ಕ್ಷಿಪ್ರ ಕಾರ್ಯಪಡೆ ಶಿಬಿರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರಿಗೆ 01/09/2023 ರಿಂದ 31/03/2024ರ ವರೆಗೆ ವಿವಿಧ ಪಡಿತರ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಸರಬರಾಜುದಾರರು ಕೆಳಕಂಡ ದಿನಾಂಕದಂದು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಸರಬರಾಜು ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
ಕಳ್ಳಬೇಟೆ ಶಿಬಿರ /ಕ್ಷಿಪ್ರ ಕಾರ್ಯಪಡೆ ಶಿಬಿರಗಳಿಗೆ ವಿವಿಧ ಪಡಿತರ ಸಾಮಾಗ್ರಿಗಳ ಸರಬರಾಜು	56.908

- ಮೇಲಿನ ಅನುಸೂಚಿಯಲ್ಲಿ ಆಹ್ವಾನಿಸಿರುವ ಕಾಮಗಾರಿಗಳು ಸರ್ಕಾರದಿಂದ ನಿಗದಿಪಡಿಸಿರುವ ಅನುದಾನ ಮತ್ತು ಬಿಡುಗಡೆಯಾಗುವ ಅನುದಾನದ ನಿರೀಕ್ಷೆಯಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ.
- ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 21/08/2023
- ಮರು ಟೆಂಡರ್ ದಿನಾಂಕ: 28/08/2023
- ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಕೆಳಕಂಡ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದಾಗಿದೆ ದೂರವಾಣಿ ಸಂಖ್ಯೆ: 08222–252041, E-mail: dirnagarahole@aranya.gov.in

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು,
ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ
ಕಾರ್ಯದರ್ಶಿಗಳ ಕಾರ್ಯಾಲಯ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.
ದೂರವಾಣಿ ಸಂಖ್ಯೆ:–08225–272128, ಫ್ಯಾಕ್ಸ್ ಸಂಖ್ಯೆ 08225–272123 ಇ–ಮೇಲ್: sec.mmtemple@gmail.com

ಸಂಖ್ಯೆ ಶ್ರೀ ಮ.ಮ.ಕ್ಷೇ.ಅ.ಪ್ರಾ/ಗುತ್ತಿಗೆ/8/ಪಿಆರ್/20/2022–23 ದಿನಾಂಕ: 16–08–2023.

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕ್ರ.ಸಂ.	ಟೆಂಡರ್ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)
1.	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಡೆಯಲಿರುವ ಉಚಿತ ಸಾಮೂಹಿಕ ವಿವಾಹದಲ್ಲಿ ಪಾಲ್ಗೊಳ್ಳುವ ವಧುವಿಗೆ ನೀಡಲು 916 ಹಾಲ್‌ಮಾರ್ಕ್ 22 ಕ್ಯಾರೇಟ್‌ನ 2.00 ಗ್ರಾಂ. ತೂಕದ ಚಿನ್ನದ ತಾಳಿ ಹಾಗೂ ತಾಳಿಯ ಮಧ್ಯದಲ್ಲಿ ಕೆಂಪು ಬಣ್ಣದ ಕಲ್ಲು ಇರುವಂತೆ ತೇಮಾನ, ಮಜೂರಿ ಮತ್ತು ಜಿ.ಎಸ್.ಟಿ. ಸೇರಿದಂತೆ 70 ಸಂಖ್ಯೆ ಸರಬರಾಜು ಮಾಡುವ ಬಗ್ಗೆ	10.00	25.000.00

ವಿವರಗಳನ್ನು ಇ–ಪೋರ್ಟಲ್ https://kppp.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಕಚೇರಿ ವೇಳೆಯಲ್ಲಿ ಮೊಬೈಲ್ ನಂ. 9480065393 ಶ್ರೀ ಎಸ್.ನಾಗರಾಜು, ದ್ವಿ.ದ.ಸ ರವರಿಂದ ಮಾಹಿತಿ ಪಡೆಯಬಹುದು.

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	17–08–2023	ರ ನಂತರ
2	ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ	24–08–2023	ಸಂಜೆ 5.00 ಗಂಟೆಯವರೆಗೆ
3	ಇ–ಟೆಂಡರ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ	25–08–2023	ಸಂಜೆ 5.00 ನಂತರ

ವಾ.ಸಾ.ಸಂ.ಇ/ಚಾ.ನಗರ.99/2023–24 ಸಹಿ/– ಕಾರ್ಯದರ್ಶಿ, ಶ್ರೀಮಲೆ ಮಹದೇಶ್ವರ ಕ್ಷೇತ್ರ, ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರ ಬೆಟ್ಟ

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ಬನ್ನಿಮಂಟಪ, ಸಿದ್ದೀಖಿ ನಗರ, 2ಬಿ ಮೇನ್ ರಸ್ತೆ, ಎರಡನೇ ಕ್ರಾಸ್, ಮನೆ ನಂ. 183ರಲ್ಲಿ ವಾಸವಾಗಿರುವ ಜಾಹಿದಾ ಬೇಗಂ ಕೋಂ ಸಯ್ಯದ್ ಜಮೀರ್‌ರವರು ಕೆಳಗೆ ಉಲ್ಲೇಖಿಸಲಾಗಿದೆ ಷೆಡ್ಯೂಲ್ ಸ್ವತ್ತನ್ನು ಬೆಂಗಳೂರು ನಗರದ, ಕಲಬಾಲು, ಕಟ್ಟಾಲು, ನಂದನವನ ಲೇಔಟ್ (ನಿಸರ್ಗ ಲೇಔಟ್ ಹಿಂದೆ) ಮನೆ ನಂ. 2208ರಲ್ಲಿ ವಾಸವಾಗಿರುವ ಜಗದಾಂಬ ಕೋಂ ಕೆ. ಮಹದೇವನ್‌ರವರಿಂದ ಖರೀದಿಸಲು ಇಚ್ಛಿಸಿದ್ದು, ಸದರಿ ಸ್ವತ್ತಿನ ಬಗ್ಗೆ ಯಾರಿಗಾದರೂ ಹಕ್ಕು ಅಥವಾ ತಕರಾರುಗಳಿದ್ದಲ್ಲಿ ಈ ದಿನದಿಂದ ಏಳು ದಿನಗಳ ಒಳಗಾಗಿ ಕೆಳಗೆ ತಿಳಿಸಿದ ವಿಳಾಸಕ್ಕೆ ತಮ್ಮ ತಕರಾರನ್ನು ದಾಖಲೆ ಸಮೇತ ಸಲ್ಲಿಸಬಹುದಾಗಿರುತ್ತದೆ. ಏಳು ದಿನಗಳ ಒಳಗಾಗಿ ಯಾವುದೇ ತಕರಾರುಗಳು ಬಾರದೇ ಹೋದಲ್ಲಿ ನಮ್ಮ ಕಕ್ಷಿದಾರರು ಸದರಿ ಸ್ವತ್ತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲವೆಂದು ಪರಿಗಣಿಸಿ ಕ್ರಯಪತ್ರವನ್ನು ಮಾಡಿಕೊಳ್ಳಲು ಬದ್ಧರಾಗಿರುತ್ತಾರೆ. ಏಳು ದಿನಗಳ ಮೇಲ್ಪಟ್ಟು ಬಂದ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತು

ಮೈಸೂರು ನಗರದ ಎನ್.ಆರ್.ಮೊಹಲ್ಲಾ ದೇವನೂರು 3ನೇ ಹಂತ ಬಡಾವಣೆಯ 2391ನೇ ಸಂಖ್ಯೆಯನ್ನು ಹೊಂದಿರುವ ಪೂರ್ವದಿಂದ ಪಶ್ಚಿಮಕ್ಕೆ 9.00 ಮೀಟರ್‌ಗಳು ಹಾಗೂ ಉತ್ತರದಿಂದ ದಕ್ಷಿಣಕ್ಕೆ 12.00 ಮೀಟರ್‌ಗಳ ಅಳತೆಯು ಒಟ್ಟು 108.00 ಚದರ ಮೀಟರ್ ಉಳ್ಳ ಈ ನಿವೇಶನದ ಚಕ್ಕುಬಂದಿ;

ಪೂರ್ವಕ್ಕೆ: ನಿವೇಶನ ಸಂಖ್ಯೆ: 2392, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ : 2390, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಖಾಸಗಿ ಬಡಾವಣೆ

ಸಹಿ/– ಎಂ.ಬಿ.ಸ್ವಾಮಿ, ವಕೀಲರು,
KAR/3935/2005, ನಂ. ಸಿಹೆಚ್–12, 1ನೇ ಮಹಡಿ, 4ನೇ ಮೇನ್, ಸರಸ್ವತಿಪುರಂ, ಮೈಸೂರು–09. ಮೊ:9480169648

ದಿನಾಂಕ: 19–8–23

ಪುರಸಭೆ ಕಾರ್ಯಾಲಯ, ವಿರಾಜಪೇಟೆ
ಕೊಡಗು ಜಿಲ್ಲೆ– 571218
ದೂರವಾಣಿ ಸಂಖ್ಯೆ:–08274–257332, ಇ–ಮೇಲ್: ka.virajpet.tmc@gmail.com, ವೆಬ್ ಸೈಟ್ www.virajpettown.mrc.gov.in

ನಂ.ಪುಸವಿ/ಆ.ಶಾ/12/2023–24 ದಿನಾಂಕ: 20–08–2023.

"ಕೊಟೇಶನ್ ಪ್ರಕಟಣೆ"

ವಿರಾಜಪೇಟೆ ಪುರಸಭೆ ವ್ಯಾಪ್ತಿಯ ಬೀದಿ ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸುವ ಉದ್ದೇಶದಿಂದ ಬೀದಿ ನಾಯಿಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಲು ಆಸಕ್ತಿಯುಳ್ಳ ಅರ್ಹ ನೋಂದಾಯಿತ ಸೇವಾದಾರರು/ಸರ್ಕಾರೇತರ ಸಂಸ್ಥೆಗಳಿಂದ ಒಂದು ನಾಯಿಯನ್ನು ಹಿಡಿದು ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡುವ ಸಲುವಾಗಿ ಒಂದು ನಾಯಿಗೆ ತಗಲುವ ಕನಿಷ್ಟ. ದರಗಳನ್ನು ನಮೂದಿಸಿ ಕೊಟೇಶನ್‌ಗಳನ್ನು ದಿನಾಂಕ: 04–09–2023ರ ಒಳಗಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು ಕಾಲ ಮೀರಿ ಬಂದ ಕೊಟೇಶನ್‌ಗಳನ್ನು ಪರಿಗಣಿಸಲಾಗುವುದಿಲ್ಲ ಕೊಟೇಷನ್ ಅಂಗೀಕರಿಸುವ ಯಾರತಿರಸ್ಕರಿಸುವ ಅಧಿಕಾರ ಪುರಸಭೆ ಕಾಯ್ದಿರಿಸಿಕೊಂಡಿದೆ. ಕೊಟೇಶನ್ ಸಲ್ಲಿಸುವವರು ಈ ಕಚೇರಿಯಿಂದ ನೀಡಿರುವ ಷೆಡ್ಯೂಲ್‌ನ ಷರತ್ತಿಗೆ ಅನ್ವಯವಾಗುವಂತೆ ಕೊಟೇಶನ್ ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ http://www.virajpettown.mrc.gov.in/kn/tenders ಅಥವಾ ಈ ಕಚೇರಿಯನ್ನು ಸಂಪರ್ಕಿಸತಕ್ಕದ್ದು.

ಸಹಿ/– ಆಢಳಿತಾಧಿಕಾರಿಗಳು, ಪುರಸಭೆ, ವಿರಾಜಪೇಟೆ
ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ವಿರಾಜಪೇಟೆ

ಶ್ರೀರಾಂಪುರ ಪಟ್ಟಣ ಪಂಚಾಯಿತಿ ಕಾರ್ಯಾಲಯ
ಮೈಸೂರು ಜಿಲ್ಲೆ– 570008
ದೂರವಾಣಿ ಸಂಖ್ಯೆ :–0821–2330109 ಇ–ಮೇಲ್:itstaff_ulb_srirampur@yahoo.com

ಸಂ: ಪಪಂಶ್ರೀ:.ಎಸ್‌ಎಫ್‌ಸಿ/ಪ.ಪಂ.ನಿ:ವ.ಕಾ:ಸಾಪ್ರ/ಸಿಆರ್:1:2023–24 ದಿನಾಂಕ: 17–08–2023.

–:ಸಾರ್ವಜನಿಕ ಪ್ರಕಟಣೆ:–

ಈ ಮೂಲಕ ಶ್ರೀರಾಂಪುರ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ವಾಸವಾಗಿರುವ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ ಶ್ರೀರಾಂಪುರ ಪಟ್ಟಣ ಪಂಚಾಯ್ತಿಯ 2023–24ನೇ ಸಾಲಿನ ಕ್ರಿಯಾಯೋಜನೆಯು ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಮುನಿಸಿ(4)/ಎಸ್.ಎಫ್.ಸಿ.ಮುನಿ:ಶ್ರೀಪಪಂ/ಕ್ರಿಯೋ/ಸಿಆರ್–14/2023–24. ದಿ: 20–06–2023 ಮತ್ತು 01–08–2023. ರ ರೀತ್ಯಾ ಮಂಜೂರಾಗಿದ್ದು, ಅದರಂತೆ 1) ಶೇ.24.10ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಪೌರಕಾರ್ಮಿಕರು 2) ಶೇ.7.25ರ ಇತರೆ ಬಡಜನರು ಮತ್ತು 3) ಶೇ.5ರ ವಿಶೇಷಚೇತನ ಬಡಜನರ ಕಲ್ಯಾಣಕ್ಕಾಗಿ ಸರ್ಕಾರದ ನಿಯಮ/ನಿಬಂಧನೆಗಳಿಗೊಳಪಟ್ಟು ಈ ಕೆಳಕಂಡ ವಿವಿಧ ವಯಕ್ತಿಕ ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಪೂರಕ ದಾಖಲೆಗಳೊಂದಿಗೆ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ. ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಭರ್ತಿ ಮಾಡಿ ಪೂರಕ ದಾಖಲಾತಿಗಳೊಂದಿಗೆ ದಿ:31–08–2023ರ ಸಂಜೆ 5.00 ಗಂಟೆಯೊಳಗೆ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿ ಮತ್ತು ಅರ್ಜಿಗಳಿಗಾಗಿ ಕಛೇರಿ ವೇಳೆಯಲ್ಲಿ ಯೋಜನಾ ಶಾಖೆಯನ್ನು ಭೇಟಿ ಮಾಡತಕ್ಕದ್ದು.

ಕ್ರಸ	ಕಾರ್ಯಕ್ರಮಗಳ ವಿವರಗಳು	ಲಭ್ಯ ಅನುದಾನ
1	ಸರ್ಕಾರದ ವಿವಿಧ ವಸತಿ ಯೋಜನೆಯಡಿ ಆಯ್ಕೆ ಆಗಿರುವ ಪ.ಜಾತಿಯ ಫಲಾನುಭವಿಗಳಿಗೆ ಫಲಾನುಭವಿ ವಂತಿಕೆ ನೀಡುವುದು.	ಎಸ್.ಎಫ್.ಸಿ–2.88,000/–
2	ಸರ್ಕಾರದ ವಿವಿಧ ವಸತಿ ಯೋಜನೆಯಡಿ ಆಯ್ಕೆ ಆಗಿರುವ ಪ.ಪಂಗಡದ ಫಲಾನುಭವಿಗಳಿಗೆ ಫಲಾನುಭವಿ ವಂತಿಕೆ ನೀಡುವುದು.	ಎಸ್.ಎಫ್.ಸಿ–1.28,000/–
3	ಪೌರಕಾರ್ಮಿಕರ ಕುಟುಂಬದವರಿಗೆ ವೈದ್ಯಕೀಯ ವೆಚ್ಚ ಮರುಪಾವತಿ/ಕ್ರೀಡೆಗೆ ಪ್ರೋತ್ಸಾಹಧನ ನೀಡುವುದು.	ಎಸ್‌ಎಫ್‌ಸಿ–1,11 ,000/–
4	ಸರ್ಕಾರದ ವಿವಿಧ ವಸತಿ ಯೋಜನೆಯಡಿ ಆಯ್ಕೆ ಆಗಿರುವ ಇತರೆ ಹಿಂದುಳಿದ ವರ್ಗದ ಫಲಾನುಭವಿಗಳಿಗೆ ಫಲಾನುಭವಿ ವಂತಿಕೆ ನೀಡುವುದು.	ಎಸ್.ಎಫ್.ಸಿ–1.48,000/–
5	ವಿಕಲಚೇತನರ ಕುಟುಂಬದವರಿಗೆ ಶೌಚಾಲಯ ನಿರ್ಮಾಣಕ್ಕೆ ಸಹಾಯಧನ ನೀಡುವುದು.(ತಲಾ 10000–00ರಂತೆ)	ಎಸ್.ಎಫ್.ಸಿ–50,000/–

ಪ್ರತಿ ಅರ್ಜಿದಾರರು ಕಡ್ಡಾಯವಾಗಿ ಶ್ರೀರಾಂಪುರ ಟೌನ್ ನಿವಾಸಿಗಳಾಗಿದ್ದು, ಭರ್ತಿ ಮಾಡಲಾದ ನಿಗಧಿತ ನಮೂನೆಯ ಅರ್ಜಿ ಜೊತೆ ಚಾಲ್ತಿಯಲ್ಲಿರುವ 1) ಜಾತಿ ಮತ್ತು ಆದಾಯ ಪ್ರಮಾಣ ಪತ್ರ, (ವಾರ್ಷಿಕ ಆದಾಯ 3 ಲಕ್ಷದೊಳಗಿರಬೇಕು) 2) ಪಡಿತರ ಚೀಟಿ 3) ಆಧಾರ್ ಕಾರ್ಡ್, 4) ಚುನಾವಣಾ ಗುರುತಿನ ಚೀಟಿ, 5) ಬ್ಯಾಂಕ್ ಪಾಸ್ ಬುಕ್ ನಕಲುಗಳ ಸ್ವಯಂ ದೃಢೀಕೃತ ನಕಲುಗಳು, 6) ಸರ್ಕಾರದ ವಸತಿ ಯೋಜನೆಯಡಿ ಮಂಜೂರಾಗಿರುವ ಮಂಜೂರಾತಿ ಪತ್ರದ ನಕಲು, 7) 3 ಸಂಖ್ಯೆ ಇತ್ತೀಚಿನ ಭಾವಚಿತ್ರ, 8) ಮೊಬೈಲ್ ಸಂಖ್ಯೆ, 8) ವಿಶೇಷ ಚೇತನರೆಂಬುದಕ್ಕೆ ಪ್ರಮಾಣ ಪತ್ರ, 9) ಪೌರಕಾರ್ಮಿಕ ಕುಟುಂಬದವರ ಕ್ರೀಡೆ/ವೈದ್ಯಕೀಯ ದಾಖಲೆಗಳು,ಇನ್ನಿತರೆ ಅಗತ್ಯ ದಾಖಲೆಗಳನ್ನು ಲಗತ್ತಿಸುವುದು. ಮೇಲಿನ ಸೌಲಭ್ಯಗಳನ್ನು ಕಲ್ಪಿಸುವ/ಮಾರ್ಪಡಿಸುವ/ರದ್ದುಪಡಿಸುವ/ವಿತರಣೆ ಮಾಡುವ/ಮಾಡದಿರುವ ಹಕ್ಕನ್ನು ಸರ್ಕಾರ/ಪಟ್ಟಣ ಪಂಚಾಯ್ತಿ, ಶ್ರೀರಾಂಪುರ ಕಾಯ್ದಿರಿಸಿಕೊಂಡಿರುತ್ತದೆ.

ಹೆಚ್ಚಿನ ಮಾಹಿತಿ ಮತ್ತು ನಿಗಧಿತ ನಮೂನೆಯ ಅರ್ಜಿಗಳಿಗಾಗಿ ಪಟ್ಟಣ ಪಂಚಾಯ್ತಿಯ ಯೋಜನಾ ಶಾಖೆಗೆ ಭೇಟಿ ನೀಡಿ ಪಡೆದುಕೊಳ್ಳತಕ್ಕದ್ದು.

ಸಹಿ/– ಆಢಳಿತಾಧಿಕಾರಿಗಳು, ಪಟ್ಟಣ ಪಂಚಾಯ್ತಿ, ಶ್ರೀರಾಂಪುರ.
ಸಹಿ/– ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯ್ತಿ, ಶ್ರೀರಾಂಪುರ.



ನಕ್ಕರೆ ಅದೇ ಸ್ವರ್ಗ

ಲಾಯರ್ : "ನಿಮ್ಮ ಪಕ್ಕದ ಮನೆಯ ಮಾಲೀಕರು ಕೊಲೆಯಾದಾಗ ಯಾವ ಕಲರ್ ಬಟ್ಟೆ ತೊಟ್ಟಿದ್ದರು?"

ಗುಂಡ : "ಕೊಲೆಯಾಗಿ ಮೂರ್‍ನಾಲ್ಕು ತಿಂಗಳಾಗಿದೆ. ಈಗ ಕೇಳ್ತೀರಲ್ಲಾ? ನಿಮ್ಮ ಮನೆಯಲ್ಲಿ ಹದಿನೈದು ದಿನದ ಹಿಂದೆ ಏನು ತಿಂಡಿ ಮಾಡಿದ್ದರು ಹೇಳಿ?!"

ಮೈಸೂರು ಮಿತ್ರ
ಭಾನುವಾರ, 20 ಆಗಸ್ಟ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಕತ್ತಲೆಯಿಲ್ಲದೆ ದೀಪದ ಮಹತ್ವ ತಿಳಿಯಲಾರದು, ದುಃಖದ ಅನುಭವವಿಲ್ಲದೆ ಸುಖದ ಮಹತ್ವ ತಿಳಿಯಲಾರದು. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಟೊಳ್ಳು ಮಾತು ಸುಳ್ಳಿಗಿಂತ ಕಡೆ

ನಿಮ್ಮ ಪತ್ರಗಳು

ಚಾ.ನಗರದಲ್ಲಿ ಕಾರ್ಖಾನೆ; ಹೆಮ್ಮೆಯ ವಿಚಾರ

ಮಾನ್ಯರೆ,

ನೆರೆಯ ಶ್ರೀಲಂಕಾ ದೇಶದ ಮಾಜಿ ಕ್ರಿಕೆಟ್ ಮಾಂತ್ರಿಕ, ಹಾಲಿ ತರಬೇತುದಾರ (ಕೋಚ್) ದೇಶಬಂಧು ಮುತ್ತಯ್ಯ ಮುರಳೀಧರನ್ ಅವರು ಚಾಮರಾಜನಗರ ಜಿಲ್ಲೆಯ ಕೆಲ್ಲಂಬಳ್ಳಿ, ಬದನಗುಪ್ಪೆ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 400 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬೃಹತ್ ಪಾನೀಯ ಮತ್ತು ಚಾಕೊಲೇಟ್ ಘಟಕ ಸ್ಥಾಪಿಸಲು ಮುಂದಾಗಿರುವುದು ಸ್ವಾಗತಾರ್ಹ ವಿಚಾರವಾಗಿದೆ. ಇದಕ್ಕಾಗಿ ಅವರು 46 ಎಕರೆ ಪ್ರದೇಶವನ್ನು ಈಗಾಗಲೇ ಖರೀದಿಸಿದ್ದು, ರಾಜ್ಯ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ಹೇಳಲಾಗಿದ್ದು, ನಿರ್ಮಾಣ ಕಾಮಗಾರಿಯು ಆರಂಭವಾಗಿದೆ. ಈ ಕಾರ್ಖಾನೆಯಲ್ಲಿ ಸುಮಾರು 800 ಮಂದಿ ಸ್ಥಳೀಯರಿಗೆ ಉದ್ಯೋಗ ನೀಡಲಾಗುತ್ತದೆ ಎಂಬ ಆಶಾಭಾವನೆ ವ್ಯಕ್ತವಾಗಿದೆ.

ಸುಮಾರು 51 ವರ್ಷ ವಯಸ್ಸಿನ ಮುತ್ತಯ್ಯ ಮುರುಳೀಧರನ್, ಒಂದು ದಿನದ ಅಂತರಾಷ್ಟ್ರೀಯ ಕ್ರಿಕೆಟ್ ಪಂದ್ಯದಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ಖ್ಯಾತಿ ಹೊಂದಿದ್ದಾರೆ. ವಿದೇಶಿ ಖ್ಯಾತನಾಮರೊಬ್ಬರು ನಮ್ಮ ದೇಶದಲ್ಲಿ ಅಥವಾ ರಾಜ್ಯದಲ್ಲಿ ಉದ್ಯಮ ಸ್ಥಾಪಿಸಲು ಮುಂದಾಗುವುದು ನಮಗೊಂದು ಹೆಮ್ಮೆಯ ವಿಚಾರವಾಗಿದೆ. ತನ್ಮೂಲಕ ನಮ್ಮ ರಾಜ್ಯದ ಹಿರಿಮೆ ಗರಿಮೆಗಳು ಬೇರೊಂದು ದೇಶಕ್ಕೂ ಪಸರಿಸಿದ ಹಾಗಾಗುತ್ತದೆ. ಮುತ್ತಯ್ಯ ಮುರುಳೀಧರನ್ ಅವರಿಗೆ ರಾಜ್ಯ ಸರ್ಕಾರ ಎಲ್ಲಾ ರೀತಿಯ ಸಹಕಾರ ನೀಡುವ ಭರವಸೆ ನೀಡಿದ್ದು, ಸದರಿ ಕಾರ್ಖಾನೆಯ ಆಡಳಿತ ಮಂಡಳಿಯವರು, ಕಾರ್ಖಾನೆ ಪ್ರಾರಂಭಗೊಂಡ ಮೇಲೆ, ಸ್ಥಳೀಯ ಅರ್ಹ ಅಭ್ಯರ್ಥಿಗಳಿಗೆ ಗರಿಷ್ಠ ಸಂಖ್ಯೆಯ ಉದ್ಯೋಗ ಕಲ್ಪಿಸಲಿ. ಇದರಿಂದ ಎಷ್ಟೋ ನಿರುದ್ಯೋಗಿಗಳಿಗೆ ಬದುಕು ಕಟ್ಟಿಕೊಟ್ಟಂತಾಗುತ್ತದೆ. ಮುರುಳೀಧರನ್ ತಮ್ಮ ನೂತನ ಉದ್ಯಮದಲ್ಲಿ ಯಶಸ್ಸು ಕಾಣಲಿ ಎಂದು ಹಾರೈಸೋಣ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸರ್ಕಾರಿ ಶಾಲೆಗಳನ್ನು ಉಳಿಸಿ

ಮಾನ್ಯರೆ,

ಶೂನ್ಯ ದಾಖಲಾತಿಯಿಂದಾಗಿ ಚಾಮರಾಜನಗರ ಜಿಲ್ಲೆಯ 13 ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ. ಇದು ಕೇವಲ ಒಂದು ಜಿಲ್ಲೆಗೆ ಸಂಬಂಧಿಸಿದ್ದಲ್ಲ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಇಂತದ್ದೇ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಘೋಷಣೆ ಮಾಡಿರುವ ಐದು ಗ್ಯಾರಂಟಿಗಳಿಗೆ ವರ್ಷಕ್ಕೆ ಸಾವಿರಾರು ಕೋಟಿ ರೂ.ಗಳು ಖರ್ಚಾಗಲಿದೆ ಎಂದು ಸರ್ಕಾರವೇ ತಿಳಿಸಿದೆ. ನಾವಿಲ್ಲಿ ಗಮನಿಸ ಬೇಕಾದದ್ದು ಕೇವಲ ಎರಡರಿಂದ ಐದು ಕೋಟಿ ರೂ. ಅನುದಾನದಲ್ಲಿ ಒಂದು ಶಾಲೆಯನ್ನು ಉಳಿಸಿಕೊಳ್ಳಬಹುದಾಗಿದೆ. ಆದ್ದರಿಂದ ಮುಖ್ಯಮಂತ್ರಿಗಳು ಐದು ಗ್ಯಾರಂಟಿಗಳಲ್ಲಿ ಯಾವುದಾದರೂ ಎರಡು ಗ್ಯಾರಂಟಿ ಗಳನ್ನು ಕೈ ಬಿಟ್ಟು ಅದರ ಉಳಿತಾಯದ ಹಣವನ್ನು ಯಾವುದೇ ಖಾಸಗಿ ಶಾಲೆಗಳಿಗೆ ಕಡಿಮೆ ಇಲ್ಲದ ಹಾಗೆ ಸರ್ಕಾರಿ ಶಾಲೆಗಳ ಅಭಿವೃದ್ಧಿಪಡಿಸಿ ಉಳಿಸಬೇಕಾಗಿ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಯಾವುದೇ ಪಕ್ಷಗಳು ಅಧಿಕಾರಕ್ಕೆ ಬಂದರೂ ಅದರ ಜವಾಬ್ದಾರಿ ಸರ್ಕಾರಿ ಶಾಲೆಗಳ ಅಭಿವೃದ್ಧಿಯಾಗಬೇಕು.

–ಅಂಕರಾಜು ಎನ್ ಹೊಸಮಾಲಂಗಿ, ಕೊಳ್ಳೇಗಾಲ

ಬ್ಯಾಂಕುಗಳು ಗ್ರಾಹಕರಿಗೆ ನಾಣ್ಯ ವಿತರಣೆ ಮಾಡಲಿ

ಮಾನ್ಯರೆ,

ಇತ್ತೀಚೆಗೆ ದಿನನಿತ್ಯದ ವಹಿವಾಟು ವ್ಯವಹಾರಗಳಲ್ಲಿ ನಾಣ್ಯಗಳ ಅಗತ್ಯವಿದೆ. ನಂದಿನಿ ಹಾಲಿನ ಬೂತ್‌ಗಳು, ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ, ಕಿರಾಣಿ ಅಂಗಡಿಗಳಲ್ಲಿ, ರೈಲು ಪ್ರಯಾಣಗಳಲ್ಲಿ ನಾಣ್ಯಗಳಿಗೆ ಕಿರಿಕಿರಿ ಉಂಟಾಗುವುದನ್ನು ಪ್ರತಿನಿತ್ಯ ನೋಡುತ್ತಲೇ ಇರುತ್ತೇವೆ. ಇನ್ನು ಸರ್ಕಾರದ ಉಚಿತ ಶಕ್ತಿ ಯೋಜನೆಯಿಂದಾಗಿ ಪಾಪ ಬಸ್ ನಿರ್ವಾಹಕರಿಗೆ ನಾಣ್ಯದ ಕೊರತೆ ಉಂಟಾಗಿದೆ. ಬ್ಯಾಂಕುಗಳ ಮೂಲಕ ಗ್ರಾಹಕರಿಗೆ ನಾಣ್ಯ ವಿತರಣೆ ಮಾಡುವಂತೆ ಮನವಿ.

–ಜಿ.ಪಿ. ರಾಜೇಶ್, ವಿ.ವಿ.ಪುರಂ, ಮೈಸೂರು.

ಪಾಂಡವಪುರ ತಾಲೂಕಿಗೆ ಖಾಯಂ ತಹಸೀಲ್ದಾರ್ ನೇಮಿಸಿ

ಮಾನ್ಯರೆ,

ಕಳೆದ ಎರಡು ಮೂರು ತಿಂಗಳಿಂದ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ತಹಸೀಲ್ದಾರ್ ಅವರ ಖುರ್ಚಿ ಖಾಲಿ ಇದ್ದು, ಇಲ್ಲಿಯವರೆವಿಗೂ ತಹಶೀಲ್ದಾರ್ ನೇಮಕ ಮಾಡದೆ ಕೇವಲ, ಹಂಗಾಮಿ ತಹಸೀಲ್ದಾರ್ ನೇಮಕ ಮಾಡಿದ್ದು. ರೈತಾಪಿ ವರ್ಗದ ಕೆಲಸ ಕಾರ್ಯವಾಗದೆ ದಿನನಿತ್ಯ ಅಲೆಯುವಂತಾಗಿದೆ. ರೈತರ ಕೆಲವು ದಾಖಲೆಗಳಿಗೆ ಖಾಯಂ ತಹಸೀಲ್ದಾರ್ ಅವಶ್ಯಕತೆ ಇದೆ.ಇದರಿಂದ ರೈತರಿಗೆ ತುಂಬಾ ತೊಂದರೆಯಾಗಿದ್ದು. ರೈತರ ಪರ ಎಂದು ಭಾಷಣ ಮಾಡುವ ಸರ್ಕಾರ ತಕ್ಷಣ ಖಾಯಂ ತಹಸೀಲ್ದಾರರನ್ನು ನೇಮಿಸಬೇಕಾಗಿ ಮಾನ್ಯ ಶಾಸಕರಾದ ದರ್ಶನ್ ಪುಟ್ಟಣ್ಣಯ್ಯನವರು, ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸರ್ಕಾರಗಳಲ್ಲಿ ಮನವಿ ಮಾಡುತ್ತೇವೆ. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಮಿನಿ ವಿಧಾನಸೌಧದ ಎದುರು ಪ್ರತಿಭಟನೆ ಮಾಡಬೇಕಾಗುತ್ತದೆ.

–ನೊಂದ ರೈತಾಪಿ ವರ್ಗ, ಪಾಂಡವಪುರ ತಾ.

ಪಾದಚಾರಿಗಳಿಗೆ ಫುಟ್‌ಪಾತ್ ಮುಕ್ತಗೊಳಿಸಿ

ಮಾನ್ಯರೆ,


ಮೈಸೂರು–ಬೆಂಗಳೂರು ಹಳೆಯ ಹೆದ್ದಾರಿಯ ಬದಿ ಫುಟ್‌ಪಾತ್ ಮೇಲೆ ಶಾಲಾ–ಕಾಲೇಜಿನ ವಿದ್ಯಾರ್ಥಿಗಳು, ಆಸ್ಪತ್ರೆಗೆ ಹೋಗುವ ರೋಗಿಗಳು ಹಾಗೂ ಸಾರ್ವಜನಿಕರು ಓಡಾಡುವ ಜಾಗದಲ್ಲಿ ದ್ವಿಚಕ್ರ ವಾಹನ ಸವಾರರು ಟ್ರಾಫಿಕ್ ಪೊಲೀಸರ ಭಯವಿಲ್ಲದೆ ಮನಸೋ ಇಚ್ಛೆ ತಮ್ಮ ವಾಹನಗಳನ್ನು ಚಲಾಯಿಸುತ್ತಿದ್ದು, ಅಪಘಾತಗಳಾಗುವ ಸಂಭವವಿದೆ.

ಇನ್ನು ಕೆಲ ಜಾಗಗಳಲ್ಲಿ ಫುಟ್‌ಪಾತ್ ಮೇಲೆ ವ್ಯಾಪಾರ ಮಾಡುತ್ತಿರುತ್ತಾರೆ. ವ್ಯಾಪಾರ ಮಾಡುತ್ತಿದ್ದಾರಲ್ಲ ಎಂದು ಪಾದಚಾರಿಗಳು ಫುಟ್‌ಪಾತ್‌ನಿಂದ ಕೆಳಕ್ಕೆ ಇಳಿದು ರಸ್ತೆಗೆ ಬಂದರೆ ವೇಗವಾಗಿ ಬರುವ ವಾಹನಗಳ ಭಯ. ಇದು ಪಾದಚಾರಿಗಳು ನಡೆದಾಡುವ ದಾರಿಯೋ? ಅಥವಾ ವಾಹನಗಳು ಚಲಿಸುವ ದಾರಿಯೋ? ಎಂಬಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ಈ ಕೂಡಲೇ ಸಮಸ್ಯೆಯನ್ನು ಬಗೆಹರಿಸುವಂತೆ ಮನವಿ.

–ವಿ. ಇಂಚರ, ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ

ನಮ್ಮ 'ಅರಸರಿಗೆ' ಅಕ್ಷರಾಂಜಲಿ




ಅಡಗೂರು ಹೆಚ್.ವಿಶ್ವನಾಥ್
ವಿಧಾನಪರಿಷತ್ ಸದಸ್ಯರು

> "ದೇಶದ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳು ತುರ್ತು ಪರಿಸ್ಥಿತಿಯನ್ನು ತಮ್ಮ ರಾಜಕೀಯ ವಿರೋಧಿಗಳನ್ನು ಹಣಿಯಲು ಬಳಸಿಕೊಂಡರೆ, ಅರಸರು ಮಾತ್ರ ಇಂತಹ ಪರಿಸ್ಥಿತಿಯನ್ನು ನಾಡಿನ ಸಮಗ್ರ ಅಭಿವೃದ್ಧಿಗಾಗಿ ಬಳಸಿಕೊಂಡರು. ಇಂದಿರಾ ಗಾಂಧಿಯವರ ಹೆಸರಿನೊಡನೆ ಕಾಂಗ್ರೆಸ್ಸಿನ ಶಕ್ತಿಯಾಗಿ ಹೊರ ಹೊಮ್ಮಿದ ದೇವರಾಜ ಅರಸರು ಜನ ಕೊಟ್ಟ ಅಧಿಕಾರವನ್ನು ಜನರಿಗಾಗಿಯೇ ಹೇಗೆಲ್ಲಾ ಬಳಸಿಕೊಂಡರು ಎನ್ನುವುದು ಈಗ ಇತಿಹಾಸ.ಕಾಂಗ್ರೆಸ್ಸಿನ ಜನನಾಯಕ ದೇವರಾಜ ಅರಸರು ತಮ್ಮ ಆಡಳಿತವನ್ನು ಉಟ್ಟ ಬಟ್ಟೆಯನ್ನೇ; ಉಳುವ ಎತ್ತುಗಳನ್ನೇ; ಉಣ್ಣುವ ತಟ್ಟೆ–ಬಟ್ಟಲುಗಳನ್ನೇ; ಮಡದಿಯ ಮಾಂಗಲ್ಯವನ್ನೇ; ತಮ್ಮ ತಿರುಗಾಟದ ಸೈಕಲ್ಲುಗಳನ್ನೇ; ಅಡವಿಟ್ಟು ಬದುಕುವುದರೊಂದಿಗೆ, ತಾವು ಹೆತ್ತ ಮಕ್ಕಳನ್ನೇ ಜೀತಕ್ಕಿಟ್ಟು ಬದುಕುತ್ತಿದ್ದವರ, ಮಣ್ಣಲ್ಲಿ ಮಣ್ಣಾಗಿದ್ದವರ ಬದುಕಿನ ಭವಿಷ್ಯಕ್ಕಾಗಿ ಅದ್ಭುತ ಕಾರ್ಯಕ್ರಮದ ಮೂಲಕ ದುಡಿದರು.

ಮೈಸೂರು ಜಿಲ್ಲೆಯ ಹುಣಸೂರಿನ ಕಲ್ಲಹಳ್ಳಿಯಲ್ಲಿ ಜನ್ಮ ತಾಳಿ, ಸಾಮಾನ್ಯರಲ್ಲಿ ಸಾಮಾನ್ಯರಾಗಿ ಬೆಳೆದು ಬಂದು ದೇಶದ ರಾಜಕೀಯಕ್ಕೊಂದು ಹೊಸ ಸಾಮಾಜಿಕ ನ್ಯಾಯದ ಆಯಾಮವನ್ನು ತಂದು ಕೊಟ್ಟ ದೇವರಾಜ ಅರಸು ಅಂದಿಗೂ, ಇಂದಿಗೂ ಮತ್ತು ಎಂದೆಂದಿಗೂ ಪ್ರಸ್ತುತರು. ಅರಸರಳಿದರೂ ಅವರ ಆಡಳಿತದಲ್ಲಿ ಸಾಧಿಸಿದ ಜನಹಿತ ಕಾರ್ಯಕ್ರಮಗಳು ಜನಮಾನಸದಲ್ಲಿ ಇಂದಿಗೂ ಹಸಿರಾಗಿದೆ.

1970ರ ದಶಕದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ದೇಶದ ಪ್ರಧಾನಿಯಾಗಿ ಬಡವರು, ದೀನ–ದಲಿತರ ಪರವಾದ ಹತ್ತು ಹಲವು, ಒಟ್ಟಾರೆ ಜನಪರ ಕಾರ್ಯಕ್ರಮಗಳು ಮತ್ತು ಘಟನೆಗಳಿಗೆ ಕಾರಣೀಭೂತರಾದರು. ಅವರ ಕೃಪಾಶ್ರಯದಿಂದ ಕರ್ನಾಟಕದ ಮುಖ್ಯಮಂತ್ರಿಯಾಗಿ ಪ್ರತಿಷ್ಠಾಪಿತರಾದ ಡಿ. ದೇವರಾಜ ಅರಸರು ಸಾಮಾಜಿಕ ನ್ಯಾಯದ ಹರಿಕಾರರೆಂದೇ ತಮ್ಮ ಸಾಧನೆಗಳಿಂದ ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿ ಉಳಿದರು. 1978ರಲ್ಲಿ ನನ್ನಂತಹ ಹಲವಾರು ಯುವಕರು ಶಾಸಕರಾಗಿ ಆಯ್ಕೆಯಾಗಲು ಕಾರಣಕರ್ತರಾದ ಶ್ರೀಮಾನ್ ಅರಸರು, ಅಂದಿನ ಶಾಸಕಾಂಗ ಪಕ್ಷದ ಸಭೆಯಲ್ಲಿ ಆಡಿದ ಮಾತುಗಳು ನಮ್ಮೆದೆಯಲ್ಲಿ ಇಂದಿಗೂ ಹಸಿರಾಗಿವೆ. ಅವರೆಂದದ್ದು;

- **ಒಂದು ಪಕ್ಷದ ಚಿಹ್ನೆಯಡಿ ಶಾಸಕರಾಗಿ ಚುನಾಯಿತರಾದ ಮೇಲೆ ನೀವು ಇಡೀ ತಾಲೂಕಿನ (ಕ್ಷೇತ್ರದ) ಸರ್ವ ಜನರ ಪ್ರತಿನಿಧಿಯೇ ಹೊರತು, ಒಂದು ಪಕ್ಷ, ಒಂದು ಜಾತಿ, ಒಂದು ಧರ್ಮದ ಪ್ರತಿನಿಧಿಯಲ್ಲ ಎಂಬುದು ಸದಾ ನಿಮ್ಮ ಮನಸಿನಲ್ಲಿದ್ದು, ಸರ್ವಜನರ ಪ್ರತಿನಿಧಿಯಾಗಿಯೇ ಕೆಲಸ ಮಾಡುವುದು ನಿಮ್ಮ ಪರಮ ಧ್ಯೇಯವಾಗಿರಬೇಕು.**
- **ಎಲ್ಲದಕ್ಕೂ ರಾಜಕಾರಣ ಮಾಡಬಾರದು. ಶಾಸಕರಾಗಿ ನೀವು ಬಳಸುವ ಭಾಷೆ ಜನಪ್ರೀತಿಯ ಭಾಷೆಯಾಗಿರಬೇಕು. ನಿಮ್ಮ ಜೀವನದಲ್ಲಿ ಕಡ್ಡಾಯವಾಗಿ ಪಾಲಿಸಲೇಬೇಕಾದ ಎರಡು ವಿಷಯಗಳೆಂದರೆ ಕ್ಷಮಾ ಧರ್ಮ ಮತ್ತು ಕೃತಜ್ಞತೆ.**
- **ಚುನಾವಣೆಯಲ್ಲಿ ನಿಮ್ಮನ್ನೆದುರಿಸುವ ಎದುರು ಪಕ್ಷದವರು ನಿಮ್ಮ ಚುನಾವಣಾ ಕಾಲಕ್ಕಷ್ಟೇ ವಿರೋಧಿಗಳೇ ಹೊರತು ನಿಮ್ಮ ಶಾಶ್ವತ ಶತ್ರುಗಳಲ್ಲ. ನೀವು ಚುನಾವಣೆಯಲ್ಲಿ ಗೆದ್ದು ಶಾಸಕರಾದ ನಂತರ ಚುನಾವಣೆಯ ಎಲ್ಲಾ ಕಹಿ ಘಟನೆಗಳನ್ನು ಮರೆತು ವಿಶ್ವಾಸದಿಂದ ಸಕಲರ ಸ್ನೇಹಮಯಿಯಾಗಿ ಕೆಲಸ ಮಾಡಬೇಕು.**
- **ಬಹಳಷ್ಟು ಜನ ನಿಮ್ಮ ಗೆಲುವಿಗೆ ಸಹಾಯ ಮಾಡಿರುತ್ತಾರೆ. ಅವರೊಡನೆ ಕೃತಜ್ಞತಾ ಮನೋಧರ್ಮದಿಂದ ವರ್ತಿಸಬೇಕು. ನಿಮ್ಮಲ್ಲಿ ಬಂದಾಗ ಅಂತಹವರನ್ನು ಗೌರವಿಸಬೇಕು. ಇದೆಲ್ಲದರಿಂದ ನಿಮ್ಮ ವ್ಯಕ್ತಿತ್ವ, ನಿಮ್ಮ ಘನತೆ ಎತ್ತರವಾಗುತ್ತದೆ.**

ಅಂದು ಅರಸರಾಡಿದ ಮಾತುಗಳು ಈಗಲೂ ವಿಧಾನಸೌಧದ ಮೂರನೇ ಮಹಡಿಯಲ್ಲಿ ಹೋಗುವಾಗ ರಿಂಗಣಿಸುತ್ತವೆ. ನಾನು ಅವರ ಮಾತುಗಳನ್ನು ರಾಜಕಾರಣದ ವೇದ ಎಂದು ತಿಳಿದು ಬಾಳಿದವನು. 1972 ರಿಂದ 1978ರ ತನಕ ಮುಖ್ಯಮಂತ್ರಿಗಳಾಗಿ ಜವಾಬ್ದಾರಿ ನಿರ್ವಹಿಸಿದ ಅರಸರು, ಶ್ರೀಮತಿ ಇಂದಿರಾಗಾಂಧಿಯವರು ತುರ್ತು ಪರಿಸ್ಥಿತಿಯಲ್ಲಿ ಜಾರಿಗೆ ತಂದ 20 ಅಂಶಗಳ ಕಾರ್ಯಕ್ರಮಗಳನ್ನು ಅತ್ಯಂತ ಸಮರ್ಥವಾಗಿ ಅನುಷ್ಠಾನಕ್ಕೆ ತಂದರು.

ದೇಶದ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳು ತುರ್ತು ಪರಿಸ್ಥಿತಿಯನ್ನು ತಮ್ಮ ರಾಜಕೀಯ ವಿರೋಧಿಗಳನ್ನು ಹಣಿಯಲು ಬಳಸಿಕೊಂಡರೆ, ಅರಸರು ಮಾತ್ರ ಇಂತಹ ಪರಿಸ್ಥಿತಿಯನ್ನು ನಾಡಿನ ಸಮಗ್ರ ಅಭಿವೃದ್ಧಿಗಾಗಿ ಬಳಸಿಕೊಂಡರು.

ಇಂದಿರಾಗಾಂಧಿಯವರ ಹೆಸರಿನೊಡನೆ ಕಾಂಗ್ರೆಸ್ಸಿನ ಶಕ್ತಿಯಾಗಿ ಹೊರಹೊಮ್ಮಿದ ದೇವರಾಜ ಅರಸರು ಜನ ಕೊಟ್ಟ ಅಧಿಕಾರವನ್ನು ಜನರಿಗಾಗಿಯೇ ಹೇಗೆಲ್ಲಾ ಬಳಸಿಕೊಂಡರು ಎನ್ನುವುದು ಈಗ ಇತಿಹಾಸ.

ಕಾಂಗ್ರೆಸ್ಸಿನ ಜನನಾಯಕ ದೇವರಾಜ ಅರಸರು ತಮ್ಮ ಆಡಳಿತವನ್ನು ಉಟ್ಟ ಬಟ್ಟೆಯನ್ನೇ; ಉಳುವ ಎತ್ತುಗಳನ್ನೇ; ಉಣ್ಣುವ ತಟ್ಟೆ–ಬಟ್ಟಲನ್ನೇ; ಮಡದಿಯ ಮಾಂಗಲ್ಯವನ್ನೇ; ತಮ್ಮ ತಿರುಗಾಟದ ಸೈಕಲ್ಲುಗಳನ್ನೇ; ಅಡವಿಟ್ಟು ಬದುಕುವುದರೊಂದಿಗೆ, ತಾವು ಹೆತ್ತ ಮಕ್ಕಳನ್ನೇ ಜೀತಕ್ಕಿಟ್ಟು ಬದುಕುತ್ತಿದ್ದವರ, ಮಣ್ಣಲ್ಲಿ ಮಣ್ಣಾಗಿದ್ದವರ ಬದುಕಿನ ಭವಿಷ್ಯಕ್ಕಾಗಿ ಅದ್ಭುತ ಕಾರ್ಯಕ್ರಮದ ಮೂಲಕ ದುಡಿದರು.

ಉಳುವವನೇ ಹೊಲದೊಡೆಯ ಎಂಬ ಐತಿಹಾಸಿಕ **ಭೂ ಸುಧಾರಣಾ** ಕಾನೂನಿನ ಮೂಲಕ ಶತಮಾನಗಳಿಂದ ನಾನು ಉಳುತ್ತಿರುವ ಭೂಮಿ ನನ್ನದಾಗಲಿಲ್ಲವಲ್ಲಾ ಎಂದು ಕೊರಗುತ್ತಿದ್ದ ಲಕ್ಷಾಂತರ ಗೇಣಿದಾರರು ಅರಸರ ಅಚಲ ನಿರ್ಧಾರದಿಂದಾಗಿ ಭೂ ಮಾಲೀಕರಾದರು. ಪ್ರಾಕೃತಿಕ ನ್ಯಾಯದಡಿಯಲ್ಲಿ ಸುಮಾರು 21 ಲಕ್ಷ ಎಕರೆ ಭೂಮಿಯನ್ನು ಅರಸರು ಗೇಣಿದಾರರಿಗೆ ಹಂಚಿದರು. ಲಕ್ಷಾಂತರ ಜೀತಗಾರರು ಜೀತದಿಂದ ವಿಮುಕ್ತಿ ಪಡೆದರು. ಗ್ರಾಮೀಣ ವಿದ್ಯಾರ್ಥಿಗಳಿಗೆ ದಲಿತ, ಹಿಂದುಳಿದ, ಅಲ್ಪಸಂಖ್ಯಾತ, ಸಾಮಾನ್ಯ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿ ನಿಲಯಗಳನ್ನು ಕಟ್ಟಿ ವಿದ್ಯಾರ್ಜನೆಗೆ ಅನುವು ಮಾಡಿಕೊಟ್ಟರು.

ಇವತ್ತೇನಾದರೂ ಬಡವರ ಮಕ್ಕಳು ತಹಸೀಲ್ದಾರ್, ಎಸಿ, ಡಿಸಿ, ಡಿವೈಎಸ್ಪಿ, ಎಸ್ಪಿ ಮುಂತಾಗಿ ಆಗಿದ್ದರೆ ಅದು ಅರಸರು ಜಾರಿಗೆ ತಂದ **ಮೀಸಲಾತಿಯ** ಮಹಾ ಫಲ. ಜೊತೆಗೆ ಅಂಬೇಡ್ಕರ್‌ರವರು ಸಂವಿಧಾನದಲ್ಲಿ ಹೇಳಿರುವಂತೆ ಎಲ್ಲಾ ಜಾತಿ, ಜನಾಂಗ, ಧರ್ಮ, ಭಾಷಿಕರಿಗೆ ರಾಜಕೀಯದಲ್ಲಿ ಅವಕಾಶ ಮಾಡಿಕೊಟ್ಟರು. ನಾನು ಕಂಡಂತೆ 1978ರಲ್ಲಿ ರಾಜಕೀಯ ಅಧಿಕಾರದಿಂದ ಆದ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ ಪರಿವರ್ತನೆಗಳನ್ನು ಪ್ರಸ್ತುತ ದಶಕದಲ್ಲಿ ಹೋಲಿಸಲು ಸಾಧ್ಯವೇ ಇಲ್ಲ.

ಇದೀಗ ನನ್ನ ನಾಡಲ್ಲೂ ವಿಶ್ವಾಸದ ರಾಜಕಾರಣ, ದ್ವೇಷದ ರಾಜಕಾರಣವಾಗಿ ಪರಿವರ್ತನೆಯಾಗುತ್ತಿದೆ. ಶೋಷಿತರ, ತುಳಿತಕ್ಕೊಳಗಾದವರ, ಇಲ್ಲದವರ ಶಿಕ್ಷಣ, ಉದ್ಯೋಗಕ್ಕಿದ್ದ ಮೀಸಲಾತಿ ಇಂದು ಉಳ್ಳವರ ಡಾರ್ಲಿಂಗ್ ಆಗುತ್ತಿದೆ. ನಾಚಿಕೆಗೆಟ್ಟ ರಾಜಕಾರಣ, ಅಭಿವೃದ್ಧಿ ವಿರೋಧಿ ಆಡಳಿತ ಕೆಳ ಹಂತದಿಂದ ಮೇಲ್ಮಟ್ಟದವರೆಗೂ ಕಾಣುತ್ತಿದೆ. ಜನರ ಶ್ರಮದ ದುಡಿಮೆಯ ಹಣದ ಮೇಲೆ ನಿಂತು ಬಂಗಲೆ, ಬಂಗಾರದೊಂದಿಗೆ ಮೆರೆಯುತ್ತಿರುವ ರಾಜಕಾರಣಿಗಳು ಎದುರಾ ಎದುರಾ ನಿಂತು ನಾನು ಸತ್ಯವಂತ, ನೀನು ಕಳ್ಳ ಎಂದು ಹೂಂಕರಿಸುತ್ತಾ ಜನರೆದುರು ಬೆತ್ತಲಾಗುತ್ತಿದ್ದಾರೆ. ಮುಂದಿನ ದಿನಗಳು ಎತ್ತ ಸಾಗಲಿವೆಯೋ? ಭವಿಷ್ಯದ ಭವ್ಯ ಭಾರತ ಹುಸಿಯಾಗುತ್ತಿದೆಯೋ...?

ಕೆಆರ್‌ಎಸ್ ಡ್ಯಾಂನಿಂದ 12 ಸಾವಿರ ಕ್ಯುಸೆಕ್ ನೀರು ಬಿಡುಗಡೆ: ರಂಗನತಿಟ್ಟು ದೋಣಿ ವಿಹಾರಕ್ಕೆ ತಡೆ

- ಪ್ರವಾಸಿಗರ ಹಿತದೃಷ್ಟಿಯಿಂದ ದೋಣಿಯಾನಕ್ಕೆ ತಾತ್ಕಾಲಿಕ ಬ್ರೇಕ್
- ನದಿಯಲ್ಲಿ ನೀರಿನ ಪ್ರಮಾಣ ತಗ್ಗಿದರೆ ದೋಣಿ ವಿಹಾರ ಆರಂಭ
- ನದಿ ಪಾತ್ರದತ್ತ ಪ್ರವಾಸಿಗರು ತೆರಳದಂತೆ ಕಟ್ಟೆಚ್ಚರ
- **10** ದಿನದಲ್ಲಿ ಕೆಆರ್‌ಎಸ್‌ನಲ್ಲಿ **6** ಅಡಿ ನೀರು ಕಡಿಮೆ



ಮೈಸೂರು,ಆ.19(ಎಂಟಿವೈ)– ಕೆಆರ್‌ಎಸ್ ಜಲಾಶಯದಿಂದ ಕಾವೇರಿ ನದಿಗೆ 12,960 ಕ್ಯುಸೆಕ್ ನೀರು ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಪ್ರಸಿದ್ಧ ಪ್ರವಾಸಿ ತಾಣ ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ವಿಹಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಕಾವೇರಿ ನದಿಯಲ್ಲಿ ಹರಿಯುವ ನೀರಿನ ಪ್ರಮಾಣ ಹೆಚ್ಚಾದ ಹಿನ್ನೆಲೆಯಲ್ಲಿ ಪ್ರವಾಸಿಗರ ಹಿತದೃಷ್ಟಿಯಿಂದ ದೋಣಿ ವಿಹಾರಕ್ಕೆ ತಡೆಯೊಡ್ಡಲಾಗಿದೆ. ನೀರಿನ ಪ್ರಮಾಣ ತಗ್ಗುವವರೆಗೂ ಪ್ರವಾಸಿಗರಿಗೆ ದೋಣಿ ವಿಹಾರದ ಸೊಬಗು ಸವಿಯಲು ಸಾಧ್ಯವಿಲ್ಲ. ಸುಪ್ರಿಂಕೋರ್ಟ್ ಆದೇಶದಂತೆ ತಮಿಳುನಾಡಿಗೆ ಕೆಆರ್‌ಎಸ್ ಅಣೆಕಟ್ಟೆಯಿಂದ ನೀರು ಬಿಡಬೇಕಾದ ಅನಿವಾರ್ಯತೆ ಎದುರಾಗಿರುವ ಹಿನ್ನೆಲೆಯಲ್ಲಿ ಕಳೆದ 5 ದಿನಗಳಿಂದ ಕಾವೇರಿ ನದಿ ಮೂಲಕ ನೀರು ಹರಿಸಲಾಗುತ್ತಿದೆ. ಕಳೆದ 5 ದಿನಗಳಿಂದ 12 ಸಾವಿರ ಕ್ಯುಸೆಕ್ ನೀರು ನದಿಗೆ ಬಿಡುತ್ತಿರುವುದರಿಂದ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗುತ್ತಿದೆ. ವಿವಿಧ ಕಾಲುವೆ ಮೂಲಕವೂ ನದಿಗೆ ಸೇರುತ್ತಿರುವ ನೀರಿನ ಪ್ರಮಾಣ ಹೆಚ್ಚಾಗಿರುವುದರಿಂದ ಕಾವೇರಿ ನದಿ ಮೈತುಂಬಿ ಹರಿಯುತ್ತಿದೆ.

ದೋಣಿ ವಿಹಾರ ಸ್ಥಗಿತ: ಅಪರೂಪದ ಪಕ್ಷಿಗಳ ಸಂತತಿಗೆ ಆಶ್ರಯ ನೀಡಿರುವ ರಂಗನತಿಟ್ಟು ನೈಸರ್ಗಿಕವಾಗಿ ರೂಪುಗೊಂಡಿರುವ ಹಲವು ದ್ವೀಪಗಳನ್ನು ಹೊಂದಿದೆ. ರಂಗನತಿಟ್ಟು ಪಕ್ಷಿಧಾಮವು ಪ್ರವಾಸಿಗರು ಹಾಗೂ ಪಕ್ಷಿಪ್ರಿಯರ ಅಚ್ಚುಮೆಚ್ಚಿನ ತಾಣವಾಗಿದೆ. ರಂಗನತಿಟ್ಟು ಪಕ್ಷಿಧಾಮಕ್ಕೆ ಬರುವ ಪ್ರವಾಸಿಗರಲ್ಲಿ ಬಹುತೇಕರು ದೋಣಿ ವಿಹಾರ ಮಾಡಲು ಇಚ್ಛಿಸುತ್ತಾರೆ. ಆದರೆ, ನದಿಯಲ್ಲಿ ನೀರಿನ ಪ್ರಮಾಣ ಹಾಗೂ ಹರಿವಿನ ವೇಗ ಹೆಚ್ಚಾಗಿರುವುದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ದೋಣಿ ವಿಹಾರ ಸ್ಥಗಿತಗೊಳಿಸಲಾಗಿದೆ.

ರಂಗನತಿಟ್ಟು ಪಕ್ಷಿಧಾಮದಲ್ಲಿ 16 ಬೋಟ್‌ಗಳಿದ್ದು, ವಾರಾಂತ್ಯದಲ್ಲಿ 3 ರಿಂದ 3500 ಮಂದಿ ದೋಣಿ ವಿಹಾರ ಮಾಡುತ್ತಿದ್ದರು. ಉಳಿದ ದಿನ 800 ರಿಂದ 1100 ಮಂದಿ ದೋಣಿ ವಿಹಾರದಲ್ಲಿ ಸೊಬಗು ಸವಿಯುತ್ತಿದ್ದರು. ಪ್ರತಿದಿನ ಬೆಳಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆವರೆಗೆ ದೋಣಿ ವಿಹಾರಕ್ಕೆ ಅವಕಾಶವಿರುತ್ತಿತ್ತು. ಇದೀಗ ದೋಣಿ ವಿಹಾರ ಸ್ಥಗಿತಗೊಳಿಸಿರುವುದರಿಂದ ರಂಗನತಿಟ್ಟು ಪಕ್ಷಿಧಾಮಕ್ಕೆ ಬರುವ ಪ್ರವಾಸಿಗರು ವಾಚ್ ಟವರ್‌ನಿಂದಲೇ ವಿವಿಧ ದ್ವೀಪಗಳಲ್ಲಿರುವ ಪಕ್ಷಿ ಸಂಕುಲವನ್ನು ಕಣ್ತುಂಬಿ ಕೊಳ್ಳುತ್ತಿದ್ದಾರೆ. ಇನ್ನು 4 ದಿನಗಳವರೆಗೆ ದೋಣಿ ವಿಹಾರ ಸ್ಥಗಿತಗೊಳ್ಳುವ ಸಾಧ್ಯತೆ ಇದೆ. ಬುಧವಾರ (ಆ.23) ನದಿಯಲ್ಲಿ ನೀರಿನ ಪ್ರಮಾಣ ಹಾಗೂ ಅಣೆಕಟ್ಟೆಯಿಂದ ಬಿಡುಗಡೆಯಾಗುತ್ತಿರುವ ನೀರಿನ ಪ್ರಮಾಣ ಅವಲೋಕಿಸಿ, ನೀರಿನ ಹರಿವಿನ ಪ್ರಮಾಣ ಕ್ಷೀಣಿಸಿದ್ದರೆ ದೋಣಿ ವಿಹಾರ ಪುನರಾರಂಭಿಸಲಾಗುತ್ತದೆ. ನೀರು ಹೆಚ್ಚಾಗಿದ್ದರೆ ಇನ್ನು 3–4 ದಿನ ಸ್ಥಗಿತಗೊಳಿಸಲಾಗುತ್ತದೆ.

10 ದಿನದಲ್ಲಿ 6 ಅಡಿ ಕುಸಿತ: ಕೆಆರ್‌ಎಸ್ ಜಲಾಶಯದಲ್ಲಿ 10 ದಿನದಲ್ಲಿ 6 ಅಡಿ ನೀರು ಕಡಿಮೆಯಾಗಿದೆ. ಆ.9ರಂದು ಜಲಾಶಯದಲ್ಲಿ 113.28 ಅಡಿ ನೀರು ಸಂಗ್ರಹವಾಗಿತ್ತು. ಆ.19ರಂದು ಬೆಳಗ್ಗೆ 6 ಗಂಟೆ ವೇಳೆಗೆ 107.66 ಅಡಿ ನೀರು ಸಂಗ್ರಹವಾಗಿದೆ. ಇದರಿಂದ 6 ಅಡಿ ನೀರು ಕಡಿಮೆಯಾಗಿದೆ. ಇಂದು ಜಲಾಶಯಕ್ಕೆ 2349 ಕ್ಯುಸೆಕ್ ನೀರು ಒಳಹರಿವಿದ್ದರೆ, ಜಲಾಶಯದಿಂದ ವಿವಿಧ ನಾಲೆ ಹಾಗೂ ಕಾವೇರಿ ನದಿಗೆ ಬಿಟ್ಟಿರುವುದೂ ಸೇರಿದಂತೆ ಒಟ್ಟು 15,576 ಕ್ಯುಸೆಕ್ ನೀರು ಹೊರ ಹರಿವಿದೆ. ಮೈಸೂರು ಭಾಗದಲ್ಲಿ ಮಳೆ ಬರುತ್ತಿರುವುದರಿಂದ ಜಲಾಶಯದ ಒಳಹರಿವಿನ ಪ್ರಮಾಣ ಹೆಚ್ಚಾಗುವ ಸಾಧ್ಯತೆ ಇದೆ.

ಇಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವಾರ್ಷಿಕ ಮಹಾಸಭೆ

ಮೈಸೂರು, ಆ.19– ಹೆಚ್.ಡಿ.ಕೋಟೆ ತಾಲೂಕಿನ ಬೊಂಬಾಪುರದ ಕಬಿನಿ ಕಾನನ ಗೃಹದಲ್ಲಿ ಆ.20ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ವಾರ್ಷಿಕ ಮಹಾಸಭೆ ನಡೆಯಲಿದೆ. ಈ ಸಭೆಯಲ್ಲಿ ಸರ್ಕಾರಿ ನೌಕರರ ಸಂಘದ ವಿವಿಧ ಕಾರ್ಯಕ್ರಮಗಳು ಹಾಗೂ ಸರ್ಕಾರಿ ನೌಕರರ ಸಮಸ್ಯೆಗಳ ಬಗ್ಗೆಯೂ ಚರ್ಚಿಸಲಾಗುತ್ತದೆ ಎಂದು ಸಂಘದ ಜಿಲ್ಲಾ ಕಾರ್ಯದರ್ಶಿ ರೇವಣ್ಣ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು,ಆ.19–ಹಿಂದೂಸ್ಥಾನ್ ಏರೋನ್ಯಾಟಿಕ್ಸ್(ಲಿ) ಟೆಕ್ನಿಕಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಬೆಂಗಳೂರು ವತಿಯಿಂದ ಫಿಟ್ಟರ್, ಟರ್ನರ್, ಮೆಷಿನಿಷ್ಟ್, ಎಲೆಕ್ಟ್ರಿಷಿಯನ್, ವೆಲ್ಡರ್, COPA, ಫೌಂಡ್ರಿಮ್ಯಾನ್ ಮತ್ತು ಶೀಟ್ ಮೆಟಲ್ ವರ್ಕರ್ ಹಾಗೂ ಟ್ರೇಡ್‌ಗಳಿಗೆ ಫುಲ್ಟರ್ಮ್ ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅರ್ಹ ಅಭ್ಯರ್ಥಿಗಳು ಎನ್.ಆರ್. ಮೊಹಲ್ಲಾ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಸಹಾಯಕ ನಿರ್ದೇಶಕರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಅರ್ಜಿ ನಮೂನೆ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಕಚೇರಿಯಲ್ಲಿ ಸಲ್ಲಿಸಬೇಕು.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಐಟಿಐ ತೇರ್ಗಡೆ ಹೊಂದಿರಬೇಕು. ಕಡ್ಡಾಯವಾಗಿ www.apprenticeshipindia.org/candidate-registration ವೆಬ್‌ಸೈಟ್‌ನಲ್ಲಿ ನೋಂದಾಯಿಸಿಕೊಂಡು, ಅರ್ಜಿ ನಮೂನೆಯಲ್ಲಿ ಅಪ್ರೆಂಟಿಸ್ ನೋಂದಣಿ ಸಂಖ್ಯೆ ನಮೂದಿಸುವುದು. ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ಸ್ಟೈಫಂಡ್ (ಸರ್ಕಾರ ನಿಗದಿಪಡಿಸಿದಂತೆ) ನೀಡಲಾಗುವುದು. ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ಆ.29 ಕೊನೆಯ ದಿನಾಂಕವಾಗಿರುತ್ತದೆ.

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರನ್ನು, ಕಚೇರಿ ವೇಳೆಯಲ್ಲಿ ಅಥವಾ ದೂ: 0821–2489972 ಅನ್ನು ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಭಾನುವಾರ 20 ಆಗಸ್ಟ್ 2023

ಇಂದು ಕು.ನಿನಾದ ಎಸ್.ಹೆಗ್ಡೆ ರಂಗ ಪ್ರವೇಶ



ಮೈಸೂರು,ಆ.19–ಮೈಸೂರಿನ ಸರ್ವೇಶ್ವರ ನೃತ್ಯ ಕಲಾಮಂದಿರ ಮತ್ತು ಪಂಕಜ ಪ್ರದರ್ಶಕ ಕಲೆಗಳ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಮೈಸೂರಿನ ಕಲಾ ಮಂದಿರದಲ್ಲಿ ಆ.20 (ಭಾನುವಾರ) ರಂದು ಸಂಜೆ 6 ಗಂಟೆಗೆ ನಾಟ್ಯ ವಿದುಷಿ ಶ್ರೀಮತಿ ಪಂಕಜ ರಾಮಕೃಷ್ಣಯ್ಯನವರ ಶಿಷ್ಯೆ ಹಾಗೂ ಮೈಸೂರು ನಗರ ಅಪರಾಧ ದಳ(ಸಿಸಿಬಿ)ದ ಅಸಿಸ್ಟೆಂಟ್ ಕಮಿಷನರ್ ಆಫ್ ಪೊಲೀಸ್ (ಎಸಿಪಿ) ಎಸ್.ಎಸ್.ಸಂದೇಶ್ ಕುಮಾರ್ ಮತ್ತು ಶ್ರೀಮತಿ ಕೆ.ದೀಪ್ತಿ ದಂಪತಿ ಪುತ್ರಿ ಕು. ನಿನಾದ ಎಸ್.ಹೆಗ್ಡೆ ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ರಾಜವಂಶಸ್ಥ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಎಸ್.ರಾಚಯ್ಯ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಆರಗ ಜ್ಞಾನೇಂದ್ರ, ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಸಂಸದ ಪ್ರತಾಪ್ ಸಿಂಹ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಭಾಗವಹಿಸುವರು. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಹಾಗೂ ಜಾನಪದ ಕಲಾವಿದೆ ಡಾ. ಮಾತಾ ಬಿ.ಮಂಜಮ್ಮ ಜೋಗತಿ ಕಾರ್ಯಕ್ರಮ ಉದ್ಘಾಟಿಸುವರು. ಇದೇ ವೇಳೆ ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಚಂಬಿ ಪುರಾಣಿಕ್, ಧೀಮಹಿ ಸೆಂಟರ್ ಆಫ್ ಆರ್ಟ್ಸ್ ನಿರ್ದೇಶಕರಾದ ಡಾ.ಶ್ರೀಮತಿ ಸೀತಾ ಕೋಟೆ, ಬೆಂಗಳೂರಿನ ಲಹರಿ ಮ್ಯೂಸಿಕ್‌ನ ನಿರ್ದೇಶಕರಾದ ಲಹರಿ ವೇಲು ಅವರನ್ನು ಸನ್ಮಾನಿಸಲಾಗುವುದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್ ಉಪಸ್ಥಿತರಿರುವರು.

ನೀರು ನುಗ್ಗಿ ಹಾನಿಯಾಗಿದ್ದ ಮನೆಗಳ ಕುಟುಂಬಗಳಿಗೆ ಪಾಲಿಕೆ ಪರಿಹಾರ ವಿತರಣೆ



ಮೈಸೂರು, ಆ.19(ಎಸ್‌ಬಿಡಿ)– ಮೈಸೂರಿನ ಗೋಕುಲಂನಲ್ಲಿ ಪೈಪ್ ಒಡೆದು ಮನೆಗಳಿಗೆ ನೀರು ನುಗ್ಗಿದ ಪರಿಣಾಮ ನಷ್ಟ ಉಂಟಾಗಿದ್ದವರಿಗೆ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಪರಿಹಾರ ನೀಡಲಾಯಿತು.

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರು, ಒಟ್ಟು 18 ಮನೆಗಳ ಮುಖ್ಯಸ್ಥರಿಗೆ ತಲಾ 10 ಸಾವಿರ ರೂ. ಪರಿಹಾರದ ಚೆಕ್ ವಿತರಿಸಿದರು. ಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್, ಎಸ್‌ಬಿಎಂ ಮಂಜು ಹಾಗೂ ಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.

ವಾರ್ಡ್ ನಂಬರ್ 3ರ ವ್ಯಾಪ್ತಿಯ ಕೆ.ಪಿ.ಕಾನ್ವೆಂಟ್ ರಸ್ತೆಯಲ್ಲಿ ಹಾದು ಹೋಗಿರುವ ಹೊಂಗಳ್ಳಿ 3ನೇ ಹಂತದ ಯೋಜನೆ ಮುಖ್ಯ ಕೊಳವೆ ಮಾರ್ಗ ಜು.18ರ ರಾತ್ರಿ 10.30ರ ಸಮಯದಲ್ಲಿ ಒಡೆದಿದ್ದರ ಪರಿಣಾಮ 7 ಕಟ್ಟಡಗಳಲ್ಲಿನ ಒಟ್ಟು 18 ಮನೆಗಳಿಗೆ ನೀರು ನುಗ್ಗಿ ಆಹಾರ ಸಾಮಗ್ರಿ, ಬಟ್ಟೆಗಳು, ಪೀಠೋಪಕರಣ, ವಿದ್ಯುತ್ ಉಪಕರಣಗಳಿಗೆ ಹಾನಿಯಾಗಿತ್ತು. ಬಳಿಕ ನೀರು ಸರಬರಾಜು ಮತ್ತು ಒಳಚರಂಡಿ ಉಪ ವಿಭಾಗದ ಇಂಜಿನಿಯರ್‌ಗಳು ನಷ್ಟ ಉಂಟಾಗಿದ್ದ ಎಂ.ಅಮರ್ ನಾಥ್, ಪವಿತ್ರ, ಎಂ.ರುಕ್ಮಿಣಿ, ಪದ್ಮ, ನಾಗೇಶ್, ಪೂಜಾ, ಲಕ್ಷ್ಮಿನರಸಮ್ಮ, ಭವಾನಿ, ಎನ್.ಕೃಷ್ಣ, ಜಯಮ್ಮ, ಜಿ.ಎಂ. ಪ್ರದೀಪ್, ಎಸ್.ವಿವೇಕ್, ಲಕ್ಷ್ಮಿ, ಟಿ.ಸಿ. ಧನಂಜಯ, ಎಂ.ಶಿಲ್ಪ, ಸುಜಯ, ಕರುಣಾ ಸಾಗರ್, ಜೆ.ಎಂ.ದಿಲೀಪ್ ಅವರ ಮನೆಗಳಲ್ಲಿ ಪರಿಶೀಲನೆ ನಡೆಸಿ, ಮಾಹಿತಿ ದಾಖಲಿಸಿಕೊಂಡಿದ್ದರು. ಮನೆಗಳಿಗೆ ನೀರು ನುಗ್ಗಿದ ಸಂದರ್ಭದಲ್ಲೇ ಸ್ಥಳ ಪರಿಶೀಲನೆ ನಡೆಸಿದ್ದ ಸ್ಥಳೀಯ ಕಾರ್ಪೊರೇಟರ್ ಕೆ.ವಿ. ಶ್ರೀಧರ್, ಮರುದಿನ ಸಂತ್ರಸ್ತ ಕುಟುಂಬಗಳಿಗೆ ಆಹಾರಧಾನ್ಯದ ಕಿಟ್ ನೀಡಿದ್ದರು.

ಕೇರಳದ ಕುಗ್ರಾಮದಲ್ಲಿ ಆಫ್ರಿಕನ್ ಹಂದಿ ಜ್ವರ ಪತ್ತೆ; ಎಲ್ಲೆಡೆ ವ್ಯಾಪಕ ಕಟ್ಟೆಚ್ಚರ

ಕೊಚ್ಚಿನ್: ಕೇರಳದ ಕುಗ್ರಾಮದಲ್ಲಿ ಆಫ್ರಿಕನ್ ಹಂದಿ ಜ್ವರ ಪತ್ತೆಯಾಗಿದ್ದು, ಎಲ್ಲೆಡೆ ವ್ಯಾಪಕ ಕಟ್ಟೆಚ್ಚರ ವಹಿಸಲಾಗುತ್ತಿದೆ. ಉತ್ತರ ಕೇರಳದ ಕನಿಚಾರ್ ಗ್ರಾಮದಲ್ಲಿ ಆಫ್ರಿಕನ್ ಹಂದಿಜ್ವರದ ಏಕಾಏಕಿ ವರದಿಯಾಗಿದ್ದು, ಅದರ ನಂತರ ಜಿಲ್ಲಾಧಿಕಾರಿಗಳು ಅಲ್ಲಿನ ಎರಡು ಫಾರ್ಮ್‌ಗಳಲ್ಲಿ ಹಂದಿಗಳನ್ನು ಕೊಲ್ಲಲು ಆದೇಶಿಸಿದ್ದಾರೆ. ಶುಕ್ರವಾರ ಮಲೆಯಂಪಾಡಿಯಲ್ಲಿರುವ ಖಾಸಗಿ ಜಮೀನಿನಲ್ಲಿ ಜಿಲ್ಲಾ ಪಶುಸಂಗೋಪನೆ ಅಧಿಕಾರಿಗಳು ಜ್ವರ ದೃಢಪಟ್ಟಿದ್ದು, ಜಿಲ್ಲಾ ಅಧಿಕಾರಿಗಳು ಹಂದಿಗಳನ್ನು ಮತ್ತು 10 ಕಿಮೀ ವ್ಯಾಪ್ತಿಯಲ್ಲಿರುವ ಮತ್ತೊಂದು ಹತ್ತಿರದ ಜಮೀನಿನಲ್ಲಿರುವ ಹಂದಿಗಳನ್ನು ಕೊಲ್ಲಲು ಅಧಿಕಾರಿಗಳು ಆದೇಶಿಸಿದ್ದಾರೆ. ಅಲ್ಲದೆ ಅವುಗಳ ಮೃತದೇಹಗಳನ್ನು ಶಿಷ್ಟಾಚಾರದ ಪ್ರಕಾರ ಹೂಳುವಂತೆ ಆದೇಶಿಸಿದ್ದಾರೆ.

ಹಂದಿ ಸಾಕಾಣಿಕೆ ಕೇಂದ್ರದ ಸುತ್ತಲಿನ 1 ಕಿಲೋಮೀಟರ್ ಪ್ರದೇಶವನ್ನು ಸೋಂಕು ಪತ್ತೆಯಾದ ಪ್ರದೇಶವೆಂದು ಘೋಷಿಸಲಾಗಿದ್ದು, ಮತ್ತು 10 ಕಿಮೀ ವ್ಯಾಪ್ತಿಯನ್ನು ರೋಗ ಕಣ್ಗಾವಲು ವಲಯ ಎಂದು ಘೋಷಿಸಲಾಗಿದೆ. ಈ ಪ್ರದೇಶದಲ್ಲಿ ಹಂದಿ ಮಾಂಸದ ವಿತರಣೆ ಮತ್ತು ಮಾರಾಟ ಮತ್ತು ಇತರ ಸ್ಥಳಗಳಿಗೆ ಸಾಗಿಸುವುದನ್ನು 3 ತಿಂಗಳವರೆಗೆ ನಿಷೇಧಿಸಲಾಗಿದೆ ಎಂದರು.

ಕಳೆದ 2 ತಿಂಗಳ ಹಿಂದೆ ಹಾನಿಗೊಳಗಾದ ಜಮೀನಿನಿಂದ ಹಂದಿಗಳನ್ನು ಬೇರೆ ಹೊಲಗಳಿಗೆ ಸಾಗಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಲು ತುರ್ತು ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಸ್ಥಳೀಯ ಅಧಿಕಾರಿಗಳಿಗೆ ತಿಳಿಸಿದ್ದು. ಗ್ರಾಪಂ. ವ್ಯಾಪ್ತಿಯಲ್ಲಿ ಎಲ್ಲಿಯಾದರೂ ಹೊಸ ರೋಗದ ಪ್ರಕರಣಗಳು ವರದಿಯಾದಲ್ಲಿ ವಿಪತ್ತು ನಿರ್ವಹಣಾ ಅಧಿಕಾರಿಗಳಿಗೆ ಆದಷ್ಟು ಬೇಗ ಮಾಹಿತಿ ನೀಡಬೇಕು ಎಂದು ಈ ಸಂಬಂಧ ಆದೇಶದಲ್ಲಿ ತಿಳಿಸಲಾಗಿದೆ.

ರೋಗ ಮತ್ತಷ್ಟು ಹರಡುವುದನ್ನು ಪರಿಶೀಲಿಸಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳುವಂತೆ ಕುಗ್ರಾಮದಲ್ಲಿರುವ ಪಶುವೈದ್ಯಾಧಿಕಾರಿಗೆ ಸೂಚಿಸಲಾಗಿದೆ ಎಂದು ಅದು ಸೇರಿಸಲಾಗಿದೆ.

ಎರಡೂವರೆ ವರ್ಷಗಳ ನಂತರ ಸಚಿವ ಸಂಪುಟ ಪುನಾರಚನೆ



ವಿಜಯಪುರ: ಪ್ರಸ್ತುತ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ಎರಡೂವರೆ ವರ್ಷಗಳ ನಂತರ ಪುನಾರಚನೆಯಾಗುವ ಸಾಧ್ಯತೆ ಇದೆ ಎಂದು ಸಚಿವ ಸ್ಥಾನದ ಆಕಾಂಕ್ಷಿಯಾಗಿರುವ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಹೇಳಿದ್ದಾರೆ. ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಕುಲಕರ್ಣಿ, ಇತ್ತೀಚೆಗೆ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಅವರೂ ಇದೇ ಮಾತನ್ನು ಹೇಳಿರುವುದನ್ನು ಉಲ್ಲೇಖಿಸಿ, ಮಾತನಾಡಿದ್ದಾರೆ.

ಸಚಿವ ಸಂಪುಟದಲ್ಲಿ ಹೊಸ ಮುಖಗಳಿಗೆ ಅವಕಾಶ ಸಿಗಲಿದೆ ಎಂಬ ಮುನಿಯಪ್ಪ ಹೇಳಿಕೆಯಿಂದ ಸಚಿವ ಸ್ಥಾನ ಸಿಗದ ಕಾಂಗ್ರೆಸ್ ಶಾಸಕರಲ್ಲಿ ಸಂತಸ ಮೂಡಿದೆ. ಸಚಿವ ಸಂಪುಟ ಪುನಾರಚನೆಯಿಂದ ಎಲ್ಲ ಶಾಸಕರಿಗೂ ಸಚಿವರಾಗುವ ಅವಕಾಶ ದೊರೆಯಲಿದೆ. ಆದರೆ, ಮುಖ್ಯಮಂತ್ರಿ ಸ್ಥಾನಕ್ಕೆ ಸಂಬಂಧಿಸಿದಂತೆ ಪಕ್ಷದ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಹೇಳಿದ್ದಾರೆ. ಬಿಜೆಪಿಯ ಹಲವು ಶಾಸಕರು ಕಾಂಗ್ರೆಸ್ ಸೇರಲು ಮನಸ್ಸು ಮಾಡುತ್ತಿದ್ದಾರೆ ಎಂಬ ವರದಿಗಳ ಕುರಿತು ಪ್ರತಿಕ್ರಿಯಿಸಿದ ಕುಲಕರ್ಣಿ, ಪಕ್ಷದ ಬಗ್ಗೆ ಅಸಮಾಧಾನ ಹೊಂದಿರುವ ಹಲವು ಬಿಜೆಪಿ ಶಾಸಕರು ಕಾಂಗ್ರೆಸ್ ಸೇರಲು ಯೋಚಿಸುತ್ತಿದ್ದಾರೆ ಎಂದರು. ರಾಜ್ಯದಲ್ಲಿ ಕ್ಷಿಪ್ರ ರಾಜಕೀಯ ಬೆಳವಣಿಗೆಗೆ ನೀವು ಶೀಘ್ರದಲ್ಲೇ ಸಾಕ್ಷಿಯಾಗುತ್ತೀರಿ, ಅಲ್ಲಿ ಅನೇಕ ಬಿಜೆಪಿ ನಾಯಕರು ಕಾಂಗ್ರೆಸ್‌ಗೆ ಬರುತ್ತಾರೆ. ಬಿಜೆಪಿಯ ಕನಿಷ್ಠ 13ರಿಂದ 14 ಮಾಜಿ ಶಾಸಕರು ಕಾಂಗ್ರೆಸ್ ಸೇರುವ ನಿರೀಕ್ಷೆಯಿದೆ ಎಂದು ಮಾಜಿ ಸಚಿವರು ಹೇಳಿದ್ದಾರೆ.

ಕಾವಾ ವತಿಯಿಂದ 3 ದಿನಗಳ ಕಲಾ ಪ್ರದರ್ಶನ

ಮೈಸೂರು,ಆ.19–ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಕಾವಾ ಸಂಸ್ಥೆಯ ಅಂತಿಮ ವರ್ಷದ ವಿದ್ಯಾರ್ಥಿಗಳಿಂದ ಆ.21ರಿಂದ 23ರವರೆಗೆ 3 ದಿನಗಳ ಕಾಲ ವಾರ್ಷಿಕ ಕಲಾ ಪ್ರದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಆ.21ರಂದು ಬೆಳಗ್ಗೆ 11 ಗಂಟೆಗೆ ಸಂಸ್ಥೆಯ ಡೀನ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಚಿತ್ರಕಲಾವಿದರಾದ ಇಂದು ಆಂಟೋನಿ ಮತ್ತು ಸುರೇಶ್ ಜಯರಾಂ ಭಾಗವಹಿಸಲಿದ್ದಾರೆ. ಮೈಸೂರಿನ ಕಲಾ ಪ್ರೇಮಿಗಳು ಮತ್ತು ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಿನ ಕೊಡಗು ಮಾಡೆಲ್ ಸ್ಕೂಲ್‌ನಲ್ಲಿ ಪಾಂಡಂಡಾ ಚೀತಮ್ಮ ಬ್ಲಾಕ್ ಉದ್ಘಾಟನೆ



ಮೈಸೂರು,ಆ.19(ಬಿಎಲ್‌ಯು)– ಮೈಸೂರಿನ ವಿದ್ಯಾಶಂಕರ ಬಡಾವಣೆಯ ಕಾವೇರಿ ರಸ್ತೆಯಲ್ಲಿರುವ ಕೊಡಗು ಮಾಡೆಲ್ ಸ್ಕೂಲ್‌ನ ಎರಡನೇ ಮಹಡಿಯ ನೂತನ ಕಟ್ಟಡದ ಉದ್ಘಾಟನಾ ಕಾರ್ಯಕ್ರಮ ಶನಿವಾರ ನೆರವೇರಿತು.

ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ ಮೈಸೂರು ಪೂರ್ವದಡಿ ನಡೆಸುತ್ತಿರುವ ಕೊಡಗು ಮಾಡೆಲ್ ಸ್ಕೂಲ್‌ನ ಎರಡನೇ ಮಹಡಿಯನ್ನು ಮೂಲತಃ ಕೊಡಗಿನವರೇ ಆದ, ಕೊಲ್ಕತ್ತಾದ ಉದ್ಯಮಿ ಪಾಂಡಂಡಾ ಕಾರ್ಯಪ್ಪ ಕುಟುಂಬದವರು ನಿರ್ಮಿಸಿ ಕೊಟ್ಟಿದ್ದಾರೆ. ತಮ್ಮ ಅಜ್ಜಿ ಪಾಂಡಂಡಾ ಚೀತಮ್ಮ ಅವರ ನೆನಪಿನಾರ್ಥ ನಿರ್ಮಾಣ ಮಾಡಿರುವ ಶಾಲಾ ಕಟ್ಟಡದ ಎರಡನೇ ಮಹಡಿಗೆ "ಪಾಂಡಂಡಾ ಚೀತಮ್ಮ ಬ್ಲಾಕ್" ಎಂದು ನಾಮಕರಣ ಮಾಡಲಾಗಿದೆ. ಈ ಕಟ್ಟಡದಲ್ಲಿ ವಿಶಾಲವಾದ ಆಡಿಟೋರಿಯಂ, ಶಾಲಾ ಕೊಠಡಿ ಹಾಗೂ ಶೌಚಾಲಯವಿದೆ. ಮಾಡೆಲ್ ಸ್ಕೂಲ್‌ನಲ್ಲಿ ಎಲ್‌ಕೆಜಿಯಿಂದ 10ನೇ ತರಗತಿವರೆಗೆ ಸಾವಿರಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಪ್ರತಿ ವರ್ಷ ಶೇಕಡ ನೂರರಷ್ಟು ಫಲಿತಾಂಶ ಬರುತ್ತಿದೆ. ಮಕ್ಕಳ ವಿದ್ಯಾರ್ಜನೆಗೆ ಅನುಕೂಲವಾಗಲೆಂದು ಪಾಂಡಂಡಾ ಕಾರ್ಯಪ್ಪ ಕುಟುಂಬದವರು ಕೊಡಗು ಮಾಡೆಲ್ ಸ್ಕೂಲ್‌ಗೆ ಎರಡನೇ ಮಹಡಿ ನಿರ್ಮಿಸಿಕೊಟ್ಟಿದ್ದಾರೆ.

ಶನಿವರ ನಡೆದ ಉದ್ಘಾಟನಾ ಸಮಾರಂಭಕ್ಕೂ ಮುನ್ನ ಶಾಲೆಯಲ್ಲಿ ಬೆಳಗ್ಗೆ ಗಣಪತಿ ಹೋಮ, ಸರಸ್ವತಿ ಪೂಜೆ ಸೇರಿದಂತೆ ಹಲವು ಪೂಜಾ ಕಾರ್ಯಗಳು ನಡೆದವು. ಈ ಸಂದರ್ಭದಲ್ಲಿ ಹಾಜರಿದ್ದ ಪಾಂಡಂಡಾ ಕಾರ್ಯಪ್ಪ ಕುಟುಂಬಸ್ಥರು ಕೊಡಗು ಮಾಡೆಲ್ ಸ್ಕೂಲ್ ಮತ್ತಷ್ಟು ಪ್ರಗತಿ ಹೊಂದುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಲಿ ಎಂದು ಶುಭ ಹಾರೈಸಿದರು.

ಶ್ರೀ ಕಾವೇರಿ ಕೊಡವ ಅಸೋಸಿಯೇಷನ್‌ನ ವಿಶೇಷ ಸಲಹೆಗಾರರೂ ಆದ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ಅಸೋಸಿಯೇಷನ್ ಅಧ್ಯಕ್ಷ ಪಿ.ಎಸ್.ದೇವಯ್ಯ, ಕಾರ್ಯದರ್ಶಿ ಕೆ.ಎಂ.ಬೆಳ್ಳಿಯಪ್ಪ, ಬಿಲ್ಡಿಂಗ್ ಕಮಿಟಿ ಅಧ್ಯಕ್ಷ ಪಿ.ಯು.ಜಯಕುಮಾರ್, ಕೊಲ್ಕತ್ತಾದ ಡಾ. ಕಾಯಪಂಡ ಎಂ.ಮಂದಣ್ಣ, ಪಾಂಡಂಡಾ ಕೆ.ಮಾದಪ್ಪ ಕುಟುಂಬಸ್ಥರು ಈ ಸಂದರ್ಭದಲ್ಲಿ ಹಾಜರಿದ್ದರು. ಕೊಡಗು ಮಾಡೆಲ್ ಸ್ಕೂಲ್ ಮುಖ್ಯೋಪಾಧ್ಯಾಯರಾದ ಮೇರಿ ಅನಿತಾ, ಶಾಲೆಯ ಶೈಕ್ಷಣಿಕ ಚಟುವಟಿಕೆ ಬಗ್ಗೆ ವಿವರಿಸಿದರು. ಸ್ಕೂಲ್‌ನ ಶೈಕ್ಷಣಿಕ ಸಮಿತಿ ಅಧ್ಯಕ್ಷೆ ಸೀತಮ್ಮ ವಂದನೆ ಸಲ್ಲಿಸಿದರು.

ಸಂವಿಧಾನ, ಸಂಸ್ಕೃತಿಯನ್ನು ಯುವ ಜನತೆ ಸಮಾನವಾಗಿ ಕಾಣಬೇಕು

ಜೆಎಸ್‌ಎಸ್ ಕಾನೂನು ಕಾಲೇಜು ಪದವಿ ಪ್ರದಾನ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ ನ್ಯಾ. ಪಂಕಜ್ ಮಿತ್ತಲ್



ಮೈಸೂರು,ಆ.19(ಎಸ್‌ಪಿಎನ್)–ಸಂವಿಧಾನ ಮತ್ತು ಭಾರತೀಯ ಸಂಸ್ಕೃತಿಯನ್ನು ಯುವ ಜನತೆ ಸಮಾನ ದೃಷ್ಟಿಕೋನದಲ್ಲಿ ನೋಡಬೇಕು ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಪಂಕಜ್ ಮಿತ್ತಲ್ ಸಲಹೆ ನೀಡಿದರು.

ಮೈಸೂರು ಕುವೆಂಪುನಗರದಲ್ಲಿನ ಜೆಎಸ್‌ಎಸ್ ಕಾನೂನು ಕಾಲೇಜು ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಆಯೋಜಿಸಿದ್ದ 15ನೇ ಪದವಿ ಪ್ರದಾನ ಸಮಾರಂಭದಲ್ಲಿ ತೇರ್ಗಡೆ ಹೊಂದಿದ್ದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿದರು.

ಯುವಜನತೆ ಮತ್ತು ವಕೀಲರು ಒಂದು ಕೈಯಲ್ಲಿ ಸಂವಿಧಾನ ಹಾಗೂ ಮತ್ತೊಂದು ಕೈಯಲ್ಲಿ ವೇದ–ಪುರಾಣದ ಪುಸ್ತಕಗಳನ್ನು ಹಿಡಿದು ಸಮಾನ ರೀತಿಯಲ್ಲಿ ಕಾಣಬೇಕು. ಏಕೆಂದರೆ 21ನೇ ಶತಮಾನದಲ್ಲಿ ಸಮಾನತೆ ಮತ್ತು ಪ್ರಜಾಪ್ರಭುತ್ವ ಅಭಿರುಚಿ ಕುರಿತು ಸಾಕಷ್ಟು ಚರ್ಚೆಗಳು ನಡೆಯುತ್ತಿವೆ ಎಂದು ಅಭಿಪ್ರಾಯಪಟ್ಟರು.

ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಾಥಮಿಕ ಹಂತದ ಶಿಕ್ಷಣದಿಂದ ಹಿಡಿದು, ಸ್ನಾತಕೋತ್ತರ ಪದವಿಯವರೆಗೆ ಅನೇಕ ವಿದ್ಯಾಸಂಸ್ಥೆಗಳನ್ನು ತೆರೆದು ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದೆ. ಇದರ ಭಾಗವಾಗಿ ಜೆಎಸ್‌ಎಸ್ ಕಾನೂನು ಕಾಲೇಜು ಮೂಲಕ ಅನೇಕ ಯುವ ವಕೀಲರನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡುತ್ತಿರುವುದು ಉತ್ತಮ ಬೆಳವಣಿಗೆ ಎಂದು ತಿಳಿಸಿದರು.

ನಮ್ಮ ಸಂವಿಧಾನದಲ್ಲಿ ಎಲ್ಲರಿಗೂ ಒಪ್ಪುವಂತಹ ಅಂಶಗಳು ಇವೆ. ಮೂಲಭೂತ ಕರ್ತವ್ಯ ಮತ್ತು ಹಕ್ಕುಗಳ ಕುರಿತು ಪ್ರತಿಯೊಬ್ಬರು ಅರ್ಥ ಮಾಡಿಕೊಂಡು ತಮ್ಮ ಜೀವನ ಶೈಲಿ ರೂಢಿಸಿಕೊಳ್ಳಬೇಕು. ಪುರಾತನ ಕಾಲದ ಆಯುರ್ವೇದ ಚಿಕಿತ್ಸೆ ಕುರಿತು ಪ್ರತಿಯೊಬ್ಬರಿಗೂ ಮನವರಿಕೆ ಮಾಡಿಕೊಡಲು ಯತ್ನಿಸಬೇಕು. ನಮ್ಮ ಪುರಾತನ ಇತಿಹಾಸ ಮತ್ತು ಪುರಾಣದ ಮಹತ್ವಗಳನ್ನು ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ಭಾರತೀಯರ ನೀಡಿರುವ ಕೊಡುಗೆ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಸುಪ್ರೀಂ ಕೋರ್ಟ್‌ನಲ್ಲಿ ಪುರಾತನ ನ್ಯಾಯದಾನ ಕುರಿತು 'ಯಥಾ ಧರ್ಮಸ್ಯಃ ತಥಾ ನ್ಯಾಯತಃ'. ಇದರ ಶಾಸ್ತ್ರೀಯ ಸೂಕ್ತಿ ಇದಾಗಿದೆ. ನ್ಯಾಯಾಂಗದಲ್ಲಿನ ಸಂಪ್ರದಾಯಗಳ ಬಗ್ಗೆ ಯುವ ವಕೀಲರು ಕೂಲಂಕಷವಾಗಿ ತಿಳಿದುಕೊಳ್ಳಲು ಪ್ರಯತ್ನಿಸಬೇಕು ಎಂದು ಹೇಳಿದರು.

ಹಿರಿಯ ವಕೀಲರ ಕಾರ್ಯವೈಖರಿಯನ್ನು ಯುವ ವಕೀಲರು ಹತ್ತಿರದಿಂದ ಗಮನಿಸಿ, ವೃತ್ತಿ ಏಳಿಗೆಗೆ ಪ್ರಯತ್ನಿಸಬೇಕು. ಸಲಹೆಗಳನ್ನು ಸ್ವೀಕರಿಸಬೇಕು. ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ಪ್ರತಿ ದಿನ, ಪ್ರತಿ ಕ್ಷಣದಲ್ಲೂ ಕಲಿತುಕೊಳ್ಳುವುದು ಸಾಕಷ್ಟಿದೆ. ವಕೀಲ ವೃತ್ತಿಯ ಮೌಲ್ಯಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಕಿವಿಮಾತು ಹೇಳಿದರು. ಬಿ.ಎ. ಎಲ್‌ಎಲ್‌ಬಿಯಿಂದ ಟಿ.ಎಸ್.ಬಿಂದು (ಪ್ರಥಮ), ಸಿ.ಧೃತಿ (ದ್ವಿತೀಯ), ಕೆಸ್ಮೃತಿ (ತೃತೀಯ), ಸಿ.ತಪೋಶ್ರೇಷ್ಠ (ನಾಲ್ಕನೇ ರ್‍ಯಾಂಕ್), ಎಂ.ಹಿಮ (ಐದನೇ) ಸ್ಥಾನ ಗಳಿಸಿದ್ದಾರೆ. ಬಿಬಿಎ ಎಲ್‌ಎಲ್‌ಬಿಯಲ್ಲಿ ಆರ್ಯ ಎಬೆಲ್ ಫಿಲಿಫ್ಸ್, ಸ್ವಾತಿ ಎಸ್.ಗಣೇಶ್, ಲಿಯ ಅನ್ನ ಫ್ರಾಸಿಸ್, ವಿಸ್ಮಯ ಸಿಂಹ, ಅಕ್ಷಯ ಶಾಜು, ಸಿ.ಶ್ರೇಯಸ್ ನಾರಾಯಣ ರ್‍ಯಾಂಕ್ ಗಳಿಸಿದ್ದಾರೆ. ಎಲ್‌ಬಿಬಿಯಲ್ಲಿ ಹುಝ್ಯೂಫಾ ಮುಸ್ತಾಕ್, ಎಸ್.ಕ್ಯಾರೋಲಿನ್, ಅಬೂಬಕರ್, ನೇಹ, ಕೌಸರ್, ಆರ್.ಪಿ.ಕಾವ್ಯ, ಎ.ಅನನ್ಯ ಸೇರಿದಂತೆ ಇತರೆ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.


ಬಿಎ.ಎಲ್‌ಎಲ್‌ಬಿಯಿಂದ 38 ವಿದ್ಯಾರ್ಥಿಗಳು, ಬಿಬಿಎ.ಎಲ್‌ಎಲ್‌ಬಿಯಿಂದ 47 ವಿದ್ಯಾರ್ಥಿಗಳು, ಎಲ್‌ಎಲ್‌ಬಿಯಿಂದ 35 ವಿದ್ಯಾರ್ಥಿಗಳು ಪದವಿ ಪಡೆದುಕೊಂಡರು. ವೇದಿಕೆಯಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಹೈಕೋರ್ಟ್ ನ್ಯಾಯಮೂರ್ತಿ ಕೆ.ಸೋಮಶೇಖರ್ ಮಾತನಾಡಿದರು.

ಮೈಸೂರು ಜಿಲ್ಲಾ ನ್ಯಾಯಾಧೀಶರು, ಪ್ರೊ.ಕೆ.ನಟರಾಜು, ಪ್ರೊ.ಕೆ.ಎಸ್.ಸುರೇಶ್, ಪ್ರೊ.ಶಿವಾನಂದ ಭಾರತಿ ಉಪಸ್ಥಿತರಿದ್ದರು. ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ ಬೆಟಸೂರಮಠ ಅವರು ಪದವೀಧರರಿಗೆ ಪ್ರಮಾಣ ವಚನ ಬೋಧಿಸಿದರು.

ನಾಳೆಯಿಂದ ಪರೀಕ್ಷಾ ಕೇಂದ್ರದ ಸುತ್ತ ನಿಷೇಧಾಜ್ಞೆ ಜಾರಿ

ಮೈಸೂರು,ಆ.19– ಮಹಾರಾಜ ಪದವಿ ಪೂರ್ವ ಕಾಲೇಜು, ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಡಿ.ಬನುಮಯ್ಯ ಸ್ವತಂತ್ರ ಪದವಿ ಪೂರ್ವ ಕಾಲೇಜು, ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನಲ್ಲಿ 2023ನೇ ಸಾಲಿನ ದ್ವಿತೀಯ ಪಿ.ಯು.ಸಿ ಎರಡನೇ ಪೂರಕ ಪರೀಕ್ಷೆಗಳು ನಡೆಯಲಿದ್ದು, ಸದರಿ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಆ.21ರಿಂದ ಸೆ.2ರವರೆಗೆ ಪರೀಕ್ಷಾ ದಿನಗಳಂದು ಬೆಳಗ್ಗೆ 6ರಿಂದ ಸಂಜೆ 6ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಆ.19– ಕೆಆರ್ ನಗರ ತಾಲೂಕು ವ್ಯಾಪ್ತಿ ಹಂಪಾಪುರದಲ್ಲಿ ಕಾಮಗಾರಿ ನಿಮಿತ್ತ ಅಡಗೂರು, ಅರ್ಜುನಹಳ್ಳಿ, ಬ್ಯಾಡರಹಳ್ಳಿ, ತಿಪ್ಪೂರು ಮತ್ತು ಕಗ್ಗೆರೆ ಗ್ರಾಪಂಗೊಳಪಡುವ ಎಲ್ಲಾ ಗ್ರಾಮಗಳು ಹಾಗೂ ಲಾಳಂದೇವನಹಳ್ಳಿ ಗ್ರಾಪಂನ ಸಾತಿ ಗ್ರಾಮಕ್ಕೆ ಆ.20ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕೆ.ಆರ್. ನಗರ ತಾಲೂಕು ಚಾ.ವಿ.ಸ.ನಿ. ನಿಗಮದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭ್ರಾತೃತ್ವ ಹಾಳು ಮಾಡುವ ಮುಂದುವರೆದ ಭಾಗವೇ ಮಣಿಪುರ ಹಿಂಸಾಚಾರ; ಚಿಂತಕ ಶಿವಸುಂದರ್ ಅಭಿಮತ



ಮೈಸೂರು,ಆ.19(ಪಿಎಂ)– ದೇಶದಲ್ಲಿ ಧರ್ಮಾತೀತ, ಜಾತ್ಯಾತೀತ ಭ್ರಾತೃತ್ವವನ್ನು ಹಾಳು ಮಾಡಲು ಒಂದು ಸಿದ್ಧಾಂತ ಕೆಲಸ ಮಾಡುತ್ತಿದ್ದು, ಅದರ ಮುಂದುವರಿಕೆಯನ್ನು ನಾವಿಂದು ಮಣಿಪುರದಲ್ಲೂ ನೋಡುತ್ತಿದ್ದೇವೆ ಎಂದು ಜನಪರ ಹೋರಾಟಗಾರರೂ ಆದ ಚಿಂತಕ ಶಿವಸುಂದರ್ ಹೇಳಿದರು.

ಮೈಸೂರಿನ ಬೆಂಗಳೂರು ರಸ್ತೆಯ ಒಡಿಪಿ ಸಂಸ್ಥೆ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವತಿಯಿಂದ ವಿವಿಧ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಒಕ್ಕೂಟ ಹತ್ತು (ಮೈಸೂರಲ್ಲಿ ಚಳುವಳಿ ಚಟುವಟಿಕೆ ಪ್ರಾರಂಭವಾಗಿ 10 ವರ್ಷ ಪೂರೈಸಿರುವ ಹಿನ್ನೆಲೆಯ ಶೀರ್ಷಿಕೆ); ಸ್ತ್ರೀವಾದಿ ಸಂವಾದ' ಕಾರ್ಯಕ್ರಮದಲ್ಲಿ 'ಮಣಿಪುರ ಪ್ರಕರಣ–ಸುತ್ತಮುತ್ತ' ವಿಷಯ ಕುರಿತು ಅವರು ಮಾತನಾಡಿದರು.

ಸ್ವಾತಂತ್ರ್ಯ ಮತ್ತು ಸಮಾನತೆ ಸಹಜ ಮೌಲ್ಯವಾಗಲು ಭ್ರಾತೃತ್ವ ಅಗತ್ಯ. ಈ ದೇಶದಲ್ಲಿ ಇರುವವರೆಲ್ಲಾ ಒಂದು ಎಂಬ ಭಾವನೆ ಇಲ್ಲವಾದರೆ ದೇಶದಲ್ಲಿ ಶಾಂತಿ–ನೆಮ್ಮದಿ ಅಸಾಧ್ಯ. ದೇಶದಲ್ಲಿ ಕಳೆದ 100 ವರ್ಷಗಳಿಂದ ಭ್ರಾತೃತ್ವ ಹಾಳು ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಜನರ ನಡುವೆ ಇರುವ ಧರ್ಮಾತೀತ, ಜಾತ್ಯಾತೀತ ಬಾಂಧವ್ಯವನ್ನು ನಾಶ ಮಾಡಲು ನಿರಂತರವಾಗಿ ಒಂದು ಸಿದ್ಧಾಂತ ಕೆಲಸ ಮಾಡುತ್ತಿದೆ. ಆ ಸಿದ್ಧಾಂತ ಇಡೀ ಭಾರತವನ್ನು ಭ್ರಷ್ಟಗೊಳಿಸುತ್ತಿದೆ. ಅದರ ಮುಂದುವರಿಕೆಯನ್ನು ನಾವು ಮಣಿಪುರದಲ್ಲೂ ನೋಡುತ್ತಿದ್ದೇವೆ. ಹಾಗಾಗಿ ಭ್ರಾತೃತ್ವ ನಾಶಗೊಳಿಸುತ್ತಿರುವುದರ ಇತಿಹಾಸ ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಅತ್ಯಂತ ಬರ್ಬರ ಕೃತ್ಯ ನಡೆದಾಗ ಸಹ ನಾಗರಿಕರು ಮೌನ ವಹಿಸಿದರೆ, ಆ ಕೃತ್ಯಕ್ಕೆ ಸಮ್ಮತಿ ಸೂಚಿಸಿದಂತೆ. ಮೌನ ವಹಿಸಿದವರ ಅಂತರಾತ್ಮ ಸತ್ತಂತೆ. ಆದರೆ ಕರ್ನಾಟಕದ ನಾಗರಿಕ ಸಮಾಜವು ಈ ವಿಚಾರದಲ್ಲಿ ಸ್ಪಂದಿಸುತ್ತಿದೆ. ಮಣಿಪುರ ಹಿಂಸಾಚಾರದ ಬಗ್ಗೆ ನಮ್ಮ ಪ್ರಧಾನಿ ಮೌನವಾಗಿದ್ದರು. ನಮ್ಮ ಪ್ರಧಾನಿಯವರು ಮೌನವನ್ನು ದಮನದ ಆಯುಧ ಮಾಡಿಕೊಂಡಾಗ ನಾವು ಮಾತುಗಳನ್ನು ಆಯುಧ ಮಾಡಿಕೊಳ್ಳಬೇಕಾಗುತ್ತದೆ ಎಂದರು.

ಮಣಿಪುರದಲ್ಲಿ ಇಬ್ಬರು ಮಹಿಳೆಯರನ್ನು ಬೆತ್ತಲುಗೊಳಿಸಿ ಅವರನ್ನು ಸಾಮೂಹಿಕವಾಗಿ ಮೆರವಣಿಗೆ ಮಾಡಿ ಒಬ್ಬ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದ ಘಟನೆ ಅತ್ಯಂತ ಬರ್ಬರ. ಹೀಗೆ ಮಾಡಿದ ನೂರಾರು ಪುರುಷರಲ್ಲಿ ಯಾರಿಗೂ ಆ ಮಹಿಳೆಯರ ಜಾಗದಲ್ಲಿ ತಮ್ಮ ಮನೆಯ ಹೆಣ್ಣು ಮಕ್ಕಳು ಏಕೆ ನೆನಪಾಗಲಿಲ್ಲ. ಅವರ ಒಳಗಿದ್ದ ಮನುಷ್ಯತ್ವ ಸತ್ತು ಹೋಗಲು ಕಾರಣವಾದರೂ ಏನು ಎಂದು ಪ್ರಶ್ನಿಸಿದರು.

ಆ ಪುರುಷರಿಗೆ ಇದ್ದುದ್ದು ಕಾಮಲಾಲಸೆಯಲ್ಲ. ಕುಕಿ ಸಮುದಾಯದ ಮೇಲೆ ಮೈತಿ ಸಮುದಾಯದ ದ್ವೇಷ ತೀರಿಸಿಕೊಳ್ಳಲು ಈ ಇಬ್ಬರು ಕುಕಿ ಮಹಿಳೆಯರ ದೇಹ ದ್ವೇಷದ ರಣರಂಗವಾಯಿತು. ಮೈತಿಗಳಿಗೆ ಕುಕಿಯವರು ನಮ್ಮವರಲ್ಲ ಎಂಬ ಭಾವನೆ ಮೂಡಿಸಲಾಗಿದೆ. ಇದು ಅವರಲ್ಲಿ ಮನುಷ್ಯತ್ವ ಇಲ್ಲದಂತೆ ಮಾಡಿದೆ. ಈ ಮಹಿಳೆಯರ ಪ್ರಕರಣದ ಬಗ್ಗೆ ಮಾತನಾಡುವಾಗ ಬಿಲ್ಕಿಸ್ ಬಾನು ಪ್ರಕರಣವೂ ನೆನಪಾಗುತ್ತದೆ. 2002ರಲ್ಲಿ ನಡೆದ ಈ ಅತ್ಯಾಚಾರದಲ್ಲೂ ಇದ್ದುದ್ದು ಕಾಮಲಾಲಸೆಯಲ್ಲ, ಬದಲಿಗೆ ದ್ವೇಷ. ಇದು ಕೋಮು ದ್ವೇಷ ತೀರಿಸಿಕೊಂಡ ಬಗೆಯಾಗಿದೆ ಎಂದು ಹೇಳಿದರು.

ನಮ್ಮ ಸಮಾಜವು ಜಾತಿ, ಕೋಮು, ಜನಾಂಗೀಯ ದ್ವೇಷದಲ್ಲಿ ಬರ್ಬರಗೊಳ್ಳುತ್ತಿದ್ದು, ನಮ್ಮ ದೇಶದ ಪ್ರಭುತ್ವ ಬರ್ಬರಗೊಳ್ಳಲು ಪೂರಕವಾದ ವಾತಾವರಣ ಸೃಷ್ಟಿ ಮಾಡುತ್ತಿವೆ. ಅಂದು ಗುಜರಾತ್‌ನಲ್ಲಿ ನರೇಂದ್ರ ಮೋದಿಯವರು ಒಂದು ಕಡೆ ವಿಶ್ವ ಹಿಂದೂ ಪರಿಷತ್‌ನವರು, ಮತ್ತೊಂದು ಕಡೆ ಪೊಲೀಸರನ್ನು ಕೂರಿಸಿಕೊಂಡು ಹಿಂದೂಗಳು ತಮ್ಮ ಸಿಟ್ಟು ಹರಿಬಿಡಲು ಬಿಟ್ಟುಕೊಡಿ, ಏನೂ ಮಾಡಬೇಡಿ ಎಂದು ಕರೆಕೊಟ್ಟ ಮಾದರಿಯಲ್ಲೇ, ಅದಕ್ಕಿಂತ ಮೂರು ಪಟ್ಟು ಹೆಚ್ಚಾಗಿ ಮಣಿಪುರದಲ್ಲಿ ನಡೆದಿದೆ. ಒಂದು ಕಡೆ ಸರ್ಕಾರದ ಬೆಂಬಲ, ಮತ್ತೊಂದು ಕಡೆ ದ್ವೇಷ ಇಲ್ಲಿ ಕೆಲಸ ಮಾಡಿವೆ ಎಂದು ದೂರಿದರು.

ಇದಕ್ಕೂ ಮುನ್ನ ಶಿವಸುಂದರ್ ಅವರ 'ಮಣಿಪುರದ ದುರಂತ ಕಥನ' ಪುಸ್ತಕ ಬಿಡುಗಡೆ ಮಾಡಲಾಯಿತು. ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು–ಮಹಿಳಾ ಚಳವಳಿಯ ಮುಂದಿರುವ ಸವಾಲುಗಳು ಕುರಿತು ಮಹಿಳಾಪರ ಹೋರಾಟಗಾರ್ತಿ ಡಾ.ದು.ಸರಸ್ವತಿ ಮಾತನಾಡಿದರು. ಬಳಿಕ ಸಭಿಕರೊಂದಿಗೆ ಸಂವಾದ ನಡೆಯಿತು. ಚಿಂತಕಿ ರತಿರಾವ್ ಅಧ್ಯಕ್ಷತೆ ವಹಿಸಿದ್ದರು. ವಿಶ್ರಾಂತ ಕುಲಪತಿ ಪ್ರೊ.ಸಬಿಹಾ ಭೂಮಿಗೌಡ, ಒಡನಾಡಿಯ ಸ್ಟ್ಯಾನ್ಲಿ ಮತ್ತು ಪರಶು, ಆರ್‌ಎಲ್‌ಹೆಚ್‌ಪಿ ನಿರ್ದೇಶಕಿ ಕೆ.ಸರಸ್ವತಿ ಮತ್ತಿತರರು ಹಾಜರಿದ್ದರು.

ಸೌಜನ್ಯ ಪ್ರಕರಣ; ಗೃಹಸಚಿವರ ಹೇಳಿಕೆಗೆ ಬೇಸರ

ಮೈಸೂರು,ಆ.19(ಪಿಎಂ)– ಸೌಜನ್ಯ ಅತ್ಯಾಚಾರ, ಕೊಲೆ ಪ್ರಕರಣ ಕಾನೂನಾತ್ಮಕವಾಗಿ ಮುಗಿದ ಅಧ್ಯಾಯ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿಕೆ ನೀಡಿದ್ದು, ಇದು ಬಾಲಿಶ ಎಂದು ಒಡನಾಡಿಯ ಸ್ಟ್ಯಾನ್ಲಿ ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ 'ಸೌಜನ್ಯ ಪ್ರಕರಣ–ಮುಂದಿನ ಹೆಜ್ಜೆಗಳು' ಕುರಿತು ಮಾತನಾಡಿದ ಅವರು, ಗೃಹಸಚಿವರು ಇದು ಮುಗಿದ ಅಧ್ಯಾಯ. ರೀ ಓಪನ್ ಮಾಡಲಾಗದು ಎಂದು ಹೇಳಿದ್ದಾರೆ. ಅವರನ್ನು ಜನ ಆ ಸ್ಥಾನದಲ್ಲಿ ಕೂರಿಸಿರುವುದು ಇಂತಹ ಅನ್ಯಾಯಗಳಿಗೆ ನ್ಯಾಯ ಕೊಡಿಸಲು ಎಂಬುದು ಅವರಿಗೆ ಅರ್ಥವಾಗಬೇಕು. ಮುಖ್ಯಮಂತ್ರಿಗಳು ತಜ್ಞರೊಂದಿಗೆ ಮಾತನಾಡಿ ಸೂಕ್ತ ಕ್ರಮ ವಹಿಸುತ್ತೇನೆ ಎಂದು ಹೇಳಿರುವುದು ಒಂದು ಆಶಾಭಾವನೆ ಮೂಡಿಸಿದೆ. ಆದರೆ ಗೃಹ ಸಚಿವರು ಏಕಾಏಕಿ ಹೀಗೆ ಹೇಳಿಕೆ ನೀಡಿರುವುದು ದೊಡ್ಡ ಚಳುವಳಿ ಹಾಗೂ ಜನರ ಭಾವನೆಯ ವಿರುದ್ಧವಾಗಲಿದೆ ಎಂದರು.

ಇಂದು ರಾಜ್ಯದಲ್ಲಿ ಜನಪರ ಸರ್ಕಾರ ಇದ್ದು, ನಮ್ಮ ಮುಖ್ಯಮಂತ್ರಿಗಳು ಈ ನಿಟ್ಟಿನಲ್ಲಿ ಯೋಚನೆ ಮಾಡುತ್ತಾರೆ. ಹಾಗಾಗಿ ಇದು ಐತಿಹಾಸಿಕ ತನಿಖೆಯಾಗಿ ನ್ಯಾಯ ದೊರೆಯುವ ವಿಶ್ವಾಸವಿದೆ. ಈ ಪ್ರಕರಣದಲ್ಲಿ ನಿರ್ದೋಷಿ ಸಂತೋಷ್ ರಾವ್‌ಗೂ ನ್ಯಾಯ ದೊರೆಯಬೇಕು. ಎಲ್ಲಾ ಸಂಘಟನೆಗಳೊಂದಿಗೆ ಜಾತಿ ಸಂಘಟನೆಯೂ ಇಂದು ಸೌಜನ್ಯ ಪ್ರಕರಣದಲ್ಲಿ ನ್ಯಾಯಕ್ಕಾಗಿ ಹೊರಬಂದಿದ್ದು, ಯಾರಾದರೂ ಬರಲಿ ನ್ಯಾಯ ಕೊಡಿಸಲಿ ಎಂಬುದು ನಮ್ಮ ತುಡಿತ ಎಂದರು.

ಸೌಜನ್ಯ ಮೃತದೇಹ ಪತ್ತೆಯಾದ 100 ಮೀಟರ್ ದೂರಲ್ಲಿ ಒಂದು ಆಸ್ಪತ್ರೆ ಇದ್ದು, ಇಲ್ಲಿದ್ದ ಸಿಸಿಟಿವಿ ಕ್ಯಾಮರಾ ಫುಟೇಜ್ ಪಡೆಯುವುದಿಲ್ಲ. ಅದರಿಂದ ಮಹತ್ವದ ಸಾಕ್ಷ್ಯ ಪಡೆಯಲು ಅವಕಾಶವಿತ್ತು. ತಳಮಟ್ಟದ ಆರೋಪಿಗಳು ಸಿಕ್ಕಿದಾಗ ಅವರನ್ನು ಬಗ್ಗು ಬಡಿಯಲು ಯಾವುದೇ ಅಡೆತಡೆ ಇರುವುದಿಲ್ಲ. ಈ ಪ್ರಕರಣದಲ್ಲಿ ತಳಮಟ್ಟದ ಆರೋಪಿಗಳು ಇಲ್ಲ. ಹಾಗಾಗಿಯೇ ಇದಕ್ಕೆ ಈ ಮಟ್ಟದ ಪ್ರತಿರೋಧ ವ್ಯಕ್ತವಾಗುತ್ತಿದೆ ಎಂದು ಹೇಳಿದರು.

ಮೈಸೂರು ಮಿತ್ರ ಭಾನುವಾರ 20 ಆಗಸ್ಟ್ 2023

ಅ.16ರಿಂದ ಶ್ರೀರಂಗಪಟ್ಟಣ ದಸರಾ ಮಹೋತ್ಸವ

ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಸಚಿವ ಚಲುವರಾಯಸ್ವಾಮಿ ಮಾಹಿತಿ



ಮಂಡ್ಯ, ಆ.19– ಮಂಡ್ಯ ಜಿಲ್ಲಾಡಳಿತದಿಂದ ಶ್ರೀರಂಗಪಟ್ಟಣ ದಸರಾ ಮಹೋತ್ಸವವನ್ನು ಅ.16 ರಿಂದ ನಡೆಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶನಿವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣ ದಲ್ಲಿ ಆಯೋಜಿಸಿದ್ದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದಸರಾ ಮಹೋತ್ಸವವನ್ನು ಅಚ್ಚುಕಟ್ಟಾಗಿ, ಪಾರಂಪರಿಕವಾಗಿ, ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಬೇಕು. ಅಧಿಕಾರಿಗಳು ಸಿದ್ಧತೆಗಳನ್ನು ಮಾಡಿಕೊಂಡು ಕಾರ್ಯ ಕ್ರಮ ಆಯೋಜಿಸಬೇಕು. ಜಿಲ್ಲೆಯ ಸಂಸ್ಕೃತಿ ಬಗ್ಗೆ ಹೆಚ್ಚಿನ ಕಾರ್ಯಕ್ರಮ ಆಯೋಜಿಸಿ ಎಂದರು.

ಕಿರಂಗೂರು ಬನ್ನಿಮಂಟಪ, ಜಂಬೂಸವಾರಿ ಸಾಗುವ ರಸ್ತೆ, ಕಾರ್ಯಕ್ರಮ ನಡೆಯುವ ವೇದಿಕೆ ಸ್ಥಳಗಳನ್ನು ಪರಿಶೀಲಿಸಿ ದುರಸ್ತಿ ಕೆಲಸಗಳಿದ್ದಲ್ಲಿ ಪ್ರಾರಂಭಿಸಿ ಬೇಗನೇ ಪೂರ್ಣಗೊಳಿಸಬೇಕು. ಶ್ರೀರಂಗಪಟ್ಟಣ ದಸರಾ ನಡೆಯುವ ದಿನಗಳಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಆಕರ್ಷಣೀಯ ದೀಪಾಲಂಕಾರ ವನ್ನು ನಗರ ಸ್ಥಳೀಯ ಸಂಸ್ಥೆಯವರು ಆಯೋಜಿಸಿ ದಸರೆಗೆ ವಿಶೇಷ ಮೆರುಗು ನೀಡಬೇಕು. ಮೆರವಣಿಗೆಯಲ್ಲಿ ಪೊಲೀಸ್ ಬ್ಯಾಂಡ್ ಮತ್ತು ಅಶ್ವಪಡೆ ಭಾಗವಹಿಸಲು ವ್ಯವಸ್ಥೆ ಮಾಡಿಕೊಡುವಂತೆ ಮೈಸೂರು ಪೊಲೀಸ್ ಆಯುಕ್ತರಿಗೆ ಪತ್ರ ಬರೆಯುವಂತೆ ತಿಳಿಸಿದರು.

ಶಾಸಕ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ ಮಾತನಾಡಿ, 5 ದಿನಗಳ ಕಾಲ ಶ್ರೀರಂಗಪಟ್ಟಣ ದಸರಾ ಮಹೋತ್ಸವ ಆಯೋಜಿಸುವುದರಿಂದ ರೈತ, ಮಹಿಳಾ, ಮಕ್ಕಳ ದಸರಾ ಸೇರಿದಂತೆ ವಿವಿಧ ಕಾರ್ಯ ಕ್ರಮ ಆಯೋಜಿಸಿ ಸ್ಥಳೀಯ ಕಲಾವಿದರಿಗೆ ಅವ ಕಾಶ ನೀಡಬಹುದು. ಮುಖ್ಯಮಂತ್ರಿಗಳಿಗೆ ಈ ಬಾರಿ ಹೆಚ್ಚಿನ ಅನುದಾನ ನೀಡುವಂತೆ ಮನವಿ ಮಾಡಲಾಗಿದ್ದು, ಕೃಷಿ ಸಚಿವರು ಸಹ ಮುಖ್ಯ ಮಂತ್ರಿಗಳೊಂದಿಗೆ ಚರ್ಚಿಸುವಂತೆ ಕೋರಿದರು.

ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ದಸರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ವಿಧಾನ ಸಭಾ ಹಾಗೂ ವಿಧಾನಪರಿಷತ್ ಶಾಸಕರನ್ನೊಳ ಗೊಂಡ ಸಂಪೂರ್ಣ ದಸರಾ ಆಚರಣಾ ಸಮಿತಿ, ವೇದಿಕೆ ಸಮಿತಿ, ಸಾಂಸ್ಕೃತಿಕ ಸಮಿತಿ, ಮೆರವಣಿಗೆ, ವಸ್ತು ಪ್ರದರ್ಶನ, ಆರೋಗ್ಯ, ನಗರ ಅಲಂಕಾರ, ಕ್ರೀಡಾ, ಆಹಾರ ಹಾಗೂ ಹಣಕಾಸು ಸಮಿತಿ ರಚಿಸಲು ಯೋಜನೆ ಸಿದ್ಧಪಡಿಸಲಾಗಿದೆ ಎಂದರು.

ಸಭೆಯಲ್ಲಿ ಶಾಸಕರಾದ ಗಣಿಗ ರವಿಕುಮಾರ್, ದರ್ಶನ್ ಪುಟ್ಟಣ್ಣಯ್ಯ, ಮರಿತಿಬ್ಬೇಗೌಡ, ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್, ಎಸ್ಪಿ ಎನ್.ಯತೀಶ್, ಅರಣ್ಯಾಧಿಕಾರಿ ರುದ್ರನ್, ಇನ್ನಿತರ ಅಧಿಕಾರಿಗಳಿದ್ದರು.

ಬಹುಮತದ ಸರ್ಕಾರಕ್ಕೆ ಯಾರ ಅವಶ್ಯಕತೆ ಇಲ್ಲ



ಚಲುವರಾಯಸ್ವಾಮಿ

ಮಂಡ್ಯ, ಆ.19– ರಾಜ್ಯ ಕಾಂಗ್ರೆಸ್ ಸರ್ಕಾರ ಬಹುಮತದಿಂದ ಸುಭದ್ರವಾಗಿದ್ದು, ಆಡಳಿತ ನಡೆ ಸಲು ಯಾರ ಅವಶ್ಯಕತೆಯೂ ಇಲ್ಲ. ಆದರೆ ನಮ್ಮ ಸಿದ್ಧಾಂತ ಒಪ್ಪಿ ಪಕ್ಷಕ್ಕೆ ಬರುವುದಾದರೆ ಅವರನ್ನು ನಾವು ಸ್ವಾಗತಿಸುತ್ತೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.

ಶನಿವಾರ ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಸುದ್ದಿ ಗಾರರೊಂದಿಗೆ ಮಾತನಾಡಿದ ಅವರು, ಮಂಡ್ಯದಿಂದ ಕಾಂಗ್ರೆಸ್‌ಗೆ ಬರುವವರ ಬಗ್ಗೆ ಈಗ ಯಾರ ಹೆಸರನ್ನು ಹೇಳಲ್ಲ. ವಾಲೆಂಟರಿಯಾಗಿ ಪಕ್ಷಕ್ಕೆ ಬಂದರೆ ಅವ ರನ್ನು ಸ್ವಾಗತಿಸುತ್ತೇವೆ. ಸದ್ಯ ಕಾಂಗ್ರೆಸ್‌ನಲ್ಲಿ 135+1 =136 ಶಾಸಕರಿದ್ದು, ಗೌರಿಬಿದನೂರು, ಹರಪನಹಳ್ಳಿ ಪಕ್ಷೇತರ ಶಾಸಕರು ಕಾಂಗ್ರೆಸ್ ಪರವಿದ್ದಾರೆ. ಹಾಗಾಗಿ ನಮಗೆ ಯಾವ ಸಮಸ್ಯೆಯೂ ಇಲ್ಲ ಎಂದರು.

ಮಾಜಿ ಸಚಿವ ಜೆಡಿಎಸ್‌ನ ಸಿ.ಎಸ್.ಪುಟ್ಟರಾಜು ಅವರನ್ನು ನಾವು ಸಂಪರ್ಕಿಸಿಲ್ಲ. ಅವರು ಕಾಂಗ್ರೆಸ್‌ಗೆ ಬರುತ್ತಾರೆ ಎನ್ನುವುದು ಕೇವಲ ಊಹಾಪೋಹ. ಪಾಪ ಅವರು ಹೇಗೋ ನೆಮ್ಮದಿಯಿಂದ ಇದ್ದಾರೆ ಎನ್ನುವ ಮೂಲಕ ಜಾರಿಕೊಂಡರು.

ಸುಮಲತಾ ಕಾಂಗ್ರೆಸ್ ಸೇರ್ಪಡೆ ಬಗ್ಗೆ ಮಾತನಾಡಿ, ನಾನು ಅವರ ಬಳಿ ರಾಜಕಾರಣ ಮಾತನಾಡಿಲ್ಲ. ಅವರು ಕೂಡ ನನ್ನೊಂದಿಗೆ ರಾಜಕಾರಣ ಮಾತ ನಾಡಲ್ಲ. ಮುಂದೆ ಏನು ಬೇಕಾದರೂ ಆಗಬ ಹುದು. ಯಾರು ಎಲ್ಲಿಗೆ ಬೇಕಾದರೂ ಹೋಗ ಬಹುದು ಬರಬಹುದು. ಮಾಧ್ಯಮಗಳಿಗೆ ಗೊತ್ತಿಲ್ಲ ದೇ ಏನೂ ಆಗಲ್ಲ ಎಂದರು.

ಬಿಜೆಪಿ ಹಾಗೂ ಸುಮಲತಾ ವಿರುದ್ಧ ವಾಗ್ದಾಳಿ: ಕಾವೇರಿ ನೀರು ಬಿಡುಗಡೆ ಸಂಬಂಧ ಬಿಜೆಪಿ ಹಾಗೂ ಸುಮಲತಾ ಕಾಂಗ್ರೆಸ್ ವಿರುದ್ಧ ಆಪಾದಿಸಿ, ಧರಣಿ ನಡೆಸುವುದಾಗಿ ಹೇಳಿದ್ದಾರೆ. ನೀರು ನಿರ್ವಹಣಾ ಮಂಡಳಿ ಇರುವುದು ಕೇಂದ್ರದ ಬಳಿ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವಿದ್ದು, ನೀರು ಬಿಡುವ ತೀರ್ಮಾನ ಮಾಡಬೇಕಾಗಿರುವುದು ಬಿಜೆಪಿಯೇ ಹೊರತು ರಾಜ್ಯ ಸರ್ಕಾರವಲ್ಲ. ನಾವು ಕೇಂದ್ರ ಸರ್ಕಾರದ ಬಳಿ ನಮಗೆ ನೀರು ಬೇಕು ಅಂದು ಅರ್ಜಿ ಹಾಕಿದ್ದೇವೆ. ನಾವು ಸಮರ್ಥವಾಗಿ ವಾದ ಮಾಡಿರುವುದಕ್ಕೆ ತಮಿಳುನಾಡು ಕೋರ್ಟ್‌ಗೆ ಹೋಗಿರುವುದು ಎಂದರು.

ನೀರು ನಿರ್ವಹಣಾ ಮಂಡಳಿ 10 ಸಾವಿರ ಕ್ಯೂಸೆಕ್ ಬಿಡಲು ಹೇಳಿದೆ. ಸುಮಲತಾ ಬಿಜೆಪಿಗೆ ಬೆಂಬಲ ಕೊಟ್ಟಿರುವುದರಿಂದ ಆ ಪಕ್ಷದ ಬಗ್ಗೆ ಮಾತ ನಾಡುವುದಿಲ್ಲ. ಅವರು ಮಂಡ್ಯ ಜಿಲ್ಲೆಯಲ್ಲಿ ಗೆದ್ದಿದ್ದಾರೆ. ಕೇಂದ್ರದ ಬಳಿ ಮಾತನಾಡಿ ಸಮಸ್ಯೆ ಬಗೆಹರಿಸುವ ಕೆಲಸ ಮಾಡಲಿ. ಅದನ್ನು ಬಿಟ್ಟು ಇಲ್ಲಿ ನಮ್ಮ ವಿರೋಧ ಮಾಡುವುದು ಸರಿಯಲ್ಲ. ಸುಮಲತಾಗೆ ನೀರು ನಿರ್ವಹಣಾ ಮಂಡಳಿ ನೀರು ಬಿಡಲು ಆದೇಶ ಮಾಡಿರುವ ಪ್ರತಿ ಬೇಕಿದ್ದರೆ ಕೊಡಲು ನಾವು ಸಿದ್ಧ ಎಂದರು.

ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ: ಕಾವೇರಿ ನದಿ ನೀರು ವಿಚಾರದಲ್ಲಿ ಕುಮಾರಸ್ವಾಮಿ ನಮ್ಮನ್ನು ಟೀಕಿಸುತ್ತಾರೆ. ಅವರು ನಮ್ಮ ರಾಜ್ಯದವರೇ. ಯಾಕೆ ಮಳೆ ಬರುತ್ತಿಲ್ಲ ಎಂಬುದು ಅವರಿಗೂ ಗೊತ್ತಿದೆ. ಮಳೆಗಾಗಿ ಬೇಕಾದರೆ ಹೆಚ್ಚಿಕೆ ವಿಶೇಷ ಪೂಜೆ ಮಾಡಲಿ. ಅಧಿಕಾರ ನೋಡಿ ಮಳೆ ಬರಲ್ಲ. ಸಿದ್ದರಾಮಯ್ಯ ಇದ್ದಾಗಲೂ ಮಳೆ ಬಂದಿದೆ ಬರನೂ ಬಂದಿದೆ. ಕುಮಾರಸ್ವಾಮಿ ಇದ್ದಾಗಲೂ ಮಳೆಯೂ ಬಂದಿದೆ ಬರನೂ ಬಂದಿದೆ. ಯಡಿಯೂರಪ್ಪ ಅವರು ಇದ್ದಾಗಲೂ ಎರಡು ಆಗಿದೆ ಎಂದರು.

ಅಧಿಕಾರದಲ್ಲಿ ಕೂತಿರುವವರ ಅದೃಷ್ಟ ನೋಡಿ ಮಳೆ ಬರಲ್ಲ. ಪ್ರಕೃತಿಯಲ್ಲಿ ಮಳೆ ನಮ್ಮನ್ನು ಕೇಳಿ ಬಂದಿದ್ದರೆ ನಿಯಂತ್ರಿಸಬಹುದಿತ್ತು. ರಾಜಕೀಯ ತೀಟೆ ಬಿಟ್ಟು, ವಾಸ್ತವವಾಗಿ ಜನರ ಸಮಸ್ಯೆಗೆ ಸ್ಪಂದಿಸಬೇಕು. ಲೋಕಸಭಾ ಚುನಾವಣೆ ಇದೆ ಅಂತಾ ಇಲ್ಲಸಲ್ಲದ್ದು ಮಾತಾಡಬಾರದು ಎಂದು ವಾಗ್ದಾಳಿ ನಡೆಸಿದರು.

ಹಾಡಹಗಲೇ ಮನೆಗೆ ನುಗ್ಗಿ ಚಿನ್ನಾಭರಣ ಕಳವು

ಭಾರತೀನಗರ, ಆ.19– ಹಾಡಹಗಲೇ ಮನೆಗೆ ನುಗ್ಗಿರುವ ದುಷ್ಕರ್ಮಿಗಳು ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿಯಾಗಿರುವ ಘಟನೆ ಶನಿವಾರ ಮಧ್ಯಾಹ್ನ ಹುಣ್ಣನದೊಡ್ಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಗೌರಮ್ಮ ಎಂಬುವರ ಮನೆಗೆ ನುಗ್ಗಿರುವ ದುಷ್ಕರ್ಮಿಗಳು 200 ಗ್ರಾಂ ಚಿನ್ನ ಹಾಗೂ 1 ಲಕ್ಷ ನಗದು ದೋಚಿ ಪರಾರಿಯಾಗಿದ್ದಾರೆ. ಮಧ್ಯಾಹ್ನ 3.30ರಲ್ಲಿ ಗೌರಮ್ಮನವರು ತಮ್ಮ ತೋಟದಲ್ಲಿ ಹೂ ಕುಯ್ಯುತ್ತಿದ್ದ ವೇಳೆ ಮನೆಗೆ ನುಗ್ಗಿರುವ ಕಳ್ಳರು ಚಿನ್ನಾಭರಣ, ನಗದು ದೋಚಿ ಪರಾರಿಯಾಗಿದ್ದು, ಈ ಸಂಬಂಧ ಕೆ.ಎಂ.ದೊಡ್ಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಭೇಟಿ ನೀಡಿದ ಎಎಸ್ಪಿ ತಿಮ್ಮಯ್ಯ, ಇನ್ಸ್‌ಪೆಕ್ಟರ್ ಆನಂದ್ ಹಾಗೂ ಬೆರಳಚ್ಚು ತಜ್ಞರು ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕಾವೇರಿ ಹೋರಾಟಕ್ಕೆ ಎಲ್ಲರೂ ನಿಲ್ಲಬೇಕು: ಸುಮಲತಾ



ಮಂಡ್ಯ, ಆ.19– ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನೀರು ಬಿಡುಗಡೆ ಮಾಡಿರುವುದರಿಂದ ಜನಸಾಮಾನ್ಯರಿಗೆ ಸಂಕಷ್ಟ ಎದುರಾಗಲಿದ್ದು, ರೈತರ ಜೊತೆ ನಾವೆಲ್ಲರೂ ನಿಲ್ಲಬೇಕಾಗಿದೆ ಎಂದು ಸಂಸದೆ ಸುಮಲತಾ ಅಂಬರೀಶ್ ತಿಳಿಸಿದರು.

ಶನಿವಾರ ಚಾಮುಂಡೇಶ್ವರಿ ನಗರದ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂಕಷ್ಟ ಕಾಲದಲ್ಲಿ ರೈತರು ಬೆಳೆದಿರುವ ಬೆಳೆಗೆ ಮಾತ್ರ ಸಂಕಷ್ಟ ಎಂದು ಭಾವಿಸಬಾರದು. ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಸಮಸ್ಯೆ ಕಾಡಲಿದೆ. ಹಾಗಾಗಿ ಹೋರಾಟಕ್ಕೆ ಎಲ್ಲರೂ ಕೈ ಜೋಡಿಸಬೇಕು. ರೈತರ ಸಮಸ್ಯೆಯಾಗಲಿ ನೀರಿನ ಸಮಸ್ಯೆಯಾಗಲಿ ಅದು ರೈತರಿಗೆ ಸಂಬಂಧಿಸಿದ ಸಮಸ್ಯೆ ಅಲ್ಲ. ಬದಲಾಗಿ, ಸಾಮಾನ್ಯ ಜನರ ಸಮಸ್ಯೆ ಕೂಡ ಹಾಗಿದೆ. ಇಂತಹ ವಿಷಯದಲ್ಲಿ ಯಾರೂ ಕೂಡ ರಾಜಕಾರಣ ಮಾಡಬಾರದು. ಮಳೆ ಬಾರದ ಕಾರಣ ಸಂಕಷ್ಟ ಪರಿಸ್ಥಿತಿ ಎದುರಾಗಿದೆ. ಕಳೆದ ಬಾರಿ ಮಳೆಯಾಗಿ ಕಾವೇರಿ ಮಾತೆಗೆ ಬಾಗಿನ ಅರ್ಪಣೆ ಮಾಡಿದ್ದೆವು. ಆದರೆ ಈ ಬಾರಿ ಸಂಕಷ್ಟದ ಜೊತೆಗೆ ತಮಿಳುನಾಡಿಗೆ ನೀರು ಬಿಟ್ಟಿರುವುದರಿಂದ ರೈತರ ಕಷ್ಟ ಹೇಳತೀರದಾಗಿದ್ದು, ನಾವು ಯಾವ ರೀತಿ ಹೋರಾಟ ಮಾಡುತ್ತೇವೆ ಎಂಬುದು ಮುಖ್ಯ ಎಂದು ತಿಳಿಸಿದರು.

ಕೇಂದ್ರದಲ್ಲಿ ತಮಿಳುನಾಡಿಗೆ ಹೆಚ್ಚು ಒಲವು ಇದೆ. ನಾವು ಹೋರಾಟ ಮಾಡಬೇಕಾದ ಅವಶ್ಯಕತೆಯಿದೆ. ಇದಕ್ಕೆ ಪರಿಹಾರ ಹುಡುಕುವ ಕೆಲಸ ಮಾಡಬೇಕು. ನಮ್ಮ ಹೋರಾಟ ನಾವು ಮಾಡಬೇಕು. ನಮಗೆ ಸಮಸ್ಯೆ ಇದ್ದರೂ ನೀರು ಬಿಡುತ್ತಿದ್ದಾರೆ. ಸರ್ವ ಪಕ್ಷಗಳ ಸಭೆ ಕರೆದಿರುವ ಬಗ್ಗೆ ಮಾಹಿತಿ ಇದ್ದು, ಎಲ್ಲರೂ ಸೇರಿ ಚರ್ಚಿಸಲಿ, ರೈತರ ಹಿತ ಕಾಪಾಡುವುದು ಪ್ರಮುಖವಾಗಿದೆ. ಕಾವೇರಿ ವಿಚಾರದಲ್ಲಿ ನಾನು ಸಂಸತ್ತಿನಲ್ಲಿ ಕಾವೇರಿ ನೀರಿನ ಬಗ್ಗೆ ಮಾತನಾಡಿದ್ದೇನೆ. ನಮ್ಮ ಸಮಸ್ಯೆ ಬಗ್ಗೆ ಹೇಳಿದ್ದೇನೆ. ಕೇಂದ್ರದ ಸಚಿವರನ್ನ ಸಹ ಭೇಟಿ ಮಾಡಿದ್ದೇನೆ. ಇವತ್ತು ಸಮಸ್ಯೆಯಾಗಿದ್ದು, ದನಿ ಎತ್ತುತ್ತೇವೆ ಎಂದರು.

ರಾಜಕೀಯವಾಗಿ ಬಿಜೆಪಿ ಪಕ್ಷಕ್ಕೆ ಬೆಂಬಲ ನೀಡಿದ್ದು, ನಾನು ಬಿಜೆಪಿ ಸಂಸದೆ ಅಲ್ಲ. ಬಿಜೆಪಿ ನಿರ್ಧಾರ ನನಗೆ ಅನ್ವಯವಾಗಲ್ಲ. ಆ ಪಕ್ಷದ ಪ್ರತಿಯೊಂದು ವಿಷಯದಲ್ಲೂ ನಾನು ಮಧ್ಯ ಪ್ರವೇಶ ಮಾಡಲ್ಲ. ನನ್ನನ್ನು ಸಂಪರ್ಕ ಮಾಡಿದರೆ ಬೆಂಬಲ ನೀಡುತ್ತೇನೆ. ಇನ್ನು ನನಗೆ ರಾಜಕೀಯ ಅನಿವಾರ್ಯವಾಗಿಲ್ಲ. ಆಕಸ್ಮಿಕ ಮಾತ್ರ ಎಂದರು. ಆಪರೇಷನ್ ಹಸ್ತ ವಿಚಾರವಾಗಿ ಯಾರೂ ನನಗೆ ಆಹ್ವಾನ ಮಾಡಿಲ್ಲ. ನಾನು ಸಂತೋಷವಾಗಿದ್ದೇನೆ. ಕಾಂಗ್ರೆಸ್‌ನಿಂದ ನಮಗೆ ಯಾವುದೇ ಆಫರ್ ನೀಡಿಲ್ಲ. ಎಲ್ಲವೂ ವದಂತಿ. ಎಲ್ಲವೂ ಸರಿ ಎಂದಾದರೆ ಮಾತ್ರ ಮುಂದಿನ ಹೆಜ್ಜೆ ಇಡುತ್ತೇನೆ ಎಂದರು.

ಎಕ್ಸ್‌ಪ್ರೆಸ್ ವೇನಲ್ಲಿ ದರೋಡೆಗೆ ವಿಫಲ ಯತ್ನ



ಮಂಡ್ಯ, ಆ.19– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಟಾಟಾ ಏಸ್ ಅಡ್ಡಗಟ್ಟಿ ದರೋಡೆ ಮಾಡಲು ಯತ್ನಿಸಿರುವ ಘಟನೆ ತಾಲೂಕಿನ ಇಂಡುವಾಳು ಗ್ರಾಮದಿಂದ ತಡವಾಗಿ ಬೆಳಕಿಗೆ ಬಂದಿದೆ.

ಕಳೆದ ವಾರ ಒಂದೇ ದಿನ ಶ್ರೀರಂಗಪಟ್ಟಣ ತಾಲೂಕಿನ ನಗುವನಹಳ್ಳಿ ಹಾಗೂ ಗಣಂಗೂರು ಬಳಿ ಎಕ್ಸ್‌ಪ್ರೆಸ್ ವೇನಲ್ಲಿ ದರೋಡೆ ಮಾಡಿದ್ದ ಪ್ರಕರಣ ಮಾಸುವ ಮುನ್ನವೇ ಅಂತಹದ್ದೆ ಪ್ರಕರಣ ಆ.15ರಂದು ನಡೆದಿದ್ದು, ಅಂದು ರಾತ್ರಿ ಮೈಸೂರು ಕಡೆಯಿಂದ ಮದ್ದೂರಿನತ್ತ ಹೊರಟಿದ್ದ ಟಾಟಾ ಏಸ್ ವಾಹನವನ್ನು ಅಡ್ಡಗಟ್ಟಿ ದುಷ್ಕರ್ಮಿಗಳು ದರೋಡೆಗೆ ಯತ್ನಿಸಿದ್ದಾರೆ.

ಮದ್ದೂರು ತಾಲೂಕಿನ ನಿಡಘಟ್ಟ ಗ್ರಾಮದ ಪ್ರಸನ್ನ ಎಂಬುವರ ಮೇಲೆ ದರೋಡೆಕೋರರು ದಾಳಿ ನಡೆಸಲು ಯತ್ನಿಸಿದ್ದು, ದುಷ್ಕರ್ಮಿಗಳು ವಾಹನ ತಡೆದಾಗ ಪ್ರಸನ್ನ, ವೇಗವಾಗಿ ಚಾಲನೆ ಮಾಡಿಕೊಂಡು ಬಂದ ಪರಿಣಾಮ ಯಾವುದೇ ಅಪಾಯ ಸಂಭವಿಸಿಲ್ಲ. ಆದರೆ ಗಾಡಿ ನಿಲ್ಲಿಸಲಿಲ್ಲ ಎಂಬ ಕಾರಣಕ್ಕೆ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ವಾಹನದ ಮೇಲೆ ದಾಳಿ ಮಾಡಿದ್ದು, ಟಾಟಾ ಏಸ್ ಸಣ್ಣಪುಟ್ಟ ಜಖಂಗೊಂಡಿದೆ.

ಘಟನೆ ನಡೆದ 3 ದಿನಗಳ ಬಳಿಕ ಈ ಬಗ್ಗೆ ಹೇಳಿಕೆ ನೀಡಿರುವ ಪ್ರಸನ್ನ, ಆ.15 ರಂದು ಮೈಸೂರಿನ ಎಪಿಎಂಸಿ ಮಾರುಕಟ್ಟೆಯಿಂದ ತರಕಾರಿ ತೆಗೆದುಕೊಂಡು ಮದ್ದೂರಿಗೆ ವಾಪಸ್ಸಾಗುತ್ತಿದ್ದಾಗ ಇಂಡುವಾಳು ಸಮೀಪ ಐದಾರು ಮಂದಿ ದುಷ್ಕರ್ಮಿಗಳು ವಾಹನ ಅಡ್ಡಗಟ್ಟಲು ಯತ್ನಿಸಿದರು. ಧೈರ್ಯದಿಂದ ವಾಹನ ಚಲಾಯಿಸಿಕೊಂಡು ಬಂದೆ. ಸಾರ್ವಜನಿಕರು ರಾತ್ರಿ ವೇಳೆ ಎಕ್ಸ್‌ಪ್ರೆಸ್ ವೇ ಮತ್ತು ಸರ್ವೀಸ್ ರಸ್ತೆಯಲ್ಲಿ ಪ್ರಯಾಣ ಮಾಡಬೇಡಿ ಎಂದು ಮನವಿ ಮಾಡಿದ್ದಾರೆ.

ಅಪರಿಚಿತ ವಾಹನ ಡಿಕ್ಕಿ: ಬೈಕ್ ಸವಾರ ಸಾವು

ಹಲಗೂರು, ಆ.19– ಅಪರಿಚಿತ ವಾಹನ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಮುತ್ತತ್ತಿ ರಸ್ತೆಯ ಗೊಲ್ಲರಹಳ್ಳಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದೆ.

ಮಾಸ್ತರ್‌ದೊಡ್ಡಿ ಗ್ರಾಮದ ನಿವಾಸಿ ಬಸವರಾಜು (50) ಸಾವನ್ನಪ್ಪಿದವರು. ಕಾರ್ಯ ನಿಮಿತ್ತ ಹಲಗೂರಿಗೆ ಆಗಮಿಸಿ ವಾಪಸ್ ಸ್ವಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಎದುರಿನಿಂದ ಬಂದ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಬಸವರಾಜು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಹಲಗೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಬನ್ನಂಗಾಡಿ ಗ್ರಾಪಂ ಅಧ್ಯಕ್ಷರಿಗೆ ಅಭಿನಂದನೆ



ಚಿನಕುರಳಿ, ಆ.19– ಬನ್ನಂಗಾಡಿ ಗ್ರಾಪಂ ನೂತನ ಅಧ್ಯಕ್ಷ ಎಸ್.ವಿ.ಯೋಗೇಶ್ ಅವರನ್ನು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅಭಿನಂದಿಸಿದರು.

ಗ್ರಾಪಂ ನೂತನ ಅಧ್ಯಕ್ಷ ಯೋಗೇಶ್ ಕುರಿತು ಮಾತನಾಡಿದ ಮಾಜಿ ಸಚಿವ ಪುಟ್ಟರಾಜು, ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದೀರಿ. ಮುಂದಿನ ದಿನಗಳಲ್ಲಿ ಉಪಾಧ್ಯಕ್ಷರು ಹಾಗೂ ಸದಸ್ಯರ ಸಹಕಾರ ಪಡೆದು ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಮುಂದಾಗುವಂತೆ ಸಲಹೆ ನೀಡಿದರು.

ಈ ವೇಳೆ ತಾಪಂ ಮಾಜಿ ಸದಸ್ಯ ಬಿ.ಪಿ. ಶ್ರೀನಿವಾಸ್, ಮುಖಂಡರಾದ ಶಿವೇಗೌಡ, ಶ್ರೀನಿವಾಸ್, ಸೋಮಣ್ಣ, ಮರಿಸ್ವಾಮಪ್ಪ, ಪುಟ್ಟಪ್ಪ, ಚಲುವಪ್ಪ, ಕಳಸಪ್ಪ, ಬಲರಾಮು, ನಾಗಣ್ಣ, ಆನಂದ, ಲಾರಿ ನಾಗೇಶ್, ಯ.ನಾಗಣ್ಣ, ಆರ್.ಕೆ.ರೇವಣ್ಣ, ಯ.ಕರಿಯಪ್ಪ ಸೇರಿದಂತೆ ಹಲವರಿದ್ದರು.

ನಿಂಗಮ್ಮ ನಿಧನ



ಕೆ.ಆರ್.ಪೇಟೆ, ಆ.19– ತಾಲೂಕಿನ ಬಂಡಿಹೊಳೆ ಗ್ರಾಮದ ಹಿರಿಯ ಮುಖಂಡ ಲೇ.ಬೋರೇಗೌಡರ ಪತ್ನಿ ನಿಂಗಮ್ಮ ಉರುಫ್ ಸಾಕಮ್ಮ (93) ಶನಿವಾರ ಸಂಜೆ ನಿಧನರಾದರು. ಮೃತರು ವಕೀಲ ಬಿ.ಗಣೇಶ್ ಸೇರಿದಂತೆ 6 ಮಂದಿ ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ಆ.20 ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಅರಮನೆ ಭೇಟಿಗೆ 'ಮಾಫಿಯಾ' ಅಡ್ಡಿ!

ಪ್ರವೇಶವಿಲ್ಲ, ಇಂದು ರಾಜ ವಂಶಸ್ಥರ ಖಾಸಗಿ ಕಾರ್ಯಕ್ರಮ ಇರುವುದರಿಂದ ಮಧ್ಯಾಹ್ನದವರೆಗೆ ಅರಮನೆ ಪ್ರವೇಶಕ್ಕೆ ಅವಕಾಶ ಇಲ್ಲ... ಹೀಗೆ ತಪ್ಪು ಮಾಹಿತಿ ನೀಡುವುದು. ಹೇಗೂ ಬಂದಿದ್ದೀರಾ ಇನ್ನಿತರೆ ಸ್ಥಳಗಳನ್ನು ನೋಡಿ ಎಂದು ಹೇಳಿ ಉಪಾಯವಾಗಿ ಶಾಪಿಂಗ್ ಆಸೆ ಹುಟ್ಟಿಸಿ, ಪ್ರಸಿದ್ಧ ಮೈಸೂರು ರೇಷ್ಮೆ ಸೀರೆಗಳು ದೊರೆಯುತ್ತವೆ ಎಂದು ಸುಳ್ಳು ಹೇಳಿ, ತಮಗೆ ಬೇಕಾದ ವಸ್ತ್ರ, ಫ್ಯಾಷನ್ ಹಾಗೂ ಕರಕುಶಲ ವಸ್ತುಗಳ ಮಳಿಗೆಗಳಿಗೆ ಪ್ರವಾಸಿಗರನ್ನು ಕರೆದುಕೊಂಡು ಹೋಗುತ್ತಿದ್ದಾರೆ. ಅಲ್ಲಿ ಪ್ರವಾಸಿಗರಿಂದ ಭರ್ಜರಿ ವ್ಯಾಪಾರ ಮಾಡಿಸಿ ಕಮಿಷನ್ ಗಿಟ್ಟಿಸಿಕೊಳ್ಳುವ ದಂಧೆ ನಡೆಯುತ್ತಿದೆ. ಹೀಗೆ ಪ್ರವಾಸಿಗರ ಮರಳು ಮಾಡಿ, ಸುತ್ತಾಡಿಸಿದ ನಂತರ ವಿಶ್ರಾಂತಿ ಪಡೆಯಿರಿ ಎಂದು ಹೇಳಿ ತಮಗೆ ಬೇಕಾದ ಹೋಟೆಲ್ ಹಾಗೂ ಲಾಡ್ಜ್‌ಗೂ ಕರೆದುಕೊಂಡು ಹೋಗುತ್ತಿದ್ದಾರೆ. ಒಟ್ಟಾರೆ ಇವರ ಉದ್ದೇಶ ಕಮಿಷನ್. ಪ್ರವಾಸಿಗರು ಮೈಸೂರು ಪ್ರವೇಶಿಸುವ ಸ್ಥಳಗಳಾದ ಮಣಿಪಾಲ್ ಆಸ್ಪತ್ರೆ ಸರ್ಕಲ್, ಹುಣಸೂರಿನ ಹಿನಕಲ್ ರಿಂಗ್ ರಸ್ತೆ ಜಂಕ್ಷನ್, ಊಟಿ ರಸ್ತೆಯ ರಿಂಗ್ ರೋಡ್‌ನ ಸಿಗ್ನಲ್ ಲೈಟ್ ಸರ್ಕಲ್‌ಗಳಲ್ಲಿ ಇಂತಹ ಮಾಫಿಯಾ ಕೆಲಸ ಮಾಡುತ್ತಿದೆ. ಜೊತೆಗೆ ಅರಮನೆ ಸನಿಹದ ಗನ್ ಹೌಸ್ ಸರ್ಕಲ್, ಹಾರ್ಡಿಂಗ್ ಸರ್ಕಲ್, ಅರಮನೆಯ ವರಹಾ ದ್ವಾರ, ಜಯಮಾರ್ತಾಂಡ ದ್ವಾರ, ಬಲರಾಮ ದ್ವಾರ, ಕರಿಕಲ್ಲು ತೊಟ್ಟಿ, ಬ್ರಹ್ಮಪುರಿ ದ್ವಾರಗಳಲ್ಲಿ ನಿಲ್ಲುವ ಅನಾಮಧೇಯ ವ್ಯಕ್ತಿಗಳು ಪ್ರವಾಸಿಗರನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ವಾಹನಗಳ ನೋಂದಣಿ ಸಂಖ್ಯೆಯನ್ನು ದೂರದಿಂದಲೇ ಗುರುತಿಸಿ ಇವರು ಪ್ರವಾಸಿಗರೆಂದು ಖಚಿತಪಡಿಸಿಕೊಳ್ಳುವ ಚಾಲಾಕಿಗಳು ಇವರಾಗಿದ್ದಾರೆ. ಮೈಸೂರು ಅರಮನೆ, ಚಾಮುಂಡಿಬೆಟ್ಟ, ಮೃಗಾಲಯ, ಕೆಆರ್‌ಎಸ್ ಅನ್ನು ಒಂದೇ ದಿನದಲ್ಲಿ ವೀಕ್ಷಣೆ ಮಾಡಿ ಹೋಗಲು ಲೆಕ್ಕಾಚಾರ ಇಟ್ಟುಕೊಂಡು ನಗರಕ್ಕೆ ಬರುವ ಪ್ರವಾಸಿಗರಿಗೆ ಇಂತಹ ಮಾಫಿಯಾದಿಂದ ಅರಮನೆ ನೋಡುವ ಅವಕಾಶ ಸಿಗುತ್ತಿಲ್ಲ. ಆದರೆ ಎರಡು ಅಥವಾ ಮೂರು ದಿನದ ಪ್ಯಾಕೇಜ್ ಟೂರ್‌ನಲ್ಲಿ ಮೈಸೂರಿಗೆ ಬರುವ ಪ್ರವಾಸಿಗರು ಮಾರನೇ ದಿನ ಅರಮನೆ ವೀಕ್ಷಿಸುತ್ತಾರೆ. ಅರಮನೆಗೆ ಹಿಂದಿನ ದಿನ ರಜೆ ಇರಲಿಲ್ಲ ಎಂಬ ಸತ್ಯ ಆಗ ಬಹಳಷ್ಟು ಪ್ರವಾಸಿಗರಿಗೆ ತಿಳಿಯುತ್ತದೆ.

ಪ್ರವಾಸಿಗರಿಗೆ 'ನಕಲಿ' ವಂಚನೆ: ಇನ್ನು ಅರಮನೆಯ ಸುತ್ತಮುತ್ತಲೂ ವ್ಯಾಪಾರ ಮಾಡುವ ಬೀದಿ ಬದಿ ವ್ಯಾಪಾರಿಗಳ ಮೋಸದಾಟ ಇದಕ್ಕಿಂತ ಭಿನ್ನವಾಗಿಲ್ಲ. ಕರ್ನಾಟಕ ಶ್ರೀಗಂಧಕ್ಕೆ ಪ್ರಖ್ಯಾತಿಯಾಗಿರುವ ಕಾರಣ ನಕಲಿ ಶ್ರೀಗಂಧದ ಎಣ್ಣೆ ತಂದು ಅಸಲಿ ಎಂದು ಮಾರಾಟ ಮಾಡುವುದು. ನಕಲಿ ಶ್ರೀಗಂಧದ ಅಲಂಕಾರಿಕ ವಸ್ತುಗಳು ಅಸಲಿ ಎಂದು ಪ್ರವಾಸಿಗರಿಗೆ ವಂಚಿಸಿ, ಮಾರಾಟ ಮಾಡುತ್ತಿದ್ದಾರೆ ಎಂಬ ದೂರುಗಳು ವ್ಯಾಪಕವಾಗಿ ಕೇಳಿಬರುತ್ತಿವೆ.

ಹೀಗೆ ಮೋಸ ಹೋದ ಬಹಳಷ್ಟು ಪ್ರವಾಸಿಗರು ಮೈಸೂರು ಅರಮನೆ ಮಂಡಳಿಗೆ ಲಿಖಿತ ದೂರು ಸಲ್ಲಿಸಿದ್ದಾರೆ. ಈ ದೂರು ಆಧರಿಸಿ ಮೈಸೂರು ಅರಮನೆ ಮಂಡಳಿಯ ಕಾರ್ಯ ನಿರ್ವಾಹಕ ನಿರ್ದೇಶಕರೂ ಆದ ಜಿಲ್ಲಾಧಿಕಾರಿಗಳು, ನಗರ ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ಇದುವರೆಗೆ ಮೈಸೂರಿಗೆ ಬಂದಿರುವ ನಾಲ್ವರು ಜಿಲ್ಲಾಧಿಕಾರಿಗಳು, ನಗರ ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ಆದರೆ ಇಲ್ಲಿಯವರೆಗೂ ಯಾವ ಪೊಲೀಸ್ ಆಯುಕ್ತರು ಇದರತ್ತ ಗಮನಹರಿಸಿಲ್ಲ.

ಅನಾಮಧೇಯ ವ್ಯಕ್ತಿಗಳು ಪ್ರವಾಸಿಗರಿಗೆ ಮೋಸ ಮಾಡುತ್ತಿರುವ ದೃಶ್ಯಗಳನ್ನು ಸೆರೆ ಹಿಡಿದು, ಸಾಕ್ಷಿ ಸಮೇತ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಆದರೆ ಈ ತನಕ ಪೊಲಿಸರು ಯಾವುದೇ ಕ್ರಮ ಕೈಗೊಂಡಿಲ್ಲ. ಜಿಲ್ಲಾ ಮ್ಯಾಜಿಸ್ಟ್ರೇಟ್, ಜಿಲ್ಲಾಧಿಕಾರಿಗಳ ಪತ್ರಕ್ಕೂ ಕವಡೆ ಕಾಸಿನ ಕಿಮ್ಮತ್ತು ಇಲ್ಲವೆಂದರೆ ಇನ್ನು ಜನ ಸಾಮಾನ್ಯರ ದೂರಿನ ಗತಿ ಏನು ಎಂಬ ಪ್ರಶ್ನೆ ಎದುರಾಗಿದೆ. ಮೈಸೂರು ಅರಮನೆ ಮಂಡಳಿ ಅಸಹಾಯಕ ವಾಗಿದೆ, ಪೊಲೀಸರು ಕಣ್ಮುಚ್ಚಿ ಕುಳಿತಿದ್ದಾರೆ. ಇದರಿಂದ ಮಾಫಿಯಾ ರಾಜಾರೋಷವಾಗಿ ಕಾರ್ಯೋನ್ಮುಖವಾಗಿದ್ದು, ಅಮಾಯಕ ಪ್ರವಾಸಿಗರ ದೋಚುತ್ತಿದೆ.

ಎಚ್ಚರವಾಗಿರಿ...!

ಇನ್ನಿತರ ದಾಖಲೆಗಳನ್ನು ಕಳುಹಿಸುತ್ತಿರುವುದು ಕಂಡುಬರುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತಿಳಿಸಿದ್ದಾರೆ. ಅದನ್ನು ಬಳಸಿಕೊಂಡು ಇಂಟೆಂಟ್ ಲೆಟರ್, ನೋ–ಅಬ್ಜೆಕ್ಷನ್ ಸರ್ಟಿಫಿಕೇಟ್, ಡೀಲರ್‌ಶಿಪ್ ಲೆಟರ್‌ಗಳನ್ನು ಸಿದ್ಧಪಡಿಸುತ್ತಾರೆ. ಅವುಗಳನ್ನು ತೋರಿಸಿ ಡೀಲರ್‌ಶಿಪ್ ಮತ್ತು ಲೈಸೆನ್ಸ್ ಫೀ ಎಂದೆಲ್ಲಾ ಹಣಕ್ಕೆ ಅರ್ಜಿದಾರರಿಂದ ಒತ್ತಡ ಹಾಕುತ್ತಾರೆ ಎಂದಿರುವ ಸೀಮಾ ಲಾಟ್ಕರ್, ಒಂದು ವೇಳೆ ಎಲೆಕ್ಟ್ರಿಕ್ ಚಾರ್ಜಿಂಗ್ ಸ್ಟೇಷನ್ ನಿರ್ಮಿಸಬೇಕಾದರೆ, ಎಲೆಕ್ಟ್ರಿಕ್ ವಾಹನ ಮಾರಾಟ ಡೀಲರ್‌ಶಿಪ್ ಬೇಕೆಂದರೆ, ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಥವಾ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿ ಎಂದು ಸಲಹೆ ನೀಡಿದ್ದಾರೆ.

ಯಾವುದೇ ಕಾರಣಕ್ಕೂ ಸಂಶಯಾಸ್ಪದ ಲಿಂಕ್‌ಗಳು, ಸೋಷಿಯಲ್ ಮೀಡಿಯಾದಲ್ಲಿ ಬರುವ ಶಂಕಿತ ಜಾಹೀರಾತುಗಳ ಮಾಹಿತಿಗೆ ಮರುಳಾಗಿ ಮೋಸ ಹೋಗಬೇಡಿ. ಓಟಿಪಿ ಶೇರ್ ಮಾಡುವುದು, ಲಿಂಕ್‌ಗಳನ್ನು ಒತ್ತಿ ಆನ್‌ಲೈನ್‌ನಲ್ಲಿ ಪ್ರತಿಕ್ರಿಯೆ ನೀಡಿದರೆ ಹಣ ಕಳೆದುಕೊಳ್ಳಬೇಕಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ನಾವೂ ಬದುಕಿ ಪ್ರಾಣಿಗಳಿಗೂ ಬದುಕಲು ಬಿಡಬೇಕು



ಮೈಸೂರು, ಆ.19(ಸಿಎನ್)– ಪ್ರಾಣಿಗಳಿಗೂ ಮನುಷ್ಯರಂತೆ ಜೀವಿಸುವ ಹಕ್ಕಿದೆ. ಮನುಷ್ಯನ ಸ್ವಾರ್ಥ ಸಾಧನೆಗಾಗಿ ಮೂಕ ಪ್ರಾಣಿಗಳನ್ನು ಬಲಿಕೊಟ್ಟು, ಅವುಗಳಿಂದ ತಯಾರಾಗುವ ವಸ್ತುಗಳನ್ನು ಬಳಸುತ್ತಿದ್ದೇವೆ. ಒಬ್ಬರನ್ನು ಕೊಂದು ಇನ್ನೊಬ್ಬರು ಸಂತೋಷಪಡುವ ಮನಸ್ಥಿತಿ ಅತ್ಯಂತ ಅಪಾಯಕಾರಿ ಎಂದು ವೀಗನ್ ಇಂಡಿಯಾ ಮೂವ್ಮೆಂಟ್ ಮೈಸೂರು ಅಧ್ಯಕ್ಷ ನಿತಿನ್ ತಿಳಿಸಿದರು.

ದೇವರಾಜ ಮಾರುಕಟ್ಟೆ ಬಳಿಯ ಚಿಕ್ಕ ಗಡಿಯಾರದ ಬಳಿ 'ಎಲ್ಲರಿಗೂ ಸ್ವಾತಂತ್ರ್ಯ' ಶೀರ್ಷಿಕೆಯಡಿ 'ವೀಗನ್ ಇಂಡಿಯಾ ಮೂವ್ಮೆಂಟ್' ಪ್ರಾಣಿದಯಾ ಸಂಘಟನೆ ವತಿಯಿಂದ ಶನಿವಾರ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದರು. ನಮ್ಮ ಸಮಾಜವು ಆಹಾರ, ಉಡುಪು, ಆಟಗಳು, ಮನೋರಂಜನೆ, ಪ್ರಯೋಗ ಹೀಗೆ ಹಲವು ವಿಚಾರಗಳಲ್ಲಿ ಪ್ರಾಣಿಗಳ ಮೇಲೆ ಅವಲಂಬಿತವಾಗಿದೆ. ಇದೊಂದು ಉದ್ಯಮವಾಗಿ ಬೆಳೆದು ನಿಂತಿದೆ. ಮೊದಲು ಈ ಕೊಲ್ಲುವ ಮನಸ್ಥಿತಿಯನ್ನು ತೊಡೆದು ಹಾಕಬೇಕು ಎಂದರು. ಸಸ್ಯಾಹಾರ ಒಂದು ಆಹಾರ ಪದ್ಧತಿಯಲ್ಲ, ಅದು ಸಾಮಾಜಿಕ ನ್ಯಾಯ ಚಳವಳಿಯ ಒಂದು ಆಂದೋಲನವಾಗಿದೆ. ವೀಗನ್ (ಸಸ್ಯಾಹಾರ) ರೂಢಿಸಿಕೊಂಡು, ಮಾಂಸಾಹಾರ ಆಹಾರ ಕ್ರಮ ತ್ಯಜಿಸಿದರೆ, ಪ್ರಾಣಿಗಳಿಗೂ ಬದುಕುವ ಸ್ವಾತಂತ್ರ್ಯ ನೀಡಿದಂತಾಗುತ್ತದೆ. ಪ್ರಾಣಿಗಳ ಸಂತತಿಯನ್ನೇ ಅವನತಿಗೊಳಿಸುವ ರೀತಿಯಲ್ಲಿ ಪ್ರಾಣಿಗಳನ್ನು ಕೊಲ್ಲಲಾಗುತ್ತಿದೆ. ಇದು ನಿಲ್ಲಬೇಕು. ಪ್ರಾಣಿಗಳಿಂದ ಉತ್ಪಾದನೆಯಾಗುತ್ತಿರುವ ವಸ್ತುಗಳ ಉದ್ಯಮ ಪರ್ಯಾಯ ಮಾರ್ಗ ಕಂಡುಕೊಳ್ಳುವುದು ಸೂಕ್ತ ಎಂದರು.

ಪ್ರಾಣಿಗಳ ಮೇಲೆ ನಡೆಯುವ ಅನ್ಯಾಯವನ್ನು ತಡೆಯಲು ದೊಡ್ಡ ಶಕ್ತಿಯಾಗಿ ನಿಲ್ಲಬೇಕು. ಮೂಕವೇದನೆ ಅನುಭವಿಸುತ್ತಿರುವ ಪ್ರಾಣಿಗಳ ಸಂಕಷ್ಟಕ್ಕೆ ಅಂತ್ಯವಾಡುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದು ಕರೆ ನೀಡಿದರು.

ಪ್ರತಿಭಟನೆಯಲ್ಲಿ ವಿವಿಧ ಭಿತ್ತಿಪತ್ರ, ಪ್ರಾಣಿಗಳನ್ನು ಕ್ರೂರವಾಗಿ ಹತ್ಯೆಗೈಯುವ ಚಿತ್ರಗಳು, ವಿವಿಧ ಘೋಷಣೆಯ ನಾಮಫಲಕಗಳು ಸಾರ್ವಜನಿಕರ ಕಡೆಗೆ ಪ್ರದರ್ಶಿಸಿ ಪ್ರಾಣಿಹತ್ಯೆ ಮಾಡಬೇಡಿ ಎಂದು ಮನವಿ ಮಾಡಲಾಯಿತು. ಈ ವೇಳೆ ಅಮ್ಜೋರ, ಅಭಿಷೇಕ್, ಸಿಂಚನ, ಅನನ್ಯ, ಹೇಮೇಂದ್ರ ಭಾಗಿಯಾಗಿದ್ದರು.

> **"ಪ್ರಾಣಿಗಳಿಗೂ ಮನುಷ್ಯರಂತೆ ಬದುಕುವ ಹಕ್ಕಿದೆ. ಅವುಗಳ ಸಂತತಿ ಉಳಿಯಬೇಕು. ನಾವು ಬದುಕಿ ಅವುಗಳನ್ನು ಬದುಕಲು ಬಿಡಬೇಕು ಆಗಲೇ ನಿಜವಾದ ಸ್ವಾತಂತ್ರ್ಯ ನಾವು ಅನುಭವಿಸಿದಂತೆ. ಇಲ್ಲವಾದಲ್ಲಿ ಸ್ವಾತಂತ್ರ್ಯ ಪದಕ್ಕೆ ಅರ್ಥವಿಲ್ಲ.**
>
> –ನಿತಿನ್, ಅಧ್ಯಕ್ಷ, ವೀಗನ್ ಇಂಡಿಯಾ ಮೂವ್ಮೆಂಟ್



ಕಲೆ, ಸಾಹಿತ್ಯ, ಜಾನಪದ ಉಳಿಸುತ್ತಿರುವ ಕಲಾವಿದರಿಗೆ ಆರ್ಥಿಕ ನೆರವು ನೀಡಿ



ಮೈಸೂರು, ಆ.19(ಸಿಎನ್)–ಕಲೆಯೇ ನಮ್ಮ ಸಂಸ್ಕೃತಿ, ಜೀವಾಳವೆಂದು ಬದುಕುತ್ತಿರುವ ಕುಟುಂಬಗಳು ಬದುಕು ಕಟ್ಟಿಕೊಳ್ಳಲಾಗದೆ ನಿರಾಶ್ರಿತರಾಗಿದ್ದಾರೆ. ಸರ್ಕಾರ ನೀಡುವ ಪ್ರೋತ್ಸಾಹ ಧನ ಎಲ್ಲರಿಗೂ ಸಿಗುತ್ತಿಲ್ಲ ಎಂದು ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ತಿಳಿಸಿದರು.

ನಗರದ ಪುರಭವನ(ಟೌನ್‌ಹಾಲ್) ದಲ್ಲಿ ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಗಣಪತಿ ಮಿತ್ರ ಮಂಡಳಿ ವತಿಯಿಂದ 'ರಂಗ ಪಿತಾಮಹರ ದಿನಾಚರಣೆ' ಉದ್ಘಾಟಿಸಿ ಮಾತನಾಡಿದ ಅವರು, 50 ವರ್ಷ ಮೇಲ್ಪಟ್ಟ ಪ್ರತಿಯೊಬ್ಬ ಸಾಹಿತಿ, ಕಲಾವಿದರಿಗೂ, ಪಿಂಚಣಿ, ಯೋಜನೆ ಸಾಲ ಸೌಲಭ್ಯ ಅತೀ ಶೀಘ್ರದಲ್ಲಿ ಜಾರಿಯಾಗಲಿ ಎಂದರು.

ಕಲೆ, ಸಾಹಿತ್ಯ, ಜಾನಪದ ಉಳಿದಿರಲು ಕಾರಣ ಗ್ರಾಮೀಣ ಪ್ರದೇಶದ ಜಾನಪದ ಕಲೆಗಳಾದ ಸೋಬಾನ ಪದ, ಲಾವಣಿ ಹಾಡು, ಪೂಜಾ ಕುಣಿತ, ಡೊಳ್ಳು ಕುಣಿತ, ಕೋಲಾಟ, ದೊಣ್ಣೆ ವರಸೆ, ಕಂಸಾಳೆ, ಪದ, ಜಾನಪದ ನೃತ್ಯ, ಜಾನಪದ ತತ್ವಪದ, ಗಾಯನ, ಬೀದಿ ನಾಟಕ ಹಾಗೂ ಹವ್ಯಾಸಿ ನಾಟಕ ಕಲಾವಿದರು. ಆದರೆ ಇವರ ಆರ್ಥಿಕ ಸ್ಥಿತಿ ಇಂದಿಗೂ ಶೋಚನೀಯವಾಗಿದೆ. ಕಲೆಯೇ ಜೀವಾಳ ಮಾಡಿಕೊಂಡು ಶಾರದೆಯ ಸೇವೆ ಎಂದು ಬದುಕುತ್ತಿರುವ ಕಲಾವಿದರ ಗೋಳು ಕೇಳುವವರು ಯಾರು ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು. ಸಾಹಿತಿಗಳು ಕಲಾವಿದರ ನಡೆಸುವ ಕನ್ನಡ ಪರ ಕಾರ್ಯಕ್ರಮಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಲಾಮಂದಿರ, ರಂಗಮಂದಿರ, ರಂಗಾಯಣ, ಟೌನ್‌ಹಾಲ್ ಇತ್ಯಾದಿ. ಸ್ಥಳಗಳು ರಿಯಾಯಿತಿ ದರದಲ್ಲಿ ಸಿಗುವಂತಾಗಬೇಕು. ಕರ್ನಾಟಕ ಸರ್ಕಾರ, ಸಂಬಂಧಪಟ್ಟ ಮಂತ್ರಿಗಳು, ಬಡ ಕಲಾವಿದರಿಗೆ ಆಸರೆಯಾಗಬೇಕೆಂದು ಆಗ್ರಹಿಸಿದರು. ಈ ಸಂದರ್ಭ ಮೇಲುಕೋಟೆ ವಂಗೀಪುರಂ ನಂಬಿಮಠದ ಇಳೈ ಆಳ್ವಾರ್ ಸ್ವಾಮೀಜಿ, ವಿಪ್ರ ಮುಖಂಡ ಕೆ.ರಘುರಾಮ್ ವಾಜಪೇಯಿ, ನಗರ ಪಾಲಿಕೆ ಸದಸ್ಯ ಮಾ.ವಿ.ರಾಮ್ ಪ್ರಸಾದ್ ಸೇರಿದಂತೆ ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

ಪ್ರಸ್ತುತ ಅನ್ನದಾನಕ್ಕಿಂತ ರಕ್ತದಾನ ಅಗತ್ಯ

ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಸಿಂಡಿಕೇಟ್ ಸದಸ್ಯ ಡಾ. ಈ.ಸಿ. ನಿಂಗರಾಜ್‌ಗೌಡ



ಮೈಸೂರು, ಆ. 19–ಅನ್ನದಾನ, ವಿದ್ಯಾದಾನದಂತೆಯೇ ರಕ್ತದಾನ ಮಾಡುವುದು ಅಗತ್ಯವಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಸಿಂಡಿಕೇಟ್ ಸದಸ್ಯ ಡಾ.ಈ.ಸಿ.ನಿಂಗರಾಜ್ ಗೌಡ ತಿಳಿಸಿದರು.

ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ರೋಟರಿ ಮೈಸೂರು ಸೌತ್ ಈಸ್ಟ್ ಕ್ಲಬ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಏರ್ಪಡಿಸಿದ್ದ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಕ್ತದಾನ ಮಾಡುವುದರಿಂದ ರಕ್ತಕ್ಯಾನ್ಸರ್ ಅಪಾಯ ತಗ್ಗುತ್ತದೆಂದು ಸಂಶೋಧಕರು ಪತ್ತೆಹಚ್ಚಿದ್ದಾರೆ. ರಕ್ತದಾನ ಮಾಡಿದಾಗ ನಿಮ್ಮ ದೇಹ ಹೊಸ ರಕ್ತ ಪಡೆಯುವ ಅವಕಾಶ ಸಿಗುತ್ತದೆ ಮತ್ತು ರಕ್ತದ ಕ್ಯಾನ್ಸರ್ ಅವಕಾಶ ಕಡಿಮೆಯಾಗುತ್ತದೆ. ರಕ್ತದಾನದಿಂದ ರಕ್ತದಾನಿಗಳಿಗೆ ಏನೂ ನಷ್ಟವಾಗುವುದಿಲ್ಲ. ಆದರೆ ನಿಮ್ಮ ಆರೋಗ್ಯ ಮತ್ತು ಸಮುದಾಯದ ಆರೋಗ್ಯದ ಅನುಕೂಲಗಳು ಬೆಲೆ ಕಟ್ಟಲಾಗದ್ದು ಎಂದು ಮಾತನಾಡುತ್ತಾ ಹೇಳಿದರು.

ರಕ್ತದಾನ ಒಬ್ಬರ ಜೀವವನ್ನು ಉಳಿಸುತ್ತದೆ. ಅದಕ್ಕೆ ಯಾವುದೇ ಪರ್ಯಾಯವಿಲ್ಲ. ಕೇವಲ ಒಂದು ದಾನವು ನಾಲ್ವರ ಜೀವವನ್ನು ಉಳಿಸುತ್ತದೆ. ರಕ್ತದಾನದಿಂದ ಹೆಚ್ಚುವರಿ ಕಬ್ಬಿಣಾಂಶ ಹೊರಹೋಗುತ್ತದೆ. ಹೆಚ್ಚುವರಿ ಕಬ್ಬಿಣಾಂಶದಿಂದ ಅಧಿಕ ರಕ್ತದ ಒತ್ತಡ ಮುಂತಾದ ಅಡ್ಡ ಪರಿಣಾಮಗಳಿರುತ್ತವೆ. ಇದು ಲಿವರ್, ಹೃದಯ ಮತ್ತು ಪಿತ್ತಜನಕಾಂಗದಲ್ಲಿ ಶೇಖರಣೆಯಾಗಿ ಹೃದಯಬೇನೆ, ರಕ್ತದೊತ್ತಡ ಉಲ್ಬಣವಾಗುತ್ತದೆ ಎಂದರು. ನಾವು ರಕ್ತದಾನ ಮಾಡಿದರೆ ಈ ವಿಷಯಗಳು ಇತ್ಯರ್ಥವಾಗುತ್ತದೆ ಎಂದರು.

ವಿದ್ಯಾಸಿರಿ, ವನಸಿರಿ, ಜಲಸಿರಿ ಮತ್ತು ಆರೋಗ್ಯ ಸಿರಿ ಸೇವಾ ಕಾರ್ಯಕ್ರಮಗಳನ್ನು ಮಾಡುತ್ತಿದೆ ಎಂದರು.. ಸಾಲುಮರದ ತಿಮ್ಮಕ್ಕನವರಿಂದ ಸಸಿಗಳನ್ನೂ ನೆಡಿಸಿ ಪದ್ಮಶ್ರೀ ಸಾಲುಮರದ ತಿಮ್ಮಕ್ಕ ಅವರ ಹೆಸರಿನಲ್ಲಿ ನಾಲ್ಕು ಎಕರೆಯ ಜಾಗದಲ್ಲಿ ಉದ್ಯಾನವನ್ನು ನಿರ್ವಹಿಸುತ್ತದೆ ಎಂದು ಅವರು ತಿಳಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಡೀನ್ ಪ್ರೊ. ಎನ್. ಲಕ್ಷ್ಮಿ, ಅಧ್ಯಯನ ಕೇಂದ್ರದ ಡೀನ್ ಪ್ರೊ.ರಾಮನಾಥಂ ನಾಯ್ಡು, ಸಸ್ಯಶಾಸ್ತ್ರ ವಿಭಾಗದ ಡಾ.ಕೃಷ್ಣಮೂರ್ತಿ, ಡಾ.ಕೆ.ಎನ್. ರವೀಂದ್ರ, ಮೈಸೂರು ಸೌತ್ ಈಸ್ಟ್‌ನ ಮಾಜಿ ಅಧ್ಯಕ್ಷ ರೋಟರಿಯನ್ ಎಂ. ಮೋಹನ್, ಡಾ. ಎನ್.ಎಸ್.ದಿವ್ಯ, ಡಾ.ಹೆಚ್.ಆರ್. ವಾಣಿಶ್ರೀ, ಡಾ.ಬಿ.ಎಂ.ಪುನೀತ್ ಕುಮಾರ್, ಡಾ. ರಚನಾ ಮತ್ತಿತರರು ಉಪಸ್ಥಿತರಿದ್ದರು.

ಅಧಿಕ ರಕ್ತದೊತ್ತಡ ತಪಾಸಣಾ ಶಿಬಿರ

ಮೈಸೂರು, ಆ. 19–ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಆ. 21 ರಿಂದ 26 ರವರೆಗೆ ಅಧಿಕ ರಕ್ತದೊತ್ತಡ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ತಜ್ಞ ವೈದ್ಯ ಡಾ.ನಿಶ್ಚಿತ್ ಕೆ.ಎನ್ ಅವರ ನೇತೃತ್ವದಲ್ಲಿ ಈ ಶಿಬಿರ ನಡೆಯಲಿದೆ.

ಶಿಬಿರದಲ್ಲಿ ಬೆಳಗಿನ ಜಾವದ ತಲೆ ನೋವು, ಮೂಗಿನಲ್ಲಿ ರಕ್ತ, ಅನಿಯಮಿತ ಹೃದಯದ ಬಡಿತ, ಎದೆ ನೋವು, ದೃಷ್ಟಿಯಲ್ಲಿ ಬದಲಾವಣೆ, ಆಯಾಸ, ವಾಕರಿಕೆ, ವಾಂತಿ ಈ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳ ತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ 0821–2533600, 99863 99862 ಸಂಪರ್ಕಿಸಬಹುದಾಗಿದೆ.




ಅಮೆರಿಕದ ಮೇರಿಲ್ಯಾಂಡ್‌ನ ಗೇಥರ್ಸ್‌ಬರ್ಗ್‌ನಲ್ಲಿರುವ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್ನಿನಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಎನ್ಐಎಚ್‌ನ ಹಿರಿಯ ವಿಜ್ಞಾನಿಗಳಾದ ಡಾ. ಪಾಂಡುರಂಗ ರೆಡ್ಡಿ ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಆಲಮಟ್ಟಿ ಡಾ. ರುದ್ರಮುನಿದೇವರು, ನಾಗೇಶ್ವರ್ ರಾವ್, ಭಾರತಿ ರೆಡ್ಡಿ, ವೀಣಾ ತೋಟಕುರ, ಶ್ರೀಮತಿ ಅಂಬಿಕ ನಾಗೇನಹಳ್ಳಿ, ಪುಷ್ಪ ನಿರಂಜನ್, ಶ್ರೀಮತಿ ಸರೋಜ ರಾಜಶೇಖರ್, ಯಶಸ್ವಿನಿ ಬಾಲಾಜಿ, ಡಾ.ಕೊಂಡಲ ರೆಡ್ಡಿ, ಬಿಂದು ಗುರುರಾಜ್ ಮತ್ತು ಜೆಎಸ್‌ಎಸ್ ಸಂಡೇ ಸ್ಕೂಲ್ ವಿದ್ಯಾರ್ಥಿಗಳು, ಸುತ್ತಮುತ್ತಲಿನ ಅನಿವಾಸಿ ಭಾರತೀಯರು ಹಾಗೂ ಮಿಷನ್‌ನ ಸಿಬ್ಬಂದಿವರ್ಗ ಭಾಗವಹಿಸಿದ್ದರು.

ಮಕ್ಕಳಿಗೆ ಮೊಟ್ಟೆ, ಶೇಂಗಾ ಚಿಕ್ಕಿ ವಿತರಣೆ



ಮೈಸೂರು, ಆ. 19– ಪೌಷ್ಟಿಕ ಆಹಾರ ಸೇವನೆಯಿಂದ ಆರೋಗ್ಯ ಸದೃಢವಾಗಲಿದೆ. ಹಾಗಾಗಿಯೇ ಸರ್ಕಾರ ಶಾಲಾ ಮಕ್ಕಳಿಗೆ ಮೊಟ್ಟೆ, ಶೇಂಗಾ, ಬಾಳೆಹಣ್ಣುಗಳನ್ನು ವಿತರಿಸುವ ಯೋಜನೆಗೆ ಚಾಲನೆ ನೀಡಿದ್ದು, ಇದು ಅತ್ಯಂತ ಸ್ವಾಗತಾರ್ಹ ಕ್ರಮವಾಗಿದೆ ಎಂದು ಕೆಪಿಸಿಸಿ ಸದಸ್ಯ ನಜರ್ ಬಾದ್ ನಟರಾಜ್ ಹೇಳಿದರು.

ಮೈಸೂರಿನ ನಜರ್‌ಬಾದ್‌ನ ಸರ್ಕಾರಿ ಪ್ರೌಢಶಾಲೆಯಲ್ಲಿ ಮಕ್ಕಳಿಗೆ ಮೊಟ್ಟೆ ಶೇಂಗಾ ಚಿಕ್ಕಿ, ಬಾಳೆಹಣ್ಣು ವಿತರಿಸಿ ಅವರು ಮಾತನಾಡಿದರು. ಸರ್ಕಾರಿ ಶಾಲೆಗೆ ಆರ್ಥಿಕವಾಗಿ ಹಿಂದುಳಿದ ಮಕ್ಕಳು ಬರುವುದು ಹೆಚ್ಚು. ಹೀಗಾಗಿ ಆ ಮಕ್ಕಳು ಆರೋಗ್ಯ ಸಮಸ್ಯೆಯಿಂದ ಬಳಲಬಾರದು ಎಂಬ ನಿಟ್ಟಿನಲ್ಲಿ ಸರ್ಕಾರ ಮಹತ್ವಪೂರ್ಣ ಯೋಜನೆ ಚಾಲನೆ ನೀಡಿದೆ. ಈ ಹಿಂದೆ ಇದೇ ಯೋಜನೆಯಡಿ 1ರಿಂದ 8ನೇ ತರಗತಿಯವರೆಗೆ ಮಾತ್ರ ಮೊಟ್ಟೆ, ಬಾಳೆಹಣ್ಣು, ಶೇಂಗಾ ಚಿಕ್ಕಿ ನೀಡಲಾಗುತ್ತಿತ್ತು. ಈಗ ಹತ್ತನೇ ತರಗತಿಗೂ ವಿಸ್ತರಿಸಿರುವುದು, ಒಳ್ಳೆಯ ನಿರ್ಧಾರ. ಮಕ್ಕಳು ಯೋಜನೆಯನ್ನು ಸದ್ಬಳಕೆ ಮಾಡಿಕೊಂಡು ಉತ್ತಮ ಶಿಕ್ಷಣ ಪಡೆಯುವ ಮೂಲಕ ನಾಡಿನ ಕೀರ್ತಿಯನ್ನು ಹೆಚ್ಚಿಸಬೇಕು ಎಂದರು. ಜೆ ಜೆ ಆನಂದ್, ಸುನಿಲ್, ಶ್ರೀಪಲ್, ಲೋಕೇಶ್, ನಿತೀಶ್, ಯೋಗೇಶ್ ಯಾದವ್, ರವಿ ನಾಯಕ್ ಹಾಗೂ ಶಾಲೆಯ ಶಿಕ್ಷಕ ವೃಂದ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನೂತನ ಅಧ್ಯಕ್ಷರಾದ ಪಿ. ರಾಜೇಶ್ವರಿ ಅವರನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿನಂದಿಸಿದರು. ಈ ವೇಳೆ ಕನಕ ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ಧರ್ಮೇಂದ್ರ ಪರಮೇಶ್, ಶ್ರೀನಿವಾಸ್ ಉಪಸ್ಥಿತರಿದ್ದರು.

ಡಾ.ಸಿ.ರಮೇಶ್ ಶೆಟ್ಟಿ ಅವರಿಗೆ ಯೋಗ ಕೌಸ್ತುಭ ಪ್ರಶಸ್ತಿ ಪ್ರದಾನ



ಮೈಸೂರು: ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಉತ್ತಿಷ್ಠ ಭಾರತ ಟ್ರಸ್ಟ್ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಯೋಗ ಶಿಕ್ಷಕ ಡಾ. ಸಿ ರಮೇಶ್ ಶೆಟ್ಟಿ ಅವರಿಗೆ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರು ಯೋಗ ಕೌಸ್ತುಭ ಪ್ರಶಸ್ತಿ ನೀಡಿ, ಗೌರವಿಸಿದರು. ಈ ವೇಳೆ ಸಂಸ್ಕೃತ ವಿದುಷಿ ಡಾ.ಕೆ.ಲೀಲಾ ಪ್ರಕಾಶ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಮ ವಾಜಪೇಯಿ, ಶಿಕ್ಷಣ ತಜ್ಞರಾದ ವಾಸುದೇವ್ ಭಟ್, ಉತ್ತಿಷ್ಠ ಭಾರತ ಟ್ರಸ್ಟ್ ಸಂಚಾಲಕ ಎಂವಿ ನಾಗೇಂದ್ರ ಬಾಬು, ಎನ್.ಅನಂತ, ಕೆಎಮ್‌ಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಹರ್ಷವರ್ಧನ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಾಂಗದ ವೈಫಲ್ಯದಿಂದ ನ್ಯಾಯಾಲಯಗಳಲ್ಲಿ ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿವೆ

● ನ್ಯಾಯಮೂರ್ತಿ ಗುರುಸಿದ್ದಯ್ಯ ಬಸವರಾಜು ಬೇಸರ ● ಮೈಸೂರಲ್ಲಿ 'ಲಾ ಫಾರ್ ಆಲ್' ಕನ್ನಡ ಕಾನೂನು ಮಾಸ ಪತ್ರಿಕೆ ಬಿಡುಗಡೆ


ಮೈಸೂರು, ಆ.19(ಎಸ್‌ಬಿಡಿ)– ಶಾಸಕಾಂಗದ ಶಾಸನಗಳನ್ನು ವಿಧಿವತ್ತಾಗಿ ಅನುಷ್ಠಾನ ಮಾಡುವಲ್ಲಿ ಕಾರ್ಯಾಂಗ ವ್ಯವಸ್ಥೆ ವಿಫಲವಾಗಿರುವ ಪರಿಣಾಮ ನ್ಯಾಯಾಲಯಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಗುರುಸಿದ್ದಯ್ಯ ಬಸವರಾಜು ತಿಳಿಸಿದರು.

ಮೈಸೂರಿನ ಕಲಾಮಂದಿರದಲ್ಲಿ 'ಲಾ ಫಾರ್ ಆಲ್' ಕನ್ನಡ ಕಾನೂನು ಮಾಸ ಪತ್ರಿಕೆ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ನಂತರ ಸಂವಿಧಾನದ ಮೂಲಕ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಸೇರಿ ಭಾರತ ಯಾವ ರೀತಿ ನಡೆಸಿಕೊಂಡು ಹೋಗಬೇಕೆಂದು ತಿಳಿಸಲಾಗಿದೆ. ಸಂವಿಧಾನ ಜಾರಿಗೆ ಬಂದ ನಂತರದಲ್ಲಿಯೂ ಶಾಸಕಾಂಗ ಅನೇಕ ಕಾನೂನುಗಳನ್ನು ರೂಪಿಸಿದೆ. ಆದರೆ ಆ ಶಾಸನಗಳನ್ನು ಕಾರ್ಯಾಂಗದವರು ವಿಧಿವತ್ತಾಗಿ ಅನುಷ್ಠಾನಗೊಳಿಸುವಲ್ಲಿ ವಿಫಲವಾದಾಗ ನ್ಯಾಯಾಂಗ ಪ್ರವೇಶಿಸಬೇಕಾಗುತ್ತದೆ. ಈ ಮೂಲಕ ನ್ಯಾಯಾಲಯಗಳಲ್ಲಿ ಪ್ರಕರಣಗಳು ಹೆಚ್ಚುತ್ತಿವೆ. ಈ ಸಂದರ್ಭದಲ್ಲಿ ನಾಲ್ಕನೇ ಅಂಗವೆನಿಸಿರುವ ಪತ್ರಿಕಾಂಗದ ಜವಾಬ್ದಾರಿ ಮಹತ್ವದ್ದಾಗಿದೆ ಎಂದರು.

ನ್ಯಾಯಾಂಗದ ಉಲ್ಲಂಘನೆ ಮಾಡುವ ಕಾರ್ಯಾಂಗದ ಅಧಿಕಾರಿಗಳಿಗೆ ಕಾನೂನಿನ ಜ್ಞಾನ ತುಂಬಬೇಕಾದ ಪರಿಸ್ಥಿತಿ ಬಂದಿದೆ. ಸರ್ಕಾರದ ಸಂಸ್ಥೆಗಳೇ ಕೆಲವು ಜನತೆಯ ಮುಗ್ಧತೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿವೆ. ತಿಳಿದೂ ಕಾನೂನು ಉಲ್ಲಂಘನೆ ಮಾಡುವವರು ಹೆಚ್ಚಿರುವುದು ವಿಪರ್ಯಾಸ ಎಂದು ಬೇಸರ ವ್ಯಕ್ತಪಡಿಸಿದ ಅವರು, ಯಾವುದೇ ಪ್ರಕಟಣೆ ಇಲ್ಲದೆ, ನೋಟಿಸ್ ನೀಡದೆ ರೈತರೊಬ್ಬರ ಜಮೀನನ್ನು 2002ರಲ್ಲಿ ಸ್ವಾಧೀನಪಡಿಸಿಕೊಂಡು ಪರಿಹಾರ ನೀಡಿರಲಿಲ್ಲ. ಸರ್ಕಾರಿ ಅಧಿಕಾರಿಗಳಿಂದ ಭಯದಲ್ಲಿ ಸುಮ್ಮನಿದ್ದ ರೈತರು ವಕೀಲರೊಬ್ಬರ ನೆರವಿನಿಂದ 2015ರಲ್ಲಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುತ್ತಾರೆ. ನಿಯಮಾನುಸಾರ ನೋಟಿಫಿಕೇಷನ್ ಮಾಡಿ ರೈತರಿಗೆ ಸೂಕ್ತ ಪರಿಹಾರ ನೀಡುವಂತೆ ನ್ಯಾಯಾಲಯದ ಆದೇಶವಿದ್ದರೂ ನಿರ್ಲಕ್ಷಿಸಿ, 2018ರಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಆದರೆ ಇತ್ತೀಚಿಗೆ ನ್ಯಾಯಮೂರ್ತಿಗಳ ನ್ಯಾಯಪೀಠದ ತೀಕ್ಷ್ಣ ಆದೇಶದಿಂದ 23 ವರ್ಷದ ನಂತರ ರೈತನಿಗೆ ಪರಿಹಾರ ಸಿಕ್ಕಿತು. ಆದರೆ ಅಷ್ಟು ವರ್ಷ ಆ ಕುಟುಂಬ ಅನುಭವಿಸಿದ ನೋವು ಎಷ್ಟಿರಬೇಕು ಎಂದು ನಿದರ್ಶನವೊಂದನ್ನು ಸ್ಮರಿಸಿಕೊಂಡರು. ಸಂವಿಧಾನದಲ್ಲಿ ಅನುಚ್ಛೇದ 39(ಎ) ಸೇರ್ಪಡೆ ಮಾಡಿ, ಕಾನೂನು ಸೇವೆ ಪ್ರಾಧಿಕಾರ ಅಧಿನಿಯಮ 1987ನ್ನು ಜಾರಿಗೆ ತಂದಿದ್ದಾರೆ. ಅದರಲ್ಲಿ ಅನೇಕ ಪರಿಶಿಷ್ಟ ಜಾತಿ, ವರ್ಗದವರು, ಮಹಿಳೆಯರು, ಮಕ್ಕಳು ಹಾಗೂ ದುರ್ಬಲರಿಗೆ ಕಾನೂನು ಸೇವಾ ಪ್ರಾಧಿಕಾರದ ಮೂಲಕ ನ್ಯಾಯದಾನ ಮಾಡುವ ವ್ಯವಸ್ಥೆ ಇದೆ. ಆದರೂ ಬಹುಪಾಲು ಜನ ನ್ಯಾಯ ವಂಚಿತರಾಗಿದ್ದಾರೆ. ಅವರಿಗೆ ಕಾನೂನು ಸೇವಾ ಪ್ರಾಧಿಕಾರಕ್ಕೆ ಹೋಗುವಷ್ಟೂ ತಿಳುವಳಿಕೆ ಇರುವುದಿಲ್ಲ. ಕಾನೂನಿಗೆ ಹೊರತಾಗಿ ಯಾರ ಸ್ವತ್ತನ್ನು ವಶಪಡಿಸಿಕೊಳ್ಳುವ ಅಧಿಕಾರ ಸರ್ಕಾರಕ್ಕೂ ಇಲ್ಲ. ಸಾರ್ವಜನಿಕರ ಅನುಕೂಲಕ್ಕಾಗಿ ಬೇಕಾಗುವ ಜಮೀನನ್ನು ಸರ್ಕಾರ ಕಾನೂನು ಪ್ರಕಾರ ವಶಪಡಿಸಿಕೊಳ್ಳಬಹುದು. ಆದರೆ ಯಾವುದೇ ವಿಧಿವಿಧಾನ ಪಾಲಿಸದೆ ಟೆಲಿಕಾಂ ಕೇಬಲ್, ಪೆಟ್ರೋಲಿಯಂ ಪೈಪ್, ಹೈಟೆನ್ಷನ್ ವೈರ್ ಅಳವಡಿಸುವುದು, ರಾಷ್ಟ್ರೀಯ ಹೆದ್ದಾರಿ, ಕೆಐಎಡಿಬಿಯವರು ನೋಟಿಸ್ ನೀಡದೆಯೇ ಭೂಸ್ವಾಧೀನದ ಮೂಲಕ ರೈತರಿಗೆ ತೊಂದರೆ ನೀಡಿರುವ ಹಲವು ಪ್ರಕರಣಗಳನ್ನು ನೋಡಿದ್ದೇನೆ ಎಂದು ತಿಳಿಸಿದರು.

ಖಾಯಂ ಲೋಕ್ ಅದಾಲತ್: ಲೋಕ್ ಅದಾಲತ್ ಬಗ್ಗೆ ಎಲ್ಲರಿಗೂ ಗೊತ್ತು. ಆದರೆ ಖಾಯಂ ಲೋಕ್ ಅದಾಲತ್ ಬಗ್ಗೆ ಹಲವರಿಗೆ ತಿಳಿದಿಲ್ಲ. ಮೈಸೂರು ಸೇರಿದಂತೆ ರಾಜ್ಯದ ಒಟ್ಟು 6 ಕಡೆ ಖಾಯಂ ಲೋಕ್ ಅದಾಲತ್ ಇದೆ. ಸಾರ್ವಜನಿಕ ಉಪಯುಕ್ತತೆಯ ಸೇವೆಯ ಉಲ್ಲಂಘನೆಯಾದರೆ ಯಾವುದೇ ಶುಲ್ಕವಿಲ್ಲದೆ ನ್ಯಾಯಾಲಯಕ್ಕೆ ಹೋಗಬಹುದು. ಬಿಎಸ್‌ಎನ್‌ಎಲ್, ಕೆಎಸ್‌ಆರ್‌ಟಿಸಿ, ರೈಲ್ವೆ ಏರ್ ವೇ, ಬ್ಯಾಂಕಿಂಗ್ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಇನ್ನಿತರ ಸಂಸ್ಥೆಗಳ ಸೇವೆಯಲ್ಲಿ ಉಲ್ಲಂಘನೆಯಾದರೆ ಖಾಯಂ ಲೋಕ್ ಅದಾಲತ್ ನೆರವು ಪಡೆಯಬಹುದು. ಆದರೆ ಇದು ಸರಿಯಾಗಿ ಅನುಷ್ಠಾನವಾಗುತ್ತಿಲ್ಲ. ಹಲವರಿಗೆ ಈ ಬಗ್ಗೆ ಮಾಹಿತಿ ಇಲ್ಲ ಎಂದರು.

ರಾಣೆಬೆನ್ನೂರು ಹಾಗೂ ಬಾಗಲಕೋಟೆಯಲ್ಲಿ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುವ ಸಂದರ್ಭದಲ್ಲಿನ ಪ್ರಕರಣಗಳನ್ನು ಉಲ್ಲೇಖಿಸಿ, ಕಕ್ಷಿದಾರರಿಗೆ ನ್ಯಾಯದ ನೆರವು ನೀಡುವ ವಕೀಲರ ಮಹತ್ತರ ಪಾತ್ರ ಹಾಗೂ ವಕೀಲರ ನಿರ್ಲಕ್ಷ್ಯದಿಂದಾಗುವ ಪರಿಣಾಮವನ್ನು ತಿಳಿಸಿದ ನ್ಯಾಯಮೂರ್ತಿ ಗುರುಸಿದ್ದಯ್ಯ ಬಸವರಾಜು, ನಾಲ್ಕನೇ ಅಂಗ ಪತ್ರಿಕಾಂಗದ ಜವಾಬ್ದಾರಿ ಮಹತ್ವದ್ದಾಗಿದೆ. ಸಾರ್ವಜನಿಕರಿಗೆ ಕಾನೂನಿನ ಮಾಹಿತಿ ಒದಗಿಸಿ, ಸಾಮಾಜಿಕ ನ್ಯಾಯ ಕಲ್ಪಿಸುವ ನಿಟ್ಟಿನಲ್ಲಿ 'ಲಾ ಫಾರ್ ಆಲ್' ಕಾನೂನು ಮಾಸ ಪತ್ರಿಕೆ ತರುತ್ತಿರುವುದು ಶ್ಲಾಘನೀಯ. ಎಲ್ಲರೂ ಇದನ್ನು ಬೆಂಬಲಿಸಬೇಕಾಗುತ್ತದೆ. ಸಾರ್ವಜನಿಕರಿಗೆ ಅನುಕೂಲವಾಗುವ ಕಾನೂನು ಮಾಹಿತಿ ಜೊತೆಗೆ ನ್ಯಾಯ ಪಡೆಯಲು ಬೇಕಾದ ಸೂಕ್ತ ಮಾರ್ಗದರ್ಶನವನ್ನೂ ನೀಡಬೇಕೆಂದು ಆಶಿಸಿದರು. ಹೈಕೋರ್ಟ್ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರು 'ಲಾ ಫಾರ್ ಆಲ್' ಮಾಸ ಪತ್ರಿಕೆಯನ್ನು ಬಿಡುಗಡೆ ಮಾಡಿ, ಮಾತನಾಡಿದರು. ಕರ್ನಾಟಕ ವಕೀಲರ ಪರಿಷತ್ ಮಾಜಿ ಅಧ್ಯಕ್ಷ, ಹೈಕೋರ್ಟ್ ಹಿರಿಯ ವಕೀಲ ಜಯಕುಮಾರ್ ಎಸ್.ಪಾಟೀಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಸ್.ಟಿ.ದೇವರಾಜ್, ಹಿರಿಯ ವಕೀಲ ಕೆ.ಆರ್.ಶಿವಶಂಕರ್, ಕರ್ನಾಟಕ ರಾಜ್ಯ ವಕೀಲರ ಪರಿಷತ್ ಮಾಜಿ ಅಧ್ಯಕ್ಷ ಸಿ.ಎಂ.ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು. ಮೈಸೂರು ವಕೀಲರ ಸಂಘದ ಮಾಜಿ ಕಾರ್ಯದರ್ಶಿ, ಮಾಜಿ ಜಿಲ್ಲಾ ಸರ್ಕಾರಿ ವಕೀಲ ಕೆ.ಜಿ.ಸುರೇಶ್(ಕಜಾಳ್ ಸುರೇಶ್) ಈ ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದು, ಇದನ್ನು ದಟ್ಟಗಳ್ಳಿ ಮೂರನೇ ಹಂತ, ಮಹಾಲಕ್ಷ್ಮೀ ಲೇಔಟ್‌ನ ಪುಷ್ಕರ ಪ್ರಕಾಶನದ ಮೂಲಕ ಹೊರತರಲಾಗುತ್ತಿದೆ.



ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ 'ಲಾ ಫಾರ್ ಆಲ್' ಕನ್ನಡ ಕಾನೂನು ಮಾಸ ಪತ್ರಿಕೆಯನ್ನು ಬಿಡುಗಡೆ ಮಾಡಿದರು. ಹೈಕೋರ್ಟ್ ನ್ಯಾಯಮೂರ್ತಿ ಗುರುಸಿದ್ದಯ್ಯ ಬಸವರಾಜು, ಮೈಸೂರು ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಸ್.ಟಿ.ದೇವರಾಜ್, ಹಿರಿಯ ವಕೀಲ ಜಯಕುಮಾರ್ ಎಸ್.ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

ನಟ ಚೇತನ್ ಅಹಿಂಸಾ ವಿರುದ್ಧ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕ್ರಿಯೆಗೆ ಅಸ್ತು

ಬೆಂಗಳೂರು: ಹಿಜಾಬ್ ಪ್ರಕರಣದಲ್ಲಿ ತೀರ್ಪು ನೀಡಿದ್ದ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳ ವಿರುದ್ಧ ಆಕ್ಷೇಪಾರ್ಹ ಟ್ವೀಟ್ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಕನ್ನಡದ ಚಿತ್ರನಟ ಚೇತನ್ ಕುಮಾರ್ ಹಾಗೂ ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆ ಹಾಕಿದ ಆರೋಪದಡಿ ತಮಿಳುನಾಡಿನ 'ತೌಹೀದ್ ಜಮಾತ್' ಅಧ್ಯಕ್ಷ ಆರ್. ರಹಮತ್ ಉಲ್ಲಾ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಲು ಕರ್ನಾಟಕದ ಅಡ್ವೊಕೇಟ್ ಜನರಲ್ (ಎಜಿ) ಕೆ. ಶಶಿಕಿರಣ್ ಶೆಟ್ಟಿ ಅನುಮತಿಸಿದ್ದಾರೆ.

ನ್ಯಾಯಾಂಗ ಮತ್ತು ನ್ಯಾಯಮೂರ್ತಿಗಳ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪದಡಿ ಚೇತನ್ ಅಹಿಂಸಾ, ರಹಮತ್ ಉಲ್ಲಾ, ಸಿಪಿಐ (ಎಂ) ನಾಯಕ ಸೀತಾರಾಂ ಯೆಚೂರಿ ಹಾಗೂ "ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ" (ಸಿಎಫ್‌ಐ) ಅಧ್ಯಕ್ಷ ಅತ್ತಾವುಲ್ಲಾ ಪುಂಜಾಲಕಟ್ಟೆ ವಿರುದ್ಧ ನ್ಯಾಯಾಂಗ ನಿಂದನೆ ಕಾಯ್ದೆಯ ಕಲಂ 15(1)(ಬಿ) ಅಡಿ ಕ್ರಮ ಕೈಗೊಳ್ಳಲು ಅನುಮತಿಸಬೇಕು ಎಂದು ಕೋರಿ ನಗರದ ಸಾಮಾಜಿಕ ಕಾರ್ಯಕರ್ತ ಗಿರೀಶ್ ಭಾರದ್ವಾಜ್ ಮನವಿ ಮಾಡಿದ್ದರು.

ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಯಾವ ಪಕ್ಷದೊಂದಿಗೂ ಹೊಂದಾಣಿಕೆ ಇಲ್ಲ

● ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ಸ್ಪಷ್ಟನೆ
● ಯಾವ ಜೆಡಿಎಸ್ ಶಾಸಕರು, ಮಾಜಿ ಶಾಸಕರು, ಮುಖಂಡರೂ ಕಾಂಗ್ರೆಸ್ ಸೇರಲ್ಲ
● ಸಿದ್ದರಾಮಯ್ಯರ ನನ್ನ ಲೆವೆಲ್‌ಗೆ ಹೋಲಿಸಬೇಡಿ; ಅವರೇನಿದ್ದರೂ ಮೋದಿ ಲೆವೆಲ್!



ಮೈಸೂರು, ಆ.19– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಯಾವ ಪಕ್ಷದೊಂದಿಗೂ ಮೈತ್ರಿ ಮಾಡಿಕೊಳ್ಳುವುದಿಲ್ಲ. ನಮ್ಮ ಯಾವ ಶಾಸಕರು, ಮುಖಂಡರೂ ಪಕ್ಷ ತೊರೆಯುವುದಿಲ್ಲ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಜೆಡಿಎಸ್‌ನ ಯಾವೊಬ್ಬ ಶಾಸಕರು, ಮುಖಂಡರು ಪಕ್ಷ ತೊರೆಯುವುದಿಲ್ಲ. ಕಾಂಗ್ರೆಸ್ ಪಕ್ಷ 135 ಸ್ಥಾನಗಳಿಸಿ ಅಧಿಕಾರಕ್ಕೆ ಬಂದಿದೆ. ಕಾಂಗ್ರೆಸ್ ಕೆರೆ ಇದೀಗ ಭರ್ತಿಯಾಗಿದೆ. ಬೇರೆಯವರನ್ನು ಸೇರಿಸಿಕೊಂಡರೆ ಕೆರೆ ಒಡೆದು ಹೋಗುತ್ತದೆ ಎಂದು ತಮ್ಮದೇ ಧಾಟಿಯಲ್ಲಿ ಸಚಿವ ಚಲುವರಾಯಸ್ವಾಮಿ ಹೇಳಿಕೆಗೆ ತಿರುಗೇಟು ನೀಡಿದರು.

ಈಗಾಗಲೇ ಕಾಂಗ್ರೆಸ್‌ನ ಹಲವು ಶಾಸಕರು ಅಸಮಾಧಾನ ಹೊರ ಹಾಕಿದ್ದಾರೆ. ಹಿರಿಯ ಶಾಸಕ ಬಸವರಾಜ ರಾಯರೆಡ್ಡಿಯವರೇ ರಾಜ್ಯ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ಕೆ.ಹೆಚ್.ಮುನಿಯಪ್ಪನವರು ಎರಡೂವರೆ ವರ್ಷಕ್ಕೆ ಹಿರಿಯರೆಲ್ಲ ಸಚಿವ ಸ್ಥಾನ ತ್ಯಾಗ ಮಾಡಬೇಕು ಎಂದು ಹೇಳಿದ್ದಾರೆ. ಹೀಗಿರುವಾಗ ಜೆಡಿಎಸ್‌ನವರು ಕಾಂಗ್ರೆಸ್ ಸೇರಲು ಸಿದ್ಧರಿದ್ದಾರೆ ಎಂದು ವದಂತಿ ಹರಡಲು ಮುಂದಾಗಿದ್ದಾರೆ ಎಂದರು.

ಯಾರಾದರೂ ಸ್ಪರ್ಧಿಸಬಹುದು: ಕಾಂಗ್ರೆಸ್‌ನಿಂದ ನಮಗೆ ಯಾವುದೇ ಆಫರ್ ಬಂದಿಲ್ಲ. ಮಾಜಿ ಪ್ರಧಾನಿ ದೇವೇಗೌಡರ ಮಾರ್ಗದರ್ಶನದಲ್ಲಿ ಪಕ್ಷ ಸಂಘಟನೆ ಮಾಡುವುದಷ್ಟೇ ನಮ್ಮ ಗುರಿ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಸ್ವಂತ ಬಲದೊಂದಿಗೆ ಸ್ಪರ್ಧಿಸಲಿದೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಜೊತೆ ಜೆಡಿಎಸ್ ಮೈತ್ರಿ ಮಾಡಿಕೊಳ್ಳುವುದಿಲ್ಲ. ಒಂದು, ಐದು ಅಥವಾ ಹತ್ತು ಸೀಟು ಗೆಲ್ಲುತ್ತೀವೋ ಗೊತ್ತಿಲ್ಲ. ಆದರೆ ಜೆಡಿಎಸ್ ಯಾವುದೇ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೆ ರಾಜ್ಯದ ಎಲ್ಲಾ 28 ಕ್ಷೇತ್ರಗಳಲ್ಲೂ ಸ್ಪರ್ಧಿಸಲಿದೆ. ಮಾಜಿ ಸಚಿವ ಸಾ.ರಾ ಮಹೇಶ್, ಪುಟ್ಟರಾಜು ಸೇರಿದಂತೆ ಯಾರು ಬೇಕಾದರೂ ಸ್ಪರ್ಧಿಸಬಹುದು. ಪಕ್ಷ ಸೂಚಿಸಿದರೆ ನಾನೂ ಕೂಡ ಸ್ಪರ್ಧಿಸಲು ಸಿದ್ಧನಿದ್ದೇನೆ ಎಂದು ಹೇಳಿದರು.

ಲೋಕಸಭಾ ಚುನಾವಣೆಗೆ ಹಳೇ ಮೈಸೂರು ಭಾಗದಲ್ಲಿ ಸಿದ್ದರಾಮಯ್ಯ ವರ್ಸಸ್ ಜಿ.ಟಿ.ದೇವೇಗೌಡ ಸನ್ನಿವೇಶ ಸೃಷ್ಟಿಯಾಗಬಹುದೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಸಿದ್ದರಾಮಯ್ಯನವರದ್ದೇನಿದ್ದರೂ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಫೈಟಿಂಗ್. ಅವರೊಂದಿಗೆ ನನ್ನನ್ನು ಏಕೆ ಹೋಲಿಸುತ್ತೀರಿ. ಸಿದ್ದರಾಮಯ್ಯ ವರ್ಸಸ್ ನರೇಂದ್ರ ಮೋದಿ ಅಷ್ಟೇ ಎಂದರು.

ತಮಿಳುನಾಡಿಗೆ ನೀರು ಬಿಡಬಾರದು. ನಮ್ಮವರಿಗೆ ಕುಡಿಯಲು, ರೈತರ ಬೆಳೆಗಳಿಗೆ ನೀರಿಲ್ಲ ಎಂದು ಹೋರಾಟ ಮಾಡುತ್ತಿದ್ದೇವೆ ಎಂದು ರಾಜ್ಯ ಸರ್ಕಾರದ ಕ್ರಮವನ್ನು ಜಿಟಿಡಿ ಇದೇ ವೇಳೆ ಖಂಡಿಸಿದರು.

ಗೃಹ ಪ್ರವೇಶಕ್ಕೆ ಆಹ್ವಾನಿಸುವ ನೆಪದಲ್ಲಿ ದಂಪತಿಗೆ ಇರಿತ; ಓರ್ವನ ಬಂಧನ

ಮೈಸೂರು, ಆ.19(ಆರ್‌ಕೆ)– ಗೃಹ ಪ್ರವೇಶಕ್ಕೆ ಆಹ್ವಾನಿಸುವ ನೆಪದಲ್ಲಿ ಚಿನ್ನದಂಗಡಿ ಮಾಲೀಕ ಹಾಗೂ ಆತನ ಪತ್ನಿಗೆ ಚಾಕುವಿನಿಂದ ಇರಿದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವನನ್ನು ಮೈಸೂರಿನ ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಹೂಟಗಳ್ಳಿಯಲ್ಲಿ ವಾಸವಿರುವ ಮೂಲತಃ ಕಲಘಟಗಿಯ ವೀರೇಶ್ (31)ನನ್ನು ಬಂಧಿಸಿದ್ದು, ಆತನ ಪತ್ನಿ ಪ್ರಿಯಾಂಕ ಪತ್ತೆಗೆ ಶೋಧ ನಡೆಸಿದ್ದಾರೆ ಎನ್ನಲಾಗಿದೆ. ಹೂಟಗಳ್ಳಿಯಲ್ಲಿ ಜ್ಯೂವೆಲರಿ ಶಾಪ್ ನಡೆಸುತ್ತಿರುವ ಬಾಬುರಾವ್ ಮನೆಗೆ ಆ.16ರ ಮಧ್ಯಾಹ್ನ 12.30ರ ಸಂದರ್ಭದಲ್ಲಿ ಓರ್ವ ಪುರುಷ ಹಾಗೂ

ಈತನ ಪತ್ತೆಗಾಗಿ ಶೋಧ

ಮಹಿಳೆ ಗೃಹ ಪ್ರವೇಶದ ಆಹ್ವಾನ ಪತ್ರಿಕೆ ನೀಡುವ ನೆಪದಲ್ಲಿ ಬಂದಿದ್ದರು. ಬಾಬುರಾವ್ ಮನೆ ಬಾಗಿಲು ತೆಗೆದಾಗ ನಿಮ್ಮ ಮಗ ಹರೀಶನಿಗೆ ಗೃಹಪ್ರವೇಶದ ಆಹ್ವಾನ ಪತ್ರಿಕೆ ಕೊಡಬೇಕು ಅವನನ್ನು ಕರೆಯಿರಿ ಎಂದಿದ್ದರು. ಆತ ಮನೆಯಲ್ಲಿಲ್ಲ ಎಂದಾಗ ಕುಡಿಯಲು ನೀರು ಕೇಳಿ, ಮನೆಯೊಳಗೆ ನುಗ್ಗಿದ್ದರು. ನಿಮ್ಮ ಮಗನಿಗೇ ಪತ್ರಿಕೆ ಕೊಡಬೇಕೆಂದು ಕಿರುಚಾಡಿ, ಬಾಬುರಾವ್ ಕೈಗೆ ಚಾಕುವಿನಿಂದ ಚುಚ್ಚಿದ್ದಲ್ಲದೆ ರಕ್ಷಣೆಗೆ ಬಂದ ಅವರ ಪತ್ನಿ ಕಮಲಾಬಾಯಿಗೂ ಚಾಕುವಿನಿಂದ ಚುಚ್ಚಿ ಬೆದರಿಸಿದ್ದರು. ಕಮಲಾಬಾಯಿ ಕೂಗಿಕೊಂಡು ಮನೆಯಿಂದ ಹೊರಬಂದಿದ್ದರಿಂದ ಆರೋಪಿಗಳು ಪರಾರಿಯಾಗಿದ್ದರು.

ಈ ಸಂಬಂಧ ವಿಜಯನಗರ ಠಾಣೆಯಲ್ಲಿ ಕೊಲೆ ಯತ್ನ ಪ್ರಕರಣ ದಾಖಲಾಗಿತ್ತು. ಇನ್‌ಸ್ಪೆಕ್ಟರ್ ರವಿಶಂಕರ್ ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಓರ್ವನನ್ನು ಬಂಧಿಸಿದ್ದಾರೆ ಎಂದು ತಿಳಿದುಬಂದಿದೆ. ವೀರೇಶ್ ಸೆಕ್ಯೂರಿಟಿ ಗಾರ್ಡ್ ಹಾಗೂ ಹಚ್ಚೆ ಹಾಕುವ ವೃತ್ತಿ ಮಾಡುತ್ತಿದ್ದ. ಆತನ ಪತ್ನಿ ಕೆ.ಆರ್.ಪೇಟೆ ತಾಲೂಕು ಮೂಲದ ಪ್ರಿಯಾಂಕ ಬ್ಯೂಟಿ ಪಾರ್ಲರ್ ನಡೆಸುತ್ತಿದ್ದಳು. ಹಣ ದೋಚುವ ಉದ್ದೇಶದಿಂದ ಆನ್‌ಲೈನ್‌ನಲ್ಲಿ ಚಾಕು ಖರೀದಿಸಿ, ಬಾಬುರಾವ್ ಮನೆಗೆ ತೆರಳಿದ್ದರು ಎಂದು ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ.

ಪ್ರಸ್ತುತ ಮಕ್ಕಳಿಗೆ ನೈತಿಕ ಶಿಕ್ಷಣ ಅತ್ಯಂತ ಅನಿವಾರ್ಯ

ಮೈಸೂರು, ಆ. 19– ಮಕ್ಕಳಿಗೆ ನೈತಿಕ ಶಿಕ್ಷಣ ನೀಡಬೇಕು ಎಂದು ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಕೆ. ಅನಂತರಾಮು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಶ್ರಾವಣ ಮಾಸದ 2ನೇ ದಿನದ ಅಂಗವಾಗಿ ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಕುರಿತು ಶುಕ್ರವಾರ ಪ್ರವಚನ ನೀಡುತ್ತಾ ತಿಳಿಸಿದರು.

ಇಂದು ಮಕ್ಕಳಿಗೆ ಅಂಕ ಗಳಿಕೆಯ ಶಿಕ್ಷಣವನ್ನು ಮಾತ್ರ ನೀಡಲಾಗುತ್ತಿದೆ. ಬದುಕಿನಲ್ಲಿ ಕೇವಲ ಮಾರ್ಕ್ಸ್ ಮಾತ್ರ ಇದ್ದರೆ ಸಾಲದು, ರಿಮಾರ್ಕ್ಸ್‌ಗಳು ಇರದಂತೆ ನೋಡಿಕೊಳ್ಳಬೇಕು. ಲಕ್ಕಣ್ಣ ದಂಡೇಶ ಮತ್ತು ಲಕ್ಷ್ಮೀಧರ ಅಮಾತ್ಯರುಗಳಿಗೆ ಬಾಲ್ಯದಲ್ಲೇ ಅವರ ತಾಯಂದಿರು ನೀಡಿದ ನೀತಿ ಶಿಕ್ಷಣದಿಂದಲೇ ಮಹಾತ್ಮರಾದರು. ವಿಜಯನಗರ ಸಾಮ್ರಾಜ್ಯದ ಇಮ್ಮಡಿ ದೇವರಾಯನ ದಂಡನಾಯಕನಾಗಿದ್ದ ಲಕ್ಕಣ್ಣ ದಂಡೇಶ ಮಹಾನ್ ಶಿವಭಕ್ತನಾಗಿದ್ದನು. ಮಹಾಮಂತ್ರಿಯಾಗಿಯೂ ಅನೇಕ ಲೋಕೋಪಕಾರಿ ಕಾರ್ಯಗಳನ್ನು ಮಾಡಿದ್ದರು. ದಂಡೇಶ ಶ್ರೇಷ್ಠ ಕವಿಯೂ ಆಗಿದ್ದ ಹಾಗೂ ಕಲಿಯೂ ಆಗಿದ್ದ. ಕಾಯಕಕ್ಕೆ ಹೆಚ್ಚು ಮಹತ್ವ ನೀಡುತ್ತಿದ್ದನು. ಕಾಯಕದಲ್ಲಿ ಯಾವುದೇ ಬೇಧ ಭಾವಗಳಿಲ್ಲ ಎನ್ನುತ್ತಿದ್ದನು. ಯಾವ ಕೆಲಸ ಮಾಡಿದರು. ಸತ್ಯ ಶುದ್ಧ ಕಾಯಕದಿಂದ ಮಾಡಬೇಕು. ಮಾಡಿಯೂ ಮಾಡದ ಭಾವವಿರಬೇಕು ಎಂದು ಹೇಳಿದರು.

ಎಲ್ಲ ಜನರ ಬಯಕೆಗಳನ್ನೂ ಈಡೇರಿಸುವವನೇ ಭಗವಂತ. ಎಲ್ಲರೂ ಬದುಕಿನಲ್ಲಿ ಮಂಗಳವನ್ನು ಕಾಣಬೇಕು ಎಂದು ಲಕ್ಕಣ್ಣ ದಂಡೇಶ ಬಯಸುತ್ತಿದ್ದನು. ಅಲ್ಲಮರನ್ನು ಪರಿವ್ರಾಜಕರೆಂದು, ಬಸವಣ್ಣನವರನ್ನು ನಿರುಪಮರೆಂದು, ಚೆನ್ನಬಸವಣ್ಣನವರನ್ನು ಕಾಮಧೇನು ಎಂದು ಶರಣರನ್ನು ಕೊಂಡಾಡಿದ್ದಾನೆ. ಶಿವತತ್ತ್ವ ಚಿಂತಾಮಣಿಯು ವೇದಾಗಮಗಳು, ವಚನಗಳು ಹಾಗೂ ಪುರಾಣ ಗ್ರಂಥಗಳ ಹೂರಣವನ್ನು ಒಳಗೊಂಡಿದೆ. ಎಲ್ಲರೂ ಇದನ್ನು ವಾಚಿಸಬೇಕು, ಆಲಿಸಬೇಕು ಎಂದು ದಂಡೇಶನು ನಿವೇದಿಸಿಕೊಂಡಿದ್ದಾನೆ ಎಂದು ತಿಳಿಸಿದರು. ವಿದ್ವಾನ್ ಕೃ. ರಾಮಚಂದ್ರರವರು ಕಾವ್ಯ ವಾಚನ ಮಾಡಿದರು. ಟಿ. ನರಸೀಪುರದ ಶ್ರೀಮತಿ ಸುಂದರಮ್ಮ ಮತ್ತು ಮಕ್ಕಳು ಸೇವಾರ್ಥ ನೆರವೇರಿಸಿದರು. ಸಾಮೂಹಿಕ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಭಕ್ತಾದಿಗಳು ಹಾಗೂ ಆಧ್ಯಾತ್ಮಿಕ ಜಿಜ್ಞಾಸುಗಳು ಪಾಲ್ಗೊಂಡಿದ್ದರು.



ಮೈಸೂರ್ ಸೈನ್ಸ್ ಫೌಂಡೇಶನ್ ಮತ್ತು ಅರಣ್ಯ ಔಟ್ರೀಚ್ ವತಿಯಿಂದ ಕುಕ್ಕರಹಳ್ಳಿ ಕೆರೆಯಲ್ಲಿ ಪಕ್ಷಿ ವೀಕ್ಷಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪಕ್ಷಿವೀಕ್ಷಣೆ ಯಲ್ಲಿ ಪರಿಸರವಾದಿ ಸಪ್ತ ಗಿರೀಶ್ ಮತ್ತು ಉಕ್‌ಪ್ರೀತ್ ಕೌರ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಕೆರೆಯ ಮಹತ್ವ, ಜೀವ ವೈವಿಧ್ಯತೆ ಕೆರೆಯ ಸುತ್ತಲೂ ಹೇಗೆ ಹರಡಿಕೊಳ್ಳುತ್ತದೆ. ಕೆರೆ ಇದ್ದರೆ ನಾಡು ಮತ್ತು ಕೆರೆಗೆ ಹೊಂದಿಕೊಂಡಂತಹ ಪಕ್ಷಿ ಸಂಕುಲಗಳ ಪರಿಚಯವನ್ನು ಮಾಡಿಕೊಟ್ಟರು. ಈ ವೇಳೆ ಮಕ್ಕಳು ಕೇಳಿದಂತಹ ಹಲವು ಕುತೂಹಲಕಾರಿ ಪ್ರಶ್ನೆಗಳಿಗೆ ಉತ್ತರ ನೀಡಿದರು. 40ಕ್ಕೂ ಹೆಚ್ಚು ಪಕ್ಷಿಗಳನ್ನು ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಗುರುತಿಸಿದರು. ಎಂಎಸ್ಎಫ್‌ನ ಎಚ್.ವಿ.ಮುರಳೀಧರ್ ಸಿ.ಪುರಂದರ ಉಪಸ್ಥಿತರಿದ್ದರು.

ಛಾಯಾಗ್ರಹಣ ಕೇವಲ ವೃತ್ತಿ ಅಲ್ಲ ಅದೊಂದು ಕಲೆ, ಬದುಕು, ಭಾವನೆ

ಛಾಯಾಗ್ರಹಣ ದಿನಾಚರಣೆಯಲ್ಲಿ ಎಂ.ಕೆ.ಸೋಮಶೇಖರ್ ಅಭಿಮತ

ಮೈಸೂರು, ಆ. 19– ಮೈಸೂರು ಡಿಸ್ಟ್ರಿಕ್ಟ್ ಫೋಟೋಗ್ರಾಫರ್ಸ್ ಅಂಡ್ ವೀಡಿಯೋಗ್ರಾಫರ್ಸ್ ಅಸೋಸಿಯೇಷನ್ ವತಿಯಿಂದ ಮೈಸೂರಿನ ಕುವೆಂಪುನಗರದ ಗಾನಭಾರತೀ ರಮಾಗೋವಿಂದ ಕಲಾ ವೇದಿಕೆಯಲ್ಲಿ 184ನೇ ವಿಶ್ವ ಛಾಯಾಗ್ರಹಣ ದಿನ ಆಚರಿಸಲಾಯಿತು.

ಮಾಜಿ ಶಾಸಕರು ಹಾಗೂ ಅಸೋಸಿಯೇಷನ್‌ನ ಗೌರವ ಅಧ್ಯಕ್ಷರೂ ಆದ ಎಂ.ಕೆ.ಸೋಮಶೇಖರ್ ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಸಂಘದ ಅಧ್ಯಕ್ಷ ದಡದಹಳ್ಳಿ ಮಹೇಶ್, ಶಾಸಕರಾದ ಜಿ.ಟಿ.ದೇವೇಗೌಡ, ಕೆ. ಹರೀಶ್ ಗೌಡ, ಸಂಘದ ಕಾರ್ಯದರ್ಶಿ ಸುದರ್ಶನ್, ಸಹಕಾರ್ಯದರ್ಶಿ ಆರ್. ಪ್ರಮೋದ್, ಖಜಾಂಚಿ ಲೋಕೇಶ್.ಎಂ, ಆರೋಗ್ಯ ನಿಧಿ ಛೇರ್ಮನ್ ಶಿವಕುಮಾರ್ ಹೆಚ್.ಎನ್., ಜನಸಂಪರ್ಕಾಧಿಕಾರಿ ಮಂಜುನಾಥ್, ನಿರ್ದೇಶಕರಾದ ಮೋಹನ್, ಚೈತನ್ಯ ರಾವ್, ರವಿಚಂದ್ರ.ಜೆ, ಮಂಜುನಾಥ್, ಉಮೇಶ್.ಕೆ, ಎಂ.ಎಸ್.ಕಾಂತರಾಜು ಮತ್ತಿತರರು ಉಪಸ್ಥಿತರಿದ್ದರು.



ಇದೇ ವೇಳೆ ಹಿರಿಯ ಛಾಯಾಗ್ರಾಹಕರಾದ ಎಂ.ಎನ್.ವಿ ಆನಂದ್, ಸಿ ಅಭಿನಂದನ್, ಎ.ಎಸ್. ಉಮೇಶ್, ಪ್ರವೀಣ್ ಕುಮಾರ್ ವಿಜನ್, ಎಂ.ಮಲ್ಲೇಶ್, ಪಿ.ವಿ.ಅನಿಲ್‌ಕುಮಾರ್, ವಿಜಯ್ ಕುಮಾರ್, ಮಂಜುನಾಥ್, ರಾಮಸ್ವಾಮಿ, ಕೆ.ಎಸ್, ಲೋಕೇಶ್, ಸುಧೀರ್, ಮುರುಳೀಧರ್, ಶ್ರೀನಿವಾಸ್ ಅವರನ್ನು ಸನ್ಮಾನಿಸಲಾಯಿತು. ಅಲ್ಲದೆ, ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಛಾಯಾಗ್ರಾಹಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ರವಿಕಾಣದ್ದನ್ನು ಕವಿ ಕಂಡ, ಕವಿ ಕಾಣದ್ದನ್ನು ರವಿ ಕಂಡ ಎನ್ನುವುದಕ್ಕಿಂತ ಇವರಿಬ್ಬರು ಕಾಣದ್ದನ್ನು ಕ್ಯಾಮರಾಮ್ಯಾನ್ ಕಂಡ ಅಂತ ಶಕ್ತಿ ಛಾಯಾಗ್ರಹಣಕ್ಕಿದೆ. ವಿಶ್ವದ ಎಲ್ಲೆಡೆ ಏನೇ ನಡೆದರೂ ಕೂತಲ್ಲೇ ನೋಡುವಂತಹ ಅದ್ಭುತವಾದ ಶಕ್ತಿ ಕ್ಯಾಮರಾಕ್ಕಿದೆ. ಛಾಯಾಗ್ರಾಹಕರಿಲ್ಲದೆ ಮದುವೆಯೂ ಕೂಡ ನಡೆಯದಂತಹ ಕಾಲಘಟ್ಟದಲ್ಲಿ ನಾವಿದ್ದೇವೆ. ಹಾಗಾಗಿ, ಇವತ್ತಿನ ತಂತ್ರಜ್ಞಾನವನ್ನು ಸದ್ಬಳಕೆ ಮಾಡಿಕೊಂಡು ಯಶಸ್ವಿ ಛಾಯಾಗ್ರಾಹಕರಾಗಿ ಹೊರಹೊಮ್ಮಬಹುದು ಎಂದು ತಿಳಿಸಿದರು.

ಎಂ.ಕೆ.ಸೋಮಶೇಖರ್ ಮಾತನಾಡಿ, ಛಾಯಾಗ್ರಹಣ ಎಂದರೆ ಕೇವಲ ಛಾಯಾಚಿತ್ರ ತೆಗೆಯುವುದಷ್ಟೇ ಅಲ್ಲ. ಅದೊಂದು ಸೃಜನಾತ್ಮಕ ಕಲೆ. ಸಾವಿರ ಚಿತ್ರಪಟಗಳನ್ನು ತೆಗೆಯಬಹುದು. ಆದರೆ ಕೇವಲ ಒಂದು ಚಿತ್ರ ಸಾವಿರ ಪದಗಳನ್ನು ತಿಳಿಸುವಂತಹ ಸಾಮರ್ಥ್ಯವನ್ನು ಹೊಂದಿದೆ. ಪ್ರತೀ ಚಿತ್ರದಲ್ಲೂ ಒಂದು ಶಿಸ್ತು, ನಗು, ಭಾವನೆಯ ರಸದೌತಣವಿರುತ್ತದೆ. ಹಾಗಾಗಿ, ಛಾಯಾಗ್ರಾಹಕ ವೃತ್ತಿಯಲ್ಲಿ ಯಶಸ್ವಿಯಾಗಬೇಕಾದರೆ ಶಿಸ್ತು, ತಾಳ್ಮೆ ಅತ್ಯವಶ್ಯಕವಾಗುತ್ತದೆ. ಛಾಯಾಗ್ರಾಹಕ ವೃತ್ತಿಯನ್ನು ನಂಬಿ ಸಮಾಜದಲ್ಲಿ ಕೆಟ್ಟವರು ಯಾರೂ ಇಲ್ಲ. ಬದಲಾಗಿ ಉತ್ತಮ ಭವಿಷ್ಯ ರೂಪಿಸಿಕೊಂಡು ಸಮಾಜದಲ್ಲಿ ಒಳ್ಳೆಯ ಹೆಸರು ಗಳಿಸಿದ್ದೇ ಜಾಸ್ತಿ. ಇವತ್ತಿನ ದಿನಮಾನದಲ್ಲಿ ದೊಡ್ಡದೊಡ್ಡ ಆಗರ್ಭ ಶ್ರೀಮಂತರೂ ಸಹ ಛಾಯಾಗ್ರಹಣವನ್ನು ಹೆಚ್ಚು ಪ್ರೀತಿಸುತ್ತಾರೆ. ಏಕೆಂದರೆ ಅದು ವ್ಯಕ್ತಿತ್ವ ವಿಕಸನ, ಶಿಸ್ತು, ಸಮಾಜದಲ್ಲಿ ಅತ್ಯುತ್ತಮ ಗೌರವವನ್ನು ತಂದುಕೊಡುವುದರೊಂದಿಗೆ ಆರ್ಥಿಕವಾಗಿ ಸಬಲರಾಗಲು ಸಹ ನೆರವು ನೀಡುತ್ತದೆ. ಆಯಾ ಕಾಲಘಟ್ಟಕ್ಕೆ ತಕ್ಕಂತೆ ಹೊಸ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಗ್ರಾಹಕರನ್ನು ಸೆಳೆಯುವಲ್ಲಿ ಪ್ರಯತ್ನಿಸಿ ಎಂದು ತಿಳಿಸಿದರು.

ಮೈಸೂರು ಮಿತ್ರ ಭಾನುವಾರ 20 ಆಗಸ್ಟ್ 2023

ಕೆಸರುಗದ್ದೆ ಕ್ರೀಡಾಕೂಟದಲ್ಲಿ ಮಿಂದೆದ್ದ ವಿದ್ಯಾರ್ಥಿಗಳು



ಮಡಿಕೇರಿ/ಕುಶಾಲನಗರ,ಆ.19– ಉತ್ತರ ಕೊಡಗಿನ ಕುಶಾಲನಗರ ತಾಲೂಕಿನ ಕೂಡುಮಂಗಳೂರು ಗ್ರಾಮ ಸಹಕಾರದೊಂದಿಗೆ ಕೂಡುಮಂಗಳೂರು (ಕೂಡ್ಲೂರು) ಸರ್ಕಾರಿ ಪ್ರೌಢಶಾಲೆಯ ಗ್ರಾಮದ ದೇವಾಲಯ ಸಮಿತಿಯ ಆಶ್ರಯದಲ್ಲಿ ಕೂಡ್ಲೂರು ಗ್ರಾಮದ ಪ್ರಗತಿಪರ ರೈತ ಕೆ.ಎಸ್.ರಾಜಾಚಾರಿ ಗದ್ದೆಯಲ್ಲಿ ಏರ್ಪಡಿಸಿದ್ದ 2ನೇ ವರ್ಷದ ಜನಪದ ಶೈಲಿಯ ಗ್ರಾಮೀಣ ಕೆಸರುಗದ್ದೆ ಕ್ರೀಡಾಕೂಟ ಸಂಭ್ರಮ ಸಡಗರದಿಂದ ಜರುಗಿತು.

ಶಾಲೆಯ ರಾಷ್ಟ್ರೀಯ ಹಸಿರು ಪಡೆ ಇಕೋ ಕ್ಲಬ್, ರಾಷ್ಟ್ರೀಯ ಸೇವಾ ಯೋಜನಾ (ಎನ್.ಎಸ್.ಎಸ್.) ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ವತಿಯಿಂದ ಶಾಲಾ ವಿದ್ಯಾರ್ಥಿ ಸಂಘ, ಎಸ್.ಡಿ.ಎಂ.ಸಿ. ಹಾಗೂ ಗ್ರಾಮದ ಬಸವೇಶ್ವರ ಹಾಗೂ ದೊಡ್ಡಮ್ಮ ದೇವಾಲಯ ಸಮಿತಿ, ಸುಂಟಿಕೊಪ್ಪ ಜೆ.ಸಿ.ಐ.ಸಂಸ್ಥೆ ಹಾಗೂ ಕುಶಾಲನಗರ ಕಾವೇರಿ ಜೆ.ಸಿ.ಐ.ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ 77ನೇ ಸ್ವಾತಂತ್ರ್ಯೋತ್ಸವ–2023 'ಗೋ ಗ್ರೀನ್' ಅಭಿಯಾನದ ಅಂಗವಾಗಿ ಏರ್ಪಡಿಸಿದ್ದ ಕೆಸರುಗದ್ದೆ ಕ್ರೀಡಾಕೂಟ ಜನರ ಗಮನ ಸೆಳೆಯಿತು.

ಕ್ರೀಡಾಕೂಟದಲ್ಲಿ ಶಾಲಾ ವಿದ್ಯಾರ್ಥಿಗಳು ಕೆಸರುಗದ್ದೆಯಲ್ಲಿ ಮಿಂದೆದ್ದು, ಆಟವಾಡುತ್ತಾ ಕುಣಿದು ಕುಪ್ಪಳಿಸಿದರು. ಕೆಸರುಗದ್ದೆಯಲ್ಲಿ ಮಕ್ಕಳ ಓಟದ ಸ್ಪರ್ಧೆ, ಹಗ್ಗ ಜಗ್ಗಾಟ, ಬಾಯಲ್ಲಿ ಚಮಚದ ಮೇಲೆ ನಿಂಬೆಹಣ್ಣು ಇಟ್ಟು ಓಡುವುದು ಹಾಗೂ ತಲೆಯ ಮೇಲೆ ನೀರಿನ ಬಾಟಲ್ ಅನ್ನು ಇಟ್ಟುಕೊಂಡು ಓಡುವ ಸ್ಪರ್ಧೆ ಸೇರಿದಂತೆ ಇನ್ನಿತರ ಕ್ರೀಡಾ ಸ್ಪರ್ಧೆಗಳಲ್ಲಿ ಮಕ್ಕಳು ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದು, ಗಮನ ಸೆಳೆಯಿತು. ಗದ್ದೆಯಲ್ಲಿ ಕೆಸರು ಮೆತ್ತಿಕೊಂಡು ಹಗ್ಗ ಜಗ್ಗಾಟದಲ್ಲಿ ತೊಡಗಿದ್ದ ವಿದ್ಯಾರ್ಥಿಗಳು ತಮ್ಮ ತಂಡವು ಗೆಲ್ಲಬೇಕೆಂಬ ಹುರುಪಿನಿಂದ ತಮ್ಮ ಬಲವನ್ನು ಪ್ರದರ್ಶಿಸುತ್ತಿದ್ದುದು ಕಂಡು ಬಂತು.

ಕೆಸರುಗದ್ದೆ ಕ್ರೀಡಾಕೂಟದ ಮಹತ್ವದ ಕುರಿತು ಶಾಲಾ ಮುಖ್ಯೋಪಾಧ್ಯಾಯರೂ ಆದ ರಾಷ್ಟ್ರೀಯ ಹಸಿರು ಪಡೆಯ ಇಕೋ ಕ್ಲಬ್‌ನ ಜಿಲ್ಲಾ ಸಂಚಾಲಕ ಟಿ.ಜಿ.ಪ್ರೇಮಕುಮಾರ್ ಮಾಹಿತಿ ನೀಡಿದರು.

ಕ್ರೀಡಾಕೂಟಕ್ಕೆ ಚಾಲನೆ ನೀಡಿದ ಎಸ್.ಡಿ.ಎಂ.ಸಿ. ಅಧ್ಯಕ್ಷ ಎಸ್.ಎನ್.ಪುಟ್ಟಸ್ವಾಮಿ ಮಾತನಾಡಿ, ನಮ್ಮ ಶಾಲಾ ಶಿಕ್ಷಕರ ತಂಡದ ಪ್ರೇರೇಪಣೆ ಹಾಗೂ ಗ್ರಾಮಸ್ಥರ ಸಹಕಾರದಿಂದ ಇಂತಹ ಕ್ರೀಡಾಕೂಟ ಸಂಘಟಿಸುವ ಮೂಲಕ ಮಕ್ಕಳಿಗೆ ಕೃಷಿ ಪಾಠದ ಮಹತ್ವ ತಿಳಿಸುತ್ತಿರುವುದು ಶ್ಲಾಘನೀಯ ಎಂದರು.

ಪ್ರಗತಿಪರ ರೈತ ಕೆ.ಎಸ್.ರಾಜಾಚಾರಿ, ಕುಶಾಲನಗರ ಕಾವೇರಿ ಜೆ.ಸಿ.ಐ.ಸಂಸ್ಥೆಯ ಅಧ್ಯಕ್ಷ ಎಂ.ಜೆ.ರಜನೀಕಾಂತ್ ಮಾತನಾಡಿದರು. ಗದ್ದೆಯಲ್ಲಿ ಮಕ್ಕಳೊಂದಿಗೆ ತೊಡಗಿಸಿಕೊಂಡಿದ್ದ ಜಿಲ್ಲಾ ಗೈಡ್ಸ್ ಸಂಸ್ಥೆಯ ಕ್ಯಾಪ್ಟನ್ ಸುಲೋಚನಾ ಮಾತನಾಡಿ, ಆಧುನಿಕ ಯುಗದಲ್ಲಿ ನಶಿಸುತ್ತಿರುವ ದೇಸಿ ಕ್ರೀಡೆಗಳನ್ನು ಉಳಿಸಿ–ಬೆಳೆಸಬೇಕಾಗಿದೆ ಎಂದರು.

ಕ್ರೀಡಾಕೂಟದಲ್ಲಿ ಕೂಡಿಗೆ ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಕೆ.ಕೆ.ನಾಗರಾಜಶೆಟ್ಟಿ, ಶಿಕ್ಷಕರಾದ ಕೆ.ಗೋಪಾಲಕೃಷ್ಣ, ಬಿ.ಡಿ.ರಮ್ಯ, ಎಸ್.ಎಂ.ಗೀತಾ, ಬಿ.ಎನ್.ಸುಜಾತ, ಅನ್ನಿಲಾ ರೇಖಾ, ಕೃಷಿಕ ಕೆ.ಆರ್ ನಾಗರಾಜು, ಗ್ರಾಮಸ್ಥರಾದ ಯಮುನ, ಗುರು, ಮುರುಳಿ ಇತರರು ಇದ್ದರು. ಕೆಸರು ಗದ್ದೆ ಕ್ರೀಡಾಕೂಟದಲ್ಲಿ ಮಕ್ಕಳಿಗೆ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕಿ ಸಿ.ಎಂ.ಸುಲೋಚನ ಮತ್ತು ಕೂಡಿಗೆ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಸೋಮಶೇಖರ್ ಕ್ರೀಡೆ ನಡೆಸಿಕೊಟ್ಟರು.

ಗದ್ದೆಯಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳು ಕಣ್ಮನ ಸೆಳೆದವು. ಕೆಸರಿನ ಗದ್ದೆಗಳಲ್ಲಿ ಧುಮುಕಿ ಮೈ ಚಳಿ ಬಿಟ್ಟು ಎಲ್ಲರೂ ಉತ್ಸಾಹದಿಂದ ಪಾಲ್ಗೊಂಡಿದ್ದರು. ಓಟದ ಸ್ಪರ್ಧೆಯಲ್ಲಿ ಹಲವರು ಕೆಸರಿನಲ್ಲಿ ಬಿದ್ದರೂ ಎದ್ದು ಮತ್ತೆ ಓಡಿ ಗಮನ ಸೆಳೆದರು. ಜತೆಗೆ ಹಗ್ಗಜಗ್ಗಾಟವಂತೂ ಮೈನವಿರೇಳಿಸುವಂತಿತ್ತು.

ಬೈಕ್–ಸ್ಕೂಟರ್ ನಡುವೆ ಡಿಕ್ಕಿ: ಕೆನರಾ ಬ್ಯಾಂಕ್ ಉದ್ಯೋಗಿ ಸಾವು

ಮತ್ತೊಬ್ಬರಿಗೂ ಗಂಭೀರ ಸ್ವರೂಪದ ಗಾಯ, ಆಸ್ಪತ್ರೆಗೆ ದಾಖಲು





ವಿರಾಜಪೇಟೆ,ಆ.19– ವಿರಾಜಪೇಟೆ–ಅಮ್ಮತ್ತಿ ರಸ್ತೆಯ ಸುಂಕದಕಟ್ಟೆ ಬಳಿ ಸ್ಕೂಟರ್ ಮತ್ತು ಬೈಕ್ ನಡುವೆ ಸಂಭವಿಸಿದ ಡಿಕ್ಕಿಯಿಂದ ಬ್ಯಾಂಕಿನ ಮಹಿಳಾ ಉದ್ಯೋಗಿಯೊಬ್ಬರು ಮೃತಪಟ್ಟ ಘಟನೆ ನಡೆದಿದೆ. ಅಮ್ಮತ್ತಿ ಕೆನರಾ ಬ್ಯಾಂಕ್ ಉದ್ಯೋಗಿ ಅಮೃತ(24) ಮೃತಪಟ್ಟ ದುರ್ದೈವಿ.

ಶುಕ್ರವಾರ ಸಂಜೆ 7.30ರ ವೇಳೆ ವಿರಾಜಪೇಟೆಯಿಂದ ಅಮ್ಮತ್ತಿ ರಸ್ತೆಯಲ್ಲಿ ಬಿಳುಗುಂದಕ್ಕೆ ಬೈಕ್‌ನಲ್ಲಿ (ಕೆಎ.12, ವಿ.12, ವಿ–8284) ತೆರಳುತ್ತಿದ್ದ ವಿಠಲ(24), ಅಮ್ಮತ್ತಿಯಿಂದ ವಿರಾಜಪೇಟೆಗೆ ಬರುತ್ತಿದ್ದ ಸ್ಕೂಟರ್ (ಕೆಎ.12, ವಿ–7396)ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರ ತಲೆಗೂ ಗಂಭೀರ ಸ್ವರೂಪದ ಗಾಯಗಳಾದವು ಎನ್ನಲಾಗಿದೆ. ಇಬ್ಬರು ಗಾಯಾಳುಗಳಿಗೆ ವಿರಾಜಪೇಟೆ ಸರಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅಮೃತ ನಿಧನರಾಗಿದ್ದಾರೆ.

ಕಳೆದ ಒಂದು ವರ್ಷದ ಹಿಂದೆ ಅಮ್ಮತ್ತಿಯ ಕೆನರಾ ಬ್ಯಾಂಕ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಮೃತ ವಿರಾಜಪೇಟೆ ನಗರದ ಖಾಸಗಿ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದರು. ಘಟನೆ ಕುರಿತು ವಿರಾಜಪೇಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಆದಿಶಕ್ತಿ ಅಂತರ ಘಟ್ಟಮ್ಮ ದೇವಾಲಯದಲ್ಲಿ ಕಳವು



ಮಡಿಕೇರಿ,ಆ.19– ಕುಶಾಲನಗರದ ಆದಿಶಕ್ತಿ ಅಂತರಘಟ್ಟಮ್ಮ ದೇವಾಲಯದಲ್ಲಿ ಕಳ್ಳತನ ನಡೆದಿದೆ. ನಗರದ ಬ್ಲೂಮೂನ್ ಪೆಟ್ರೋಲ್ ಬಂಕ್ ಮುಂಭಾಗದ ಆಧಿಶಕ್ತಿ ಅಂತರಘಟ್ಟಮ್ಮ ದೇವಾಲಯದ ಗರ್ಭಗುಡಿ, ಕಾಣಿಕೆ ಹುಂಡಿಯನ್ನು ಒಡೆದು ಹಣ ಕಳವು ಮಾಡಲಾಗಿದ್ದು, ಕುಶಾಲನಗರ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಳ್ಳತನ ಕೃತ್ಯದ ಬಳಿಕ ದೇವಾಲಯದ ಒಳಗಿದ್ದ ಸಿ.ಸಿ. ಕ್ಯಾಮೆರಾದ ಡಿ.ವಿ.ಆರ್ ಅನ್ನು ಕಳ್ಳರು ಹೊತ್ತೊಯ್ದಿದ್ದಾರೆ. ದೇವಾಲಯ ಕಚೇರಿ, ಗರ್ಭಗುಡಿ ಒಳಗಿದ್ದ 4 ಚಿನ್ನದ ತಾಳಿ, ಹುಂಡಿ ಹಣ ಮತ್ತು 100 ಗ್ರಾಂ ಬೆಳ್ಳಿಯ ಮುಖವಾಡವನ್ನು ಕಳವು ಮಾಡಲಾಗಿದ್ದು, ಈ ಕುರಿತು ದೇವಾಲಯ ಆಡಳಿತ ಮಂಡಳಿ ದೂರು ದಾಖಲಿಸಿದೆ.

ಮೊಬೈಲ್ ಇರುವುದರಿಂದ ಎಲ್ಲರೂ ಛಾಯಾಗ್ರಾಹಕರಾಗುತ್ತಿದ್ದಾರೆ...

ವಿಶ್ವ ಛಾಯಾಗ್ರಹಣ ದಿನಾಚರಣೆಯಲ್ಲಿ ಶಾಸಕ ಡಾ.ಮಂಥರ್ ಗೌಡ ಅಭಿಪ್ರಾಯ



ಮಡಿಕೇರಿ,ಆ.19– ಆಧುನೀಕರಣದೊಂದಿಗೆ ಬದಲಾಗುತ್ತಿರುವ ಕಾಲಘಟ್ಟದಲ್ಲಿ ತಾಂತ್ರಿಕತೆಗಳಿಗೆ ಅನುಗುಣವಾಗಿ ಛಾಯಾಗ್ರಾಹಕರು ಉನ್ನತೀಕರಣವನ್ನು ಹೊಂದಬೇಕೆಂದು ಮಡಿಕೇರಿ ಶಾಸಕ ಡಾ.ಮಂಥರ್ ಗೌಡ ಅಭಿಪ್ರಾಯ ವ್ಯಕ್ತಪಡಿಸಿದರು.

ಕೊಡಗು ಪತ್ರಕರ್ತರ ಸಂಘ ಹಾಗೂ ಕೊಡಗು ಜಿಲ್ಲಾ ಛಾಯಾಗ್ರಾಹಕರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಮಂಜಿನ ನಗರಿ ಛಾಯಾಗ್ರಾಹಕರ ಸಂಘದ ಆಶ್ರಯದಲ್ಲಿ ನಗರದ ಲಯನ್ಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ 184ನೇ 'ವಿಶ್ವ ಛಾಯಾಗ್ರಹಣ ದಿನ'ವನ್ನು ಉದ್ಘಾಟಿಸಿ ಅವರು ಮಾತನಾಡಿ, ಪ್ರತಿಯೊಬ್ಬರ ಕೈಯಲ್ಲಿ ಇಂದು ಮೊಬೈಲ್‌ಗಳು ಬಂದಿರುವುದರಿಂದ ಎಲ್ಲರೂ ಛಾಯಾಗ್ರಾಹಕರಾಗುತ್ತಿರುವುದಲ್ಲದೆ, ಸಾಮಾಜಿಕ ಜಾಲತಾಣಗಳ ಬರವಣಿಗೆಗಳ ಮೂಲಕ ವರದಿಗಾರರೂ ಆಗುತ್ತಿದ್ದಾರೆ ಎಂದರು.

ದತ್ತಿ ಪ್ರಶಸ್ತಿಯ ಘೋಷಣೆ: ಜಿಲ್ಲಾ ಛಾಯಾಗ್ರಾಹಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ಆರ್.ವಸಂತ್ ಅವರ ಮನವಿಯ ಮೇರೆಗೆ ಇದೇ ಸಂದರ್ಭದಲ್ಲಿ ಶಾಸಕ ಡಾ.ಮಂಥರ್‌ಗೌಡ ಅವರು, ತಮ್ಮ ಅಜ್ಜಿ ಸಾಕಮ್ಮ ಅವರ ಸ್ಮರಣಾರ್ಥ ಛಾಯಾಗ್ರಾಹಕರ ಸಂಘ ಮತ್ತು ಕೊಡಗು ಪತ್ರಕರ್ತರ ಸಂಘಕ್ಕೆ ದತ್ತಿ ಪ್ರಶಸ್ತಿ ನೀಡುವುದಾಗಿ ಘೋಷಿಸಿದರು. ಕೊಡಗು ಪತ್ರಕರ್ತರ ಸಂಘದ ಸಲಹೆಗಾರರು ಹಾಗೂ ಶಕ್ತಿ ಪತ್ರಿಕೆಯ ಸಲಹಾ ಸಂಪಾದಕ ಬಿ.ಜಿ.ಅನಂತಶಯನ ಅವರು ತಮ್ಮ ದಿಕ್ಸೂಚಿ ಭಾಷಣದಲ್ಲಿ, ಉತ್ತಮ ಛಾಯಾಚಿತ್ರಗಳು ಚರಿತ್ರೆಯನ್ನು ಉಳಿಸಿ ಬೆಳೆಸಬಲ್ಲವೆಂದು ಅಭಿಪ್ರಾಯಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಲಯನ್ಸ್ ಕ್ಲಬ್ ವಲಯಾಧ್ಯಕ್ಷ ಅಂಬೇಕಲ್ ನವೀನ್ ಕುಶಾಲಪ್ಪ, ಜಿಲ್ಲಾ ಛಾಯಾಗ್ರಾಹಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ಆರ್.ವಸಂತ್, ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಎ.ಮುರಳೀಧರ್ ಮಾತನಾಡಿದರು.

ಜಿಲ್ಲಾ ಛಾಯಾಗ್ರಾಹಕರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಸಮಿತಿ ಸದಸ್ಯ ದೀಪಕ್, ಮಂಜಿನ ನಗರಿ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಪ್ರದೀಪ್ ಉಪಸ್ಥಿತರಿದ್ದರು. ವಿಶ್ವ ಛಾಯಾಗ್ರಹಣ ದಿನಾಚರಣೆಯಲ್ಲಿ ಗಣ್ಯರಿಗೆ ಸನ್ಮಾನ, ಪ್ರಶಸ್ತಿ ಪ್ರದಾನ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ನಡೆದವು.

ಪ್ರಶಸ್ತಿ ಪುರಸ್ಕಾರ: ಕೊಡಗು ಪತ್ರಕರ್ತರ ಸಂಘದಿಂದ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್‌ಗೌಡ, ಮಾಧ್ಯಮ ಅಕಾಡೆಮಿ ಪ್ರಶಸ್ತಿ ವಿಜೇತರಾದ ಶಕ್ತಿ ಪತ್ರಿಕೆಯ ಸಲಹಾ ಸಂಪಾದಕ ಬಿ.ಜಿ.ಅನಂತಶಯನ, ಪತ್ರಿಕಾ ಛಾಯಾಗ್ರಹಣ ಕ್ಷೇತ್ರದಲ್ಲಿ ಸುದೀರ್ಘ ಸೇವೆ ಸಲ್ಲಿಸುತ್ತಿರುವ ವಿಶ್ವ ಕುಮಾರ್ ಗುಡ್ಡೆಮನೆ, ಪೊನ್ನಂಪೇಟೆ ಶೈಲೇಂದ್ರ ಮತ್ತು ಎಸ್.ಆರ್.ವಸಂತ್ ಅವರುಗಳನ್ನು ಹಾಗೂ ಛಾಯಾಗ್ರಾಹಕರ ಸಂಘದಿಂದ ಹಿರಿಯ ಛಾಯಾಗ್ರಾಹಕರಾದ ಸುರೇಶ್ ಮಾವಡ್ಕರ್ ಮತ್ತು ನಾಗೇಂದ್ರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಗೌರವ ಸಲಹೆಗಾರರಾದ ಬಿ.ಜಿ.ಅನಂತಶಯನ ಅವರು ತಮ್ಮ ಪುತ್ರಿ ಡಾ. ಅನುಶ್ರೀ ಅವರ ಹ್ಯಾಪಿ ಟೀತ್ ಕ್ಲಿನಿಕ್ ಹೆಸರಲ್ಲಿ ಸ್ಥಾಪಿಸಿರುವ ಮಾನವೀಯ ಮೌಲ್ಯಗಳ ಕುರಿತಾದ ಅತ್ಯುತ್ತಮ ಫೋಟೋಗ್ರಫಿ ಸ್ಪರ್ಧೆಯ ಪ್ರಶಸ್ತಿಯನ್ನು ಅನಿಲ್ ಎಚ್.ಟಿ.ಅವರಿಗೆ ನೀಡಿ ಗೌರವಿಸಲಾಯಿತು.

ಸಂಘದಿಂದ ಕೊಡಮಾಡುವ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಅತ್ಯುತ್ತಮ ಫೋಟೋಗ್ರಫಿ ಸ್ಪರ್ಧೆಯಲ್ಲಿ ಸಂಯುಕ್ತಕರ್ನಾಟಕದ ಮೂರ್ನಾಡು ವರದಿಗಾರ ಟಿ.ಸಿ.ನಾಗರಾಜ್ ಅವರ ಛಾಯಾಚಿತ್ರಕ್ಕೆ ಪ್ರಥಮ, ವಿಶ್ವವಾಣಿ ಜಿಲ್ಲಾ ವರದಿಗಾರ ಅನಿಲ್ ಎಚ್.ಟಿ. ಅವರ ಛಾಯಾಚಿತ್ರಕ್ಕೆ ದ್ವಿತೀಯ ಬಹುಮಾನವನ್ನು ಹಾಗೂ ವಿಡಿಯೋಗ್ರಾಫಿಯಲ್ಲಿ ಪ್ರಜಾ ಟಿವಿ ಕ್ಯಾಮರಾಮೆನ್ ವಿಜಯ್ ಕಾಟಕೇರಿಗೆ ಪ್ರಥಮ ಹಾಗೂ ಮೈಸೂರು ಮಿತ್ರ ಜಿಲ್ಲಾ ವರದಿಗಾರ ಪ್ರಸಾದ್ ಸಂಪಿಗೆಕಟ್ಟೆ ಅವರ 'ಕೋಟೆ ಅಬ್ಬಿ ವೈಭವ' ದ್ವಿತೀಯ ಬಹುಮಾನವನ್ನು ನೀಡಿ ಗೌರವಿಸಲಾಯಿತು.

ಮಗ್ಗುಲ ಗ್ರಾಮದಲ್ಲಿ ಶ್ರೀ ಶನೇಶ್ವರಸ್ವಾಮಿ ಪೂಜೆ



ವಿರಾಜಪೇಟೆ, ಆ.19– ವಿರಾಜಪೇಟೆ ಸಮಿಪದ ಮಗ್ಗುಲ ಗ್ರಾಮದಲ್ಲಿರುವ ಶ್ರೀ ಶನೇಶ್ವರ ಮತ್ತು ನವಗ್ರಹ ದೇವಾಲಯದಲ್ಲಿ ಶ್ರಾವಣ ಮಾಸದ ಮೊದಲ ಶನಿವಾರದ ಪೂಜಾ ಕಾರ್ಯ ಶ್ರದ್ಧಾ ಭಕ್ತಿಯಿಂದ ನಡೆಯಿತು.

ಶ್ರಾವಣ ಮಾಸದ ಅಂಗವಾಗಿ ಮೊದಲ ಶನಿವಾರ ಬೆಳಗ್ಗೆ 7 ಗಂಟೆಯಿಂದ ದೇವರಿಗೆ ಗಣಪತಿ ಹೋಮದ ಬಳಿಕ ಶನೇಶ್ವರ ಮತ್ತು ನವಗ್ರಹ ದೇವರಿಗೆ ವಿಶೇಷ ಪೂಜೆಗಳು ನಡೆದು ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ ನಂತರ ಅನ್ನ ಸಂತರ್ಪಣೆ ನಡೆಯಿತು. ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಿಂದಲೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಮುಂದಿನ ಮೂರು ಶನಿವಾರಗಳು ಶ್ರಾವಣ ಮಾಸದ ವಿಶೇಷ ಪೂಜೆಗಳು ನಡೆಯಲಿವೆ.

ಮಣಿಪುರ ಪ್ರಕರಣ ಖಂಡಿಸಿ ಡಿಎಸ್‌ಎಸ್ ಪ್ರತಿಭಟನೆ



ಚಾಮರಾಜನಗರ, ಆ.19– ಮಣಿಪುರದಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ, ಎಐಸಿಸಿ ಅಧ್ಯಕ್ಷ ಡಾ.ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಅವಹೇಳನಕಾರಿ ಹೇಳಿಕೆ ಹಾಗೂ ಚಿತ್ರನಟ ಉಪೇಂದ್ರ ಅಸಂವಿಧಾನಿಕ ಹೇಳಿಕೆ ಖಂಡಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಡಿ.ಜಿ.ಸಾಗರ್ ಬಣದಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ದಸಂಸ ಜಿಲ್ಲಾ ಸಮಿತಿ ಸಂಚಾಲಕ ಸಿ.ಎಂ.ಶಿವಣ್ಣ ನೇತೃತ್ವದಲ್ಲಿ ಜಿಲ್ಲಾಡಳಿತ ಭವನದ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಮಣಿಪುರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಜಿಲ್ಲಾಧಿಕಾರಿಗಳ ಸಹಾಯಕ ಅಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಸಿ.ಎಂ.ಶಿವಣ್ಣ ಮಾತನಾಡಿ, ಮಣಿಪುರದಲ್ಲಿ ಇಬ್ಬರು ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿರುವುದು ಇಡೀ ಸಮಾಜವೇ ತಲೆ ತಗ್ಗಿಸುವ ಘಟನೆ. ಇದನ್ನು ತಡೆಯುವಲ್ಲಿ ಮಣಿಪುರ ಬಿಜೆಪಿ ಸರ್ಕಾರ, ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದರು.

ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರ ಉಲ್ಬಣಗೊಂಡಿರುವ ನಡುವೆಯೇ ಗಲಭೆ ಸಂತ್ರಸ್ತರಿಗೆ ಪರಿಹಾರ ಮತ್ತು ಪುನರ್ವಸತಿ ಮೇಲ್ವಿಚಾರಣೆಗೆ ಹೈಕೋರ್ಟ್ ಮೂವರು ಮಹಿಳಾ ನ್ಯಾಯಮೂರ್ತಿಗಳ ಸಮಿತಿ ರಚನೆ ಮಾಡಿರುವುದನ್ನು ಸಮಿತಿ ಸ್ವಾಗತಿಸುತ್ತದೆ. ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ಬೆತ್ತಲೆ ಮೆರವಣಿಗೆ, ಗುಂಪು ಹತ್ಯೆಯನ್ನು ಸಮಿತಿ ತೀವ್ರವಾಗಿ ಖಂಡಿಸುತ್ತದೆ. ಸಂತ್ರಸ್ತ ಮಹಿಳೆಯರಿಗೆ ಸೂಕ್ತ ರಕ್ಷಣೆ ನೀಡಿ, ಆರೋಪಿಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಎಐಸಿಸಿ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಖರ್ಗೆ ಮತ್ತು ಕಲ್ಯಾಣ ಕರ್ನಾಟಕ ಜನತೆಯ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಮಾಜಿ ಸಚಿವ ಆರಗ ಜ್ಞಾನೇಂದ್ರ ಹಾಗೂ ಅಸಂವಿಧಾನಿಕ ಹೇಳಿಕೆ ನೀಡಿರುವ ಚಿತ್ರನಟ ಉಪೇಂದ್ರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ದಸಂಸ ಜಿಲ್ಲಾ ಸಂಚಾಲಕ ಕೆ.ಎಂ.ನಾಗರಾಜು, ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ್, ಜಿಲ್ಲಾ ಖಜಾಂಚಿ ರವಿಕುಮಾರ್, ಮಂಜೇಶ್, ಆಟೋ ಉಮೇಶ್, ಮಹದೇವ, ಶಿವು, ಯ.ಮಹದೇವಯ್ಯ, ನಾಗರಾಜು, ಮಲ್ಲಿಕಾರ್ಜುನ್, ರೇವಣ್ಣ, ಕೃಷ್ಣ, ರಂಗಸ್ವಾಮಿ ಇತರರಿದ್ದರು.

ಇಂದು ಸಂವಿಧಾನ ಉಳಿವಿಗಾಗಿ ಭೀಮ ಸಂಕಲ್ಪ ಸಮಾವೇಶ

ಚಾಮರಾಜನಗರ, ಆ.19– ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆ.20ರಂದು ಸಂವಿಧಾನ ಉಳಿವಿಗಾಗಿ ಭೀಮ ಸಂಕಲ್ಪ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಕೆ.ಎಂ.ನಾಗರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಪ್ರತಿ ಮನೆ ಮನೆಗೂ ಸಂವಿಧಾನದ ಮಹತ್ವ ತಿಳಿಸುವ ಈ ಸಮಾವೇಶ ಆಯೋಜಿಸಲಾಗಿದೆ ಎಂದರು.

ಬೋಧಿರತ್ನ ಬಂತೇಜಿ, ಜ್ಞಾನಪ್ರಕಾಶ್ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ಸಚಿವರಾದ ಹೆಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ, ಕೆ.ವೆಂಕಟೇಶ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಗಣೇಶ್ ಪ್ರಸಾದ್, ದರ್ಶನ್ ಧ್ರುವನಾರಾಯಣ್, ಡಾ.ಲೀಲಾ ಸಂಪಿಗೆ, ಸಿ.ಎಸ್.ದ್ವಾರಕನಾಥ್, ಡಾ.ತಿಮ್ಮಯ್ಯ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಿ.ಕೆ.ಮಂಜುನಾಥ್, ಸಿ.ಎಂ.ಶಿವಣ್ಣ, ಸಿದ್ದರಾಜು, ಸುಭಾಷ್ ಮಾಡ್ರಳ್ಳಿ, ನಾಗಣ್ಣ, ಕೃಷ್ಣಮೂರ್ತಿ ಇನ್ನಿತರರಿದ್ದರು.

ಸಮಾವೇಶದಲ್ಲಿ ಭಾಗವಹಿಸಲು ಹೆಚ್‌ಸಿಎಂಗೆ ನೈತಿಕತೆ ಇಲ್ಲ

ಚಾಮರಾಜನಗರ, ಆ.19– ನಗರದಲ್ಲಿ ಭಾನುವಾರ ನಡೆಯುವ ಭೀಮ ಸಂಕಲ್ಪ ಸಮಾವೇಶದಲ್ಲಿ ಭಾಗವಹಿಸಲು ಸಚಿವ ಹೆಚ್.ಸಿ.ಮಹದೇವಪ್ಪ ಅವರಿಗೆ ಯಾವುದೇ ನೈತಿಕತೆ ಇಲ್ಲ ಎಂದು ಬಿಜೆಪಿ ಎಸ್.ಸಿ ಮೋರ್ಚಾ ಜಿಲ್ಲಾ ಅಧ್ಯಕ್ಷ ಮೂಡ್ನಾಕೂಡು ಪ್ರಕಾಶ್ ದೂರಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಲಿತರಿಗೆ ಮೀಸಲಿಟ್ಟ ಹಣವನ್ನು ದುರ್ಬಳಕೆ ಮಾಡಿಕೊಂಡಿರುವ ಸಚಿವರಿಗೆ ಭೀಮ ಸಂಕಲ್ಪ ಸಮಾವೇಶದಲ್ಲಿ ಪಾಲ್ಗೊಳ್ಳುವ ನೈತಿಕತೆ ಇಲ್ಲ ಎಂದರು.

ಕಾರ್ಯಕ್ರಮಕ್ಕೆ ದಲಿತ ಹಿರಿಯ ನಾಯಕ, ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಆಹ್ವಾನಿಸಿಲ್ಲ. ಇದರಲ್ಲಿ ಸಚಿವ ಹೆಚ್.ಸಿ.ಮಹದೇವಪ್ಪನವರ ಪಾತ್ರವಿದೆ. ಜಿಲ್ಲೆಯ ಹಲವು ದಲಿತ ನಾಯಕರನ್ನೂ ಕಾರ್ಯಕ್ರಮಕ್ಕೆ ಆಹ್ವಾನಿಸಿಲ್ಲ. ಇದರ ಉದ್ದೇಶವೇನು ಎಂದು ಅವರು ಪ್ರಶ್ನಿಸಿದರು.

ಕೆಲವು ದಲಿತ ಸಂಘಟನೆಗಳು ಕಾಂಗ್ರೆಸ್ ಭಾಗವಾಗಿವೆ. ಸಮುದಾಯವನ್ನು ಒಡೆಯುವುದನ್ನು ನಿಲ್ಲಿಸಿ, ಒಗ್ಗೂಡಿಸಲು ಮುಂದಾಗಬೇಕು. ಭೀಮ ಸಂಕಲ್ಪ ಸಮಾವೇಶ ಹೆಚ್.ಸಿ.ಮಹದೇವಪ್ಪ ಹಾಗೂ ಅವರ ಮಗನಿಗಾಗಿ ನಡೆಯುತ್ತಿದೆ. ಇದು ದಲಿತರ ಕಾರ್ಯಕ್ರಮವೋ ಅಥವಾ ಕಾಂಗ್ರೆಸ್ ಕಾರ್ಯಕ್ರಮವೋ ಎಂಬುದನ್ನು ಸಂಘಟಕರು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ಚಾ.ನಗರ ತಾಲೂಕು ಪತ್ರಿಕಾ ಪ್ರತಿನಿಧಿಗಳ ಸಂಘ ಅಸ್ತಿತ್ವಕ್ಕೆ



ಚಾಮರಾಜನಗರ, ಆ.19– ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಶನಿವಾರ ಚಾಮರಾಜನಗರ ತಾಲೂಕು ಪತ್ರಿಕಾ ಪ್ರತಿನಿಧಿಗಳ ಸಂಘವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಪತ್ರಿಕಾ ಪ್ರತಿನಿಧಿಗಳ ಸಂಘ ಅಸ್ತಿತ್ವಕ್ಕೆ ಬಂದಿರುವುದು ಉತ್ತಮ ಬೆಳವಣಿಗೆ. ಎಲ್ಲರೂ ಒಗ್ಗಟ್ಟಿನಿಂದ ಸರ್ಕಾರದ ಸೌಲಭ್ಯ ಪಡೆದುಕೊಳ್ಳಬೇಕು ಎಂದರು. ಇದೇ ವೇಳೆ ಶಾಸಕರು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದ ಹೆಚ್ಚುವರಿ ಸಭಾಂಗಣ ನಿರ್ಮಾಣಕ್ಕೆ ಶಾಸಕರ ನಿಧಿಯಿಂದ 5 ಲಕ್ಷ ರೂ. ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು.

ಪತ್ರಿಕಾ ಪ್ರತಿನಿಧಿಗಳಿಗೆ ಗುರುತಿನ ಚೀಟಿ ವಿತರಿಸಿ ಮಾತನಾಡಿದ ಶಾಸಕ ಎ.ಆರ್.ಕೃಷ್ಣಮೂರ್ತಿ, ಪತ್ರಿಕೆಗಳ ಅಳಿವು, ಉಳಿವಿನ ಜವಾಬ್ದಾರಿ ಪತ್ರಿಕಾ ವಿತರಕರ ಮೇಲಿದ್ದು, ಅವರ ಬದುಕನ್ನು ಹಸನಾಗಿಸುವುದು ಸಂಘದ ಧ್ಯೇಯೋದ್ದೇಶವಾಗಬೇಕು ಎಂದರು.

ಅಸಂಘಟಿತ ವಲಯದ ಕಾರ್ಮಿಕರಿಗೆ ಕಾರ್ಮಿಕ ಇಲಾಖೆಯಿಂದ ಸಿಗಬೇಕಾದ ಇಎಸ್‌ಐ, ಪಿಎಫ್, ಕನಿಷ್ಠ ವೇತನ ಸೌಲಭ್ಯ ದೊರಕಿಸಿಕೊಡುವ ಸಂಬಂಧ ತಮ್ಮಗಳ ಪರ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಜಿಲ್ಲಾ ಕಾರ್ಮಿಕಾಧಿಕಾರಿ ಡಾ.ಎಂ.ಸವಿತಾ ಮಾತನಾಡಿ, ಪತ್ರಿಕಾ ವಿತರಕರು ಇ–ಶ್ರಮ್ ಕಾರ್ಡ್ ಪಡೆದುಕೊಳ್ಳಬೇಕು. ಇದಕ್ಕೆ ಅಗತ್ಯ ಅನುಕೂಲವನ್ನು ಇಲಾಖೆಯಿಂದ ಮಾಡಿಕೊಡಲಾಗುವುದು. ಈ ಕಾರ್ಡ್ ಮಾಡಿಸಿದ ವ್ಯಕ್ತಿ ಮೃತಪಟ್ಟಲ್ಲಿ ಅವರ ಕುಟುಂಬಕ್ಕೆ 5 ಲಕ್ಷ ನೆರವು ಸಿಗಲಿದೆ ಎಂದರು.

ಪತ್ರಕರ್ತರಿಗೆ ಕನಿಷ್ಠ ವೇತನ ಸಿಗಬೇಕು ಎಂಬ ನಿಟ್ಟಿನಲ್ಲಿ ರಾಜ್ಯ ಸರ್ಕಾರ 2011 ರಲ್ಲಿ ಮಜೀದಿಯಾ ಆಯೋಗ ಜಾರಿ ಮಾಡಿದ್ದು, ಆಯೋಗದ ಶಿಫಾರಸ್ಸುಗಳು ಹೇಗೆ ಅನುಷ್ಠಾನವಾಗಿವೆ ಎಂಬುದನ್ನು ಪರಿಶೀಲಿಸಿ ಮುಂದಿನ ಕ್ರಮ ವಹಿಸಲಾಗುವುದು ಎಂದರು.

ಇದೇ ವೇಳೆ 10 ಮಂದಿ ಪತ್ರಿಕಾ ಪ್ರತಿನಿಧಿಗಳಿಗೆ ಸಾಂಕೇತಿಕವಾಗಿ ಗುರುತಿನ ಚೀಟಿ ವಿತರಿಸಲಾಯಿತು. ಸಂಘದ ಅಧ್ಯಕ್ಷ ದೊಡ್ಡರಾಯಪೇಟೆ ಸಿ.ಪುರುಷೋತ್ತಮ್ ಅಧ್ಯಕ್ಷತೆ ವಹಿಸಿದ್ದರು. ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಗೌಡಳ್ಳಿ ಮಹೇಶ್, ಸಂಘದ ಪ್ರಧಾನ ಕಾರ್ಯದರ್ಶಿ ಅಕ್ಷಯ್ ಸೇರಿದಂತೆ ಪದಾಧಿಕಾರಿಗಳು, ನಿರ್ದೇಶಕರು ಹಾಜರಿದ್ದರು. ಸಂಘದ ಪದಾಧಿಕಾರಿ ಪ್ರಕಾಶ್ ಬೆಲ್ಲದ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಗೌರವಾಧ್ಯಕ್ಷ ಎಚ್.ಎಸ್.ಚಂದ್ರಶೇಖರ್ ನಿರೂಪಿಸಿದರು. ಪದಾಧಿಕಾರಿ ಸಿದ್ದಲಿಂಗಸ್ವಾಮಿ ಸ್ವಾಗತ ಕೋರಿದರು.

ಶಿಕ್ಷಕರು ನಿರಂತರ ಅಧ್ಯಯನಶೀಲರಾಗಿ: ಬಿಇಓ



ಯಳಂದೂರು, ಆ.19– ಶಿಕ್ಷಕರು ನಿರಂತರ ಅಧ್ಯಯನಶೀಲರಾದರೆ ಮಾತ್ರ ಪರಿಣಾಮಕಾರಿ ಬೋಧನೆ ಸಾಧ್ಯ. ಇದರಿಂದ ಮಕ್ಕಳಿಗೆ ಗುಣಮಟ್ಟದ ಜೊತೆಗೆ ಉನ್ನತ ಶಿಕ್ಷಣಕ್ಕೆ ಒತ್ತು ನೀಡಬಹುದಾಗಿದೆ. ಆಗ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಣ್ಣೇಗೌಡ ಅಭಿಪ್ರಾಯಪಟ್ಟರು.

ನಗರದ ಗುಂಡ್ಲುಪೇಟೆ ವೃತ್ತದಲ್ಲಿರುವ ಕ್ಷೇತ್ರ ಸಂಪನ್ಮೂಲ ಕೇಂದ್ರದಲ್ಲಿ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಥಮ ವರ್ಷದ ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಕ್ಷೇತ್ರ ಸಂಪನ್ಮೂಲ ಕೇಂದ್ರ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಭೇಟಿ ಹಾಗೂ ಮಾಹಿತಿ ಸಂಗ್ರಹಣೆಯ 2 ದಿನಗಳ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಯುವ ಜನತೆಯಲ್ಲಿ ಸ್ಪರ್ಧಾತ್ಮಕ ಪ್ರವೃತ್ತಿ ಹೆಚ್ಚಿದೆ. ಉದ್ಯೋಗಾವಕಾಶಗಳಿಗಾಗಿ ಪ್ರತಿ ರಂಗದಲ್ಲಿಯೂ ಸ್ಪರ್ಧೆ ಏರ್ಪಡುತ್ತಿದೆ. ಇದಕ್ಕೆ ಶಿಕ್ಷಣ ಕ್ಷೇತ್ರವು ಹೊರತಲ್ಲ. ಆದ್ದರಿಂದ ಶಿಕ್ಷಕರು ನಿರಂತರ ಅಧ್ಯಯನಶೀಲರಾದರೆ ಮಾತ್ರ ಪರಿಣಾಮಕಾರಿಯಾಗಿ ಬೋಧನೆ ಮಾಡಬಹುದು. ಇದರಿಂದ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಬಹುದಾಗಿದೆ. ಮಕ್ಕಳಲ್ಲಿರುವ ಪ್ರತಿಭೆ ಹೆಕ್ಕಿ ತೆಗೆಯುವ ಜವಾಬ್ದಾರಿ ಶಿಕ್ಷಕನ ಮೇಲಿರುತ್ತದೆ. ಆದ್ದರಿಂದ ಶಿಕ್ಷಕರು ಹಾಗೂ ಮುಂದೆ ಶಿಕ್ಷಕರಾಗಲು ಹೊರಟಿರುವ ಪ್ರಶಿಕ್ಷಣಾರ್ಥಿಗಳಾದ ತಾವು ಪರಿಣಾಮಕಾರಿಯಾದ ಅಧ್ಯಯನ ನಡೆಸಿ, ಉತ್ತಮ ಭವಿಷ್ಯ ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಮುಂದುವರೆಯಬೇಕೆಂದು ಕರೆ ನೀಡಿದರು.

ಕ್ಷೇತ್ರ ಸಮನ್ವಯಾಧಿಕಾರಿ ರಾಜೀವ್ ಮಾತನಾಡಿ, ಸಮಾಜದಲ್ಲಿ ಶಿಕ್ಷಕರ ಜವಾಬ್ದಾರಿ ಹೆಚ್ಚಿದ್ದು, ಶಿಕ್ಷಕನೋರ್ವ ತಪ್ಪು ಮಾಡಿದರೆ, ಇಡೀ ಒಂದು ಪೀಳಿಗೆಯನ್ನೇ ಸಂಕಷ್ಟಕ್ಕೆ ದೂಡಿದಂತಾಗುತ್ತದೆ. ಶಿಕ್ಷಕರು ಜವಾಬ್ದಾರಿಯುತ ಸ್ಥಾನದಲ್ಲಿದ್ದು, ಅವರು ಸಮಾಜದಲ್ಲಿರುವ ಅಂಕು–ಡೊಂಕುಗಳನ್ನು ತಿದ್ದಿ ಸಮಾಜವನ್ನು ಸರಿದಾರಿಗೆ ತರುವ ನಿಟ್ಟಿನಲ್ಲಿ ಬಹುಮುಖ್ಯ ಪಾತ್ರ ವಹಿಸಲಿದ್ದಾರೆ. ಭವಿಷ್ಯ ರೂಪಿಸುವ ಗುರುವನ್ನು ವೈದಿಕರು ಬ್ರಹ್ಮನಿಗೆ ಹೋಲಿಸಿ, ಅವನಿಗೆ ಉನ್ನತ ಸ್ಥಾನ ನೀಡಿದ್ದಾರೆ. ಆದ್ದರಿಂದ ಶಿಕ್ಷಕರು ತಮ್ಮ ಜವಾಬ್ದಾರಿಯನ್ನರಿತು ಕೆಲಸ ನಿರ್ವಹಿಸಬೇಕೆಂದು ಕಿವಿಮಾತು ಹೇಳಿದರು.

ಈ ಸಂದರ್ಭ ಬಿಆರ್‌ಪಿಗಳಾದ ಮಹದೇವ್, ಜೇಮ್ಸ್ ಸುನೀಲ್, ರೆಬೆಲ್ಲೋ, ಶಿಕ್ಷಣ ಸಂಯೋಜಕ ಕುಮಾರ್ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಕೆ.ಸಿ.ಬಸವಣ್ಣ, ಉಪನ್ಯಾಸಕರಾದ ಯೋಗೀಶ್, ಎಸ್.ಎನ್.ರಾಜು ಸೇರಿದಂತೆ ಇತರರಿದ್ದರು.

ಆಕಸ್ಮಿಕ ಬೆಂಕಿ: ಕಬ್ಬು ನಾಶ



ಬೇಗೂರು, ಆ.19– ಆಕಸ್ಮಿಕ ಬೆಂಕಿಗೆ ಕಬ್ಬಿನ ಬೆಳೆ ನಾಶವಾಗಿರುವ ಘಟನೆ ಇಲ್ಲಿಗೆ ಸಮೀಪದ ರಂಗೂಪುರ ಗ್ರಾಮದಲ್ಲಿ ಗುರುವಾರ ರಾತ್ರಿ ನಡೆದಿದೆ.

ಗ್ರಾಮದ ನಟರಾಜು ಅವರಿಗೆ ಸೇರಿದ ಕಬ್ಬಿನ ಬೆಳೆ ನಾಶವಾಗಿರುವುದು. ಇವರು ಸುಮಾರು ಒಂದೂವರೆ ಎಕರೆ ಜಮೀನಿನಲ್ಲಿ ಕಬ್ಬು ಬೆಳೆದಿದ್ದರು. ಗುರುವಾರ ರಾತ್ರಿ ಆಕಸ್ಮಿಕವಾಗಿ ಬೆಂಕಿ ಬಿದ್ದು ಸಂಪೂರ್ಣ ಭಸ್ಮವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ಒದಗಿಸಿಕೊಡುವಂತೆ ನಟರಾಜು ಮನವಿ ಮಾಡಿದ್ದಾರೆ. ವಿಷಯ ತಿಳಿದು ಬೇಗೂರು ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಆ.19– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಸೋಮವಾರಪೇಟೆ ಮತ್ತು ರಾಮಸಮುದ್ರ ಫೀಡರ್‌ನಲ್ಲಿ ಆ.20ರಂದು ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಅಂದು ಬೆಳಗ್ಗೆ 10 ರಿಂದ ಸಂಜೆ 4 ರವರೆಗೆ ಸೋಮವಾರಪೇಟೆ ಯುನಿವರ್ಸಲ್ ಶಾಲೆ, ಲಕ್ಷ್ಮಿದೇವಿ ದೇವಸ್ಥಾನ, ಹೆಚ್.ಪಿ.ಪೆಟ್ರೋಲ್ ಬಂಕ್, ಹೌಸಿಂಗ್ ಬೋರ್ಡ್, ಬುದ್ದನಗರ, ಹುಣಸೇಮರ, ಎಲ್‌ಐಸಿ ಬಡಾವಣೆ, ಕರಿನಂಜನಪುರ, ಇಂದಿರಾನಗರ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಆ.22, ಡಿ.ದೇವರಾಜ ಅರಸು ಜಯಂತಿ

ಚಾಮರಾಜನಗರ, ಆ.19– ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 108ನೇ ಜನ್ಮ ದಿನಾಚರಣೆಯನ್ನು ಆ.22ರಂದು ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಎಸ್‌ಆರ್ ನಿಲ್ದಾಣದಲ್ಲಿ ಉದ್ಯಾನ್ ಎಕ್ಸ್‌ಪ್ರೆಸ್‌ನಲ್ಲಿ ಬೆಂಕಿ ಅವಘಡ: ತನಿಖೆ



ಬೆಂಗಳೂರು: ರಾಜಧಾನಿ ಬೆಂಗಳೂರಿನ ಮಜೆಸ್ಟಿಕ್ ಪ್ರದೇಶದಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ನಿಂತಿದ್ದ ಉದ್ಯಾನ್ ಎಕ್ಸ್‌ಪ್ರೆಸ್ ರೈಲು ಸಂಖ್ಯೆ 11301 ರ ಬೋಗಿ 1 ಮತ್ತು 2ರಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡು ದಟ್ಟ ಹೊಗೆ ಆವರಿಸಿದ ಘಟನೆಗೆ ಸಂಬಂಧಿಸಿದಂತೆ ರೈಲ್ವೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಸ್ಥಳಕ್ಕೆ ಶ್ವಾನದಳವನ್ನು ಕರೆಸಿ ತಪಾಸಣೆ ನಡೆಸಲಾಗಿದೆ. ಪೊಲೀಸ್ ಮತ್ತು ರೈಲ್ವೆ ಇಲಾಖೆ ಜಂಟಿಯಾಗಿ ಈ ಬಗ್ಗೆ ತನಿಖೆ ಮಾಡುತ್ತವೆ ಎಸಿ ಕೋಚ್‌ಗೆ ಬೆಂಕಿ ತಗುಲಿದ್ದು, ಇದು ಎಲೆಕ್ಟ್ರಿಕ್‌ನಿಂದ ಬೆಂಕಿ ಹತ್ತಿಕೊಂಡಿದೆಯೇ ಅಥವಾ ಬೇರೆ ಸಿಗರೇಟ್ ಎಳೆದು ಯಾರಾದರೂ ಬಿಸಾಕಿದ್ದರಿಂದ ಆಗಿದೆಯೇ ಅಥವಾ ರೈಲಿನ ಎಂಜಿನ್‌ನ ಆಂತರಿಕ ದೋಷದಿಂದ ಆಗಿದೆಯೇ ಎಂದು ತನಿಖೆ ಮಾಡಲಿದ್ದೇವೆ ಎಂದು ಎಡಿಜಿಪಿ ಹರಿಶೇಖರನ್ ಹೇಳಿದ್ದಾರೆ.

ರೈಲ್ವೆ ಎಸ್ಪಿ ಸುಮಲತಾ ಮಾಹಿತಿ ನೀಡಿ, ನಿಖರ ಕಾರಣ ದುರ್ಘಟನೆಗೆ ಇನ್ನೂ ಗೊತ್ತಾಗಿಲ್ಲ. ವಿಧಿ ವಿಜ್ಞಾನ ಪ್ರಯೋಗಾಲಯ ಮತ್ತು ಅಧಿಕಾರಿಗಳು ಪರಿಶೀಲನೆ ನಂತರ ನಿರ್ಧರಿಸಲಿದ್ದಾರೆ ಎಂದರು. ದುರ್ಘಟನೆಯಲ್ಲಿ ಒಂದು ಬೋಗಿಗೆ ಹಾನಿಯಾಗಿದೆ. ರೈಲ್ವೆ ನಿಲ್ದಾಣದ ಸಿಸಿಟಿವಿ ದೃಶ್ಯಾವಳಿ ಮತ್ತು ರೈಲಲ್ಲಿದ್ದ ಸಿಬ್ಬಂದಿಯಿಂದ ಮಾಹಿತಿ ಪಡೆದು ಒಂದು ನಿರ್ಧಾರಕ್ಕೆ ಬರಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ಇದೇ ನಿಲ್ದಾಣದಲ್ಲಿ ರೈಲ್ವೆ ಇಲಾಖೆಯ ಉದ್ಯೋಗಿಯಾಗಿರುವ ಮಹಿಳೆ ಹೇಳುವ ಪ್ರಕಾರ ರೈಲು ಇಂದು ನಿಗದಿತ ಸಮಯಕ್ಕಿಂತ ಮೊದಲೇ ಬೆಂಗಳೂರು ನಗರಕ್ಕೆ ಆಗಮಿಸಿದೆ. ಪ್ರಯಾಣಿಕರೆಲ್ಲ ಇಳಿದ ಬಳಿಕ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತು. ಕೂಡಲೇ ಅಗ್ನಿಶಾಮಕ ದಳಕ್ಕೆ ಕರೆ ಮಾಡಲಾಯಿತು. ಫೈರ್ ಎಂಜಿನ್ ಸ್ಥಳಕ್ಕೆ ತಲುಪುವುದು ಕೊಂಚ ತಡವಾಗಿದ್ದರಿಂದ ಬೋಗಿಯಿಡೀ ಹತ್ತಿಕೊಂಡು ಉರಿಯಲಾರಂಭಿಸಿತು. ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಆಗಮಿಸುವ ಮೊದಲು ನಿಲ್ದಾಣದಲ್ಲಿದ್ದ ರೈಲು ಸಿಬ್ಬಂದಿ ಮತ್ತು ಬೇರೆ ಜನರು ಬಕೆಟ್‌ಗಳಿಂದ ನೀರು ಹಾಕಿ ಬೆಂಕಿ ನಂದಿಸುವ ಪ್ರಯತ್ನ ಮಾಡಿದ್ದಾರೆ. ಬೆಂಕಿ ಆರಿದ ಬಳಿಕ ಪ್ಲಾಟ್ ಫಾರ್ಮ್‌ನಲ್ಲಿ ಹೊಗೆ ಆವರಿಸಿಕೊಂಡಿತು ಎಂದು ಹೇಳಿದ್ದಾರೆ.

ಒಂದನೇ ಪುಟದಿಂದ

ಗೃಹಲಕ್ಷ್ಮಿಗೆ ಚಾಲನೆ

ಭರವಸೆಯೇ ರಾಜ್ಯ ಸರ್ಕಾರಕ್ಕೆ ಭಾರಿ ಹೊರೆಯಾಗಿದೆ. ಎಪಿಎಲ್, ಬಿಪಿಎಲ್ ಪಡಿತರ ಚೀಟಿ ಪಡೆದಿರುವ ಎಲ್ಲಾ ಮನೆಯೊಡತಿಗೂ ಈ ಯೋಜನೆಯ ಲಾಭ ದೊರೆಯಲಿದೆ. ಸರ್ಕಾರಿ ನೌಕರಿ, ಆದಾಯ ತೆರಿಗೆ ಪಾವತಿ ಹಾಗೂ ಜಿಎಸ್‌ಟಿ ಪಾವತಿ ಮಾಡುವ ಕುಟುಂಬದವರನ್ನು ಹೊರತುಪಡಿಸಿ ಉಳಿದೆಲ್ಲಾ ಮನೆಯ ಯಜಮಾನಿಯರಿಗೆ ಗೃಹಜ್ಯೋತಿ ಪ್ರಯೋಜನ ಸಿಗಲಿದೆ.

ಗ್ಯಾರಂಟಿ ಯೋಜನೆಗಳ ವಾರ್ಷಿಕ 52 ಸಾವಿರ ಕೋಟಿ ರೂ. ಬೇಕಾಗಿದೆ. ಗೃಹ ಲಕ್ಷ್ಮೀ ಯೋಜನೆಗೆ 34 ಸಾವಿರ ಕೋಟಿ ರೂ. ಮೀಸಲಿರಿಸಬೇಕಾಗಿದೆ.

ಸಿದ್ಧತೆ ಪರಿಶೀಲನೆ: ಗೃಹ ಲಕ್ಷ್ಮೀ ಯೋಜನೆ ಉದ್ಘಾಟನಾ ಕಾರ್ಯಕ್ರಮಕ್ಕೆ ಈಗಾಗಲೇ ಸಿದ್ಧತೆ ಆರಂಭವಾಗಿದ್ದು, ಪರಿಶೀಲನೆಗಾಗಿ ಮೈಸೂರಿಗೆ ತೆರಳಲಿದ್ದೇನೆ. ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಮೈಸೂರು, ಮಂಡ್ಯ ಹಾಗೂ ಹಾಸನ ಜಿಲ್ಲೆಯ ಸಚಿವರು ಹಾಗೂ ಶಾಸಕರೊಂದಿಗೆ ಸಭೆ ನಡೆಸುವುದಾಗಿ ಹೇಳಿದರು. ಈ ಮೊದಲು ಗೃಹಜ್ಯೋತಿ ಯೋಜನೆಗೆ ಕಲಬುರ್ಗಿಯಲ್ಲಿ ಚಾಲನೆ ನೀಡಲಾಯಿತು. ಗೃಹಲಕ್ಷ್ಮೀ ಯೋಜನೆಯನ್ನು ಬೆಳಗಾವಿಯಲ್ಲಿ ಉದ್ಘಾಟಿಸಲು ಉದ್ದೇಶಿಸಲಾಗಿತ್ತು. ಆದರೆ ರಾಹುಲ್ ಗಾಂಧಿ ಅವರ ದಿನಾಂಕ ಹೊಂದಾಣಿಕೆ ಆಗದ ಕಾರಣ, ಆ.30ರಂದು ಮೈಸೂರಿನಲ್ಲಿ ನಡೆಸಲು ತೀರ್ಮಾನಿಸಲಾಯಿತು ಎಂದು ತಿಳಿಸಿದರು.

ತಮಿಳುನಾಡಿಗೆ ನೀರು ಬಿಡುಗಡೆ

ಏನು ಗತಿ ಎಂಬ ಆತಂಕ ರೈತರಲ್ಲಿ ಮನೆ ಮಾಡಿದೆ. ಕಬಿನಿ ಜಲಾಶಯದ ಗರಿಷ್ಠ ಮಟ್ಟ 2,284 ಅಡಿಗಳಾಗಿದ್ದು, ಈ ಬಾರಿಯೂ ತುಂಬಿತು. ಆದರೆ ಇಲ್ಲಿಂದಲೂ ತಮಿಳುನಾಡಿಗೆ ನೀರು ಹರಿಸುತ್ತಿರುವುದರಿಂದ ನೀರಿನ ಮಟ್ಟ ಕುಸಿದಿದೆ. ಇಂದಿನ ಮಟ್ಟ 2,277 ಅಡಿಗಳಾಗಿದೆ. ಇಲ್ಲಿಂದ ಪ್ರತಿ ದಿನ 5 ಸಾವಿರ ಕ್ಯೂಸೆಕ್ ನೀರನ್ನು ಬಿಡಲಾಗುತ್ತಿದೆ. ಇದರಿಂದ ಕಬಿನಿ ಜಲಾಶಯದಲ್ಲಿ ನೀರಿನ ಪ್ರಮಾಣ ಕೇವಲ ನಾಲ್ಕೈದು ದಿನದ ಅವಧಿಯಲ್ಲಿ 7 ಅಡಿ ಕಡಿಮೆಯಾಗಿದೆ. ಕಬಿನಿ ಜಲಾಶಯಕ್ಕೆ ಕೇವಲ 1,764 ಕ್ಯೂಸೆಕ್ ಒಳಹರಿವಿದೆ. ಕೇರಳದ ವೈನಾಡು ಪ್ರದೇಶದಲ್ಲಿ ಮಳೆ ನಿಂತಿದ್ದು, ಒಳ ಹರಿವಿನ ಪ್ರಮಾಣ ಇಳಿಕೆಯಾಗಿದೆ. ಕೆಆರ್‌ಎಸ್ ಮತ್ತು ಕಬಿನಿ ಜಲಾಶಯದಿಂದ ಪ್ರತಿ ದಿನ ಹೀಗೆ ನೀರು ಬಿಟ್ಟರೆ ಕಾವೇರಿ ಜಲಾಯನ ಪ್ರದೇಶದ ರೈತರು ಬೆಳೆ ಬೆಳೆಯಲು ಏನು ಮಾಡುವುದು ಎಂಬ ಪ್ರಶ್ನೆ ಎದುರಾಗಿದೆ. ತಮಿಳುನಾಡಿನ ಮೆಟ್ಟೂರು ಜಲಾಶಯದಲ್ಲಿ 90 ಟಿಎಂಸಿ ನೀರು ಶೇಖರಣೆ ಇತ್ತು. ಈಗ ನಾಲ್ಕೈದು ದಿನದಿಂದ ನೀರು ಬಿಟ್ಟಿರುವ ಕಾರಣ 100 ಟಿಎಂಸಿ ನೀರು ಶೇಖರಣೆಯಾಗಿದೆ. ಮೂರನೇ ಬೆಳೆ ಬೆಳೆಯಲು ತಮಿಳುನಾಡಿನವರು ನೀರು ಶೇಖರಣೆ ಮಾಡುತ್ತಿದ್ದಾರೆ. ಆದರೆ ರಾಜ್ಯದಲ್ಲಿ ಸರಿಯಾಗಿ ಒಂದು ಬೆಳೆ ಬೆಳೆಯಲು ನೀರು ಬಿಡುತ್ತಿಲ್ಲ. ಇನ್ನು ಭತ್ತ ನಾಟಿ ಮಾಡಿಲ್ಲ. ಆಗಲೇ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಿಂದ ನೀರು ಬಿಟ್ಟರೆ ಇಲ್ಲಿನ ರೈತರ ಪಾಡೇನು ಎಂಬ ಪ್ರಶ್ನೆ ಎದುರಾಗಿದೆ. ಆದರೆ ಇದ್ಯಾವುದನ್ನು ಲೆಕ್ಕಿಸದ ಕರ್ನಾಟಕ ಸರ್ಕಾರ ತಮಿಳುನಾಡಿಗೆ ನೀರು ಬಿಡುತ್ತಲೆ ಇದೆ.

ಎಕ್ಸ್‌ಪ್ರೆಸ್ ವೇ ಬಂದ್

ಎಂದು ಅಸಮಾಧಾನ ವ್ಯಕ್ತಪಡಿಸಿದರು. ತಮಿಳುನಾಡಿನ ಜಲಾಶಯಗಳಲ್ಲಿ ಸಾಕಷ್ಟು ನೀರು ಲಭ್ಯವಿದೆ. ಅಷ್ಟೇ ಅಲ್ಲದೆ ಕಾವೇರಿ ನದಿ ನೀರು ಹಂಚಿಕೆ ವಿಚಾರವಾಗಿ ಸುಪ್ರೀಂಕೋರ್ಟ್‌ನ ಅಂತಿಮ ತೀರ್ಪಿನಲ್ಲಿ ಕುರುವೈ ಬೆಳೆ ಪ್ರದೇಶ 1.80 ಹೆಕ್ಟೇರ್ ಮೀರಿರಬಾರದು ಎಂದು ಹೇಳಿದೆ. ಆದರೆ ತಮಿಳುನಾಡಿನಲ್ಲಿ 3 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕುರುವೈ ಬೆಳೆ ಬೆಳೆಯಲಾಗಿದ್ದು, ಅಲ್ಲಿನ ರೈತರ ಹಿತರಕ್ಷಣೆಗಾಗಿ ರಾಜ್ಯ ಸರ್ಕಾರ ನೀರು ಬಿಡುಗಡೆ ಮಾಡಿದೆ ಎಂದರು. ಬೆಂಗಳೂರಿನಲ್ಲಿ ನಡೆದ ಪ್ರತಿಪಕ್ಷಗಳ ಇಂಡಿಯಾ ಒಕ್ಕೂಟ ಸಭೆಯಲ್ಲಿ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಭಾಗವಹಿಸಿದ್ದರು. ಅವರ ಓಲೈಕೆ ಮತ್ತು ಡಿ.ಕೆ.ಶಿವಕುಮಾರ್ ಹಾಗೂ ಸ್ಟಾಲಿನ್ ನಡುವೆ ಆಗಿರುವ ಒಳ ಒಪ್ಪಂದದಂತೆ ನೀರು ಬಿಡಲಾಗಿದೆ. ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ರೈತರು ಯಾವುದೇ ಹೊಸ ಬೆಳೆ ಹಾಕಬಾರದು ಎಂದು ಕೃಷಿ ಸಚಿವರು ಹೇಳುತ್ತಾರೆ. ಆದರೆ ತಮಿಳುನಾಡಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸುವ ಮೂಲಕ ರಾಜ್ಯದ ರೈತರ ಕಣ್ಣಿಗೆ ಸುಣ್ಣ ಹಚ್ಚಿ ತಮಿಳುನಾಡು ರೈತರಿಗೆ ಬೆಣ್ಣೆ ಉಣಬಡಿಸುತ್ತಿದ್ದಾರೆ ಎಂದು ಕಿಡಿಕಾರಿದರು. ಕಾವೇರಿ ಕಣಿವೆಯ ರೈತರಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ನಿರಂತರ ಅನ್ಯಾಯ ಮಾಡುತ್ತಿದ್ದು ಸೋಮವಾರ ಬೆಳಗ್ಗೆ 11 ಗಂಟೆಗೆ ಇಂಡುವಾಳು, ಯಲಿಯೂರು ಸರ್ಕಲ್‌ನಲ್ಲಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಬಂದ್ ಮಾಡಿ ಪ್ರತಿಭಟಿಸಲಾಗುವುದು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಪ್ರತಿಭಟನೆ ನೇತೃತ್ವ ವಹಿಸಲು ಆಹ್ವಾನಿಸಲಾಗುವುದು. ಜೊತೆಗೆ ಜಿಲ್ಲೆಯ ಜನಪರ, ರೈತ, ಕನ್ನಡಪರ ಮತ್ತು ಆಟೋ ಟ್ಯಾಕ್ಸಿ ಮಾಲೀಕರನ್ನು ಸಹ ಭಾಗವಹಿಸುವಂತೆ ಕೋರಲಾಗುವುದು ಎಂದು ತಿಳಿಸಿದರು.

ಸಂಸದೆ ಸುಮಲತಾ ಮಾತನಾಡಿ, ಇದು ರಾಜಕೀಯ ಹೋರಾಟ ಅಲ್ಲ. ನಾವೆಲ್ಲರೂ ರೈತರ ಪರ ನಿಲ್ಲಬೇಕು. ರೈತಪರ ನಿಲುವಿಗೆ ಬದ್ಧರಾಗಬೇಕು. ಹಾಗಾಗಿ ಎಲ್ಲರನ್ನೂ ಒಳಗೊಂಡು ಹೋರಾಟ ರೂಪಿಸಲಾಗಿದೆ. ಸಂಕಷ್ಟ ಕಾಲದಲ್ಲಿ ರೈತರ ಪರ ಸರ್ಕಾರ ನಿಲ್ಲುತ್ತಿಲ್ಲ. ರೈತರಿಗೆ ಅನ್ಯಾಯವಾಗುತ್ತಿದೆ. ಕಾವೇರಿ ಕಣಿವೆ ಜಿಲ್ಲೆಗಳಲ್ಲಿ ಮುಂದಿನ ದಿನಗಳಲ್ಲಿ ಮತ್ತಷ್ಟು ಸಂಕಷ್ಟ ಎದುರಿಸಬೇಕಾಗಿದೆ. ಇದನ್ನು ಪ್ರತಿಯೊಬ್ಬರು ಅರಿತು ಮುನ್ನಡೆಯಬೇಕಾಗಿದೆ ಎಂದರು. ಕೇಂದ್ರದ ಕಡೆ ರಾಜ್ಯ ಸರ್ಕಾರ ಕೈ ತೋರಿಸಬಹುದು. ಆದರೆ ದಿ.ಅಂಬರೀಶ್ ಕೇಂದ್ರ ಸಚಿವರಾಗಿದ್ದಾಗ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ನಿದರ್ಶನ ನಿಮ್ಮ ಮುಂದಿದೆ. ಕೇಂದ್ರ ಸರ್ಕಾರ ಇತ್ಯರ್ಥ ಮಾಡುವುದಾಗಿದ್ದರೆ ಅವರೇಕೆ ರಾಜೀನಾಮೆ ನೀಡುತ್ತಿದ್ದರು ಎಂಬುದನ್ನು ತಿಳಿಯಬೇಕು. ಇಂತಹ ವಿಷಯದಲ್ಲಿ ಸುಮ್ಮನೆ ರಾಜಕಾರಣ ಮಾಡಬಾರದು ಎಂದು ಹೇಳಿದರು.


ಕಾವೇರಿ ನದಿ ನೀರು ವಿಚಾರದಲ್ಲಿ ತಮಿಳುನಾಡು ಸದಾ ಜಾಗೃತಿ ವಹಿಸಲಿದೆ. ಹಲವು ನಿರ್ಧಾರಗಳು ಅವರ ಪರ ಬಂದಿದೆ. ರಾಜ್ಯ ಸರ್ಕಾರ ಸಹ ಮುನ್ನೆಚ್ಚರಿಕೆ ವಹಿಸಬೇಕು. ಯಾವುದೇ ಕಾರಣಕ್ಕೂ ರೈತರ ವಿರುದ್ಧ ನಿಲುವು ತಾಳಬಾರದು. ನಾನು ಪಕ್ಷೇತರ ಸಂಸದೆ, ರೈತರ ಪರ ಹೋರಾಟಕ್ಕೆ ಸದಾ ನಿಲ್ಲಲಿದ್ದೇನೆ. ಈ ವಿಚಾರವಾಗಿ ರಾಜಕಾರಣ ಮಾಡುವ ಪ್ರಶ್ನೆಯೇ ಇಲ್ಲ. ಕಾವೇರಿ ನದಿ ನೀರಿನ ವಿಚಾರದಲ್ಲಿ ಯಾರು ಸಹ ರಾಜಕಾರಣ ಮಾಡಬಾರದು ಎಂದರು. ಸಭೆಯಲ್ಲಿ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಪಿ.ಉಮೇಶ್, ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ನಿರಂಜನ್ ಕುಮಾರ್, ಮುಖಂಡರಾದ ಡಾ.ಸಿದ್ದರಾಮಯ್ಯ, ರಾಜೇಂದ್ರ, ರಾಜೇಶ್, ಕವೀಶ್‌ಗೌಡ ಸೇರಿದಂತೆ ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಯ ಬಿಜೆಪಿ ಮುಖಂಡರು ಭಾಗವಹಿಸಿದ್ದರು.

ನಾಳಿದ್ದು ರೈತ ಸಂಘದಿಂದ ಹೆದ್ದಾರಿ ತಡೆ

ಮೆಟ್ಟೂರು ಜಲಾಶಯಕ್ಕೆ ಸುಪ್ರೀಂಕೋರ್ಟ್‌ನ ಭೂತ ತೋರಿಸಿ ತಮಿಳುನಾಡಿಗೆ ಸುಮಾರು 13,000 ಕ್ಯೂಸೆಕ್ಸ್ ನೀರು ದಿನಗಟ್ಟಲೆ ಬಿಡುತ್ತಿರುವ ರಾಜ್ಯ ಸರ್ಕಾರದ ನಿಲುವು ಮಲತಾಯಿ ಧೋರಣೆಯೇ ಸರಿ. ಈಗಾಗಲೇ ಕಾವೇರಿ ಜಲಾಶಯ ಅಣೆಕಟ್ಟುಗಳಿಂದ ವಾಡಿಕೆ ಅಥವಾ ಕಾವೇರಿ ಜಲನ್ಯಾಯ ಮಂಡಳಿ ಆದೇಶದ ರೀತಿಯಂತೆ ಸುಮಾರು 32 ಟಿಎಂಸಿ 1.80 ಲಕ್ಷ ಎಕರೆ ಕುರುವೈ ಬೆಳೆಗೆ ಒಂದು ವರ್ಷದ ಅವಧಿಗೆ ಸಾಕಾಗುವಷ್ಟು ನೀರಿದ್ದರೂ ತಮಿಳುನಾಡು ಸರ್ಕಾರ ನೀರಿನ ದುರ್ಬಳಕೆ ಮಾಡಿಕೊಂಡು ತೀರ್ಪಿನ ಉಲ್ಲಂಘನೆ ಮಾಡಿದೆ ಎಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ಮಂಜೇಶ್‌ಗೌಡ, ಶಂಕರೇಗೌಡ, ಹೆಚ್.ಜಿ.ಪ್ರಭುಲಿಂಗು ಮತ್ತಿತರರಿದ್ದರು

ಮೈಸೂರಲ್ಲಿ ವಿಶ್ವ ಛಾಯಾಗ್ರಹಣ ದಿನಾಚರಣೆ

ವರದಿಗಳಿಗಿಂತಲೂ ಚಿತ್ರಗಳು ಬೇಗ ಗಮನ ಸೆಳೆಯುವುದು: ಶ್ರೀವತ್ಸ



ಮೈಸೂರು ಅರಮನೆಯಲ್ಲಿ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರು ಕ್ಯಾಮರಾ ಕ್ಲಿಕ್ ಮಾಡುವ ಮೂಲಕ ಶನಿವಾರ ವಿಶ್ವ ಛಾಯಾಗ್ರಹಣ ದಿನಾಚರಣೆಗೆ ಚಾಲನೆ ನೀಡಿದರು. ಈ ವೇಳೆ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಎಂಪಿಜೆಎಯ ಎಸ್.ಆರ್. ಮಧುಸೂದನ್, ಎಂ.ಎನ್. ಲಕ್ಷ್ಮಿನಾರಾಯಣ ಯಾದವ್, ಹಂಪಾ ನಾಗರಾಜ್, ಪ್ರಗತಿ ಗೋಪಾಲಕೃಷ್ಣ ಇತರರಿದ್ದಾರೆ

ಮೈಸೂರು, ಆ. 19(ಆರ್‌ಕೆ)– ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಹಾಗೂ ಮೈಸೂರು ಫೋಟೋಗ್ರಫಿಕ್ ಅಸೋಸಿಯೇಷನ್ ವತಿಯಿಂದ ಮೈಸೂರಿನಲ್ಲಿ ಇಂದು 184ನೇ ವಿಶ್ವ ಛಾಯಾಗ್ರಹಣ ದಿನವನ್ನು ಆಚರಿಸಲಾಯಿತು.

ಮೈಸೂರು ಅರಮನೆಯಲ್ಲಿ ರಾಜಮಾತೆ ಪ್ರಮೋದಾದೇವಿ ಒಡೆಯರ್ ಕ್ಯಾಮರಾ ಕ್ಲಿಕ್ ಮಾಡುವ ಮೂಲಕ ವಿಶ್ವ ಛಾಯಾಗ್ರಹಣ ದಿನಾಚರಣೆಗೆ ಚಾಲನೆ ನೀಡಿದರು. ಈ ಸಂದರ್ಭ ಮಾತನಾಡಿದ ಅವರು, ಸಮಾಜದ ವಿವಿಧ ಆಯಾಮಗಳನ್ನು ಕ್ಯಾಮರಾ ಕಣ್ಣಲ್ಲಿ ಸೆರೆಹಿಡಿಯುವ ಈ ಛಾಯಾಗ್ರಹಣ ವೃತ್ತಿಯು ಸಾರ್ವಜನಿಕರಿಗೆ ನೈಜ ಚಿತ್ರಣವನ್ನು ಕಣ್ಣಿಗೆ ಕಟ್ಟಿಕೊಡುತ್ತವೆ ಎಂದರು.

ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಎಂಡಿಜೆಎ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಎಂಡಿಜೆಎಯ ಎಸ್.ಆರ್. ಮಧುಸೂದನ್, ಎಂ.ಎನ್. ಲಕ್ಷ್ಮಿನಾರಾಯಣ ಯಾದವ, ಹಂಪಾ ನಾಗರಾಜ್, ಛಾಯಾಗ್ರಾಹಕರಾದ ಪ್ರಗತಿ ಗೋಪಾಲಕೃಷ್ಣ, ನಾಗೇಶ್ ಪಾಣತ್ತಲೆ, ಅನುರಾಗ್ ಬಸವರಾಜ್, ಉದಯ ಶಂಕರ್, ಗವಿಮಠ ರವಿ, ಚಂದ್ರು, ನಿಶಾಂತ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಕಲಾಮಂದಿರದ ಸುಚಿತ್ರ ಕಲಾ ಗ್ಯಾಲರಿಯಲ್ಲಿ ಮೈಸೂರು ಫೋಟೋಗ್ರಫಿ ಅಸೋಸಿಯೇಷನ್‌ನಿಂದ ವಿಶ್ವ ಛಾಯಾಗ್ರಹಣ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಎರಡು ದಿನಗಳ ಛಾಯಾಚಿತ್ರ ಪ್ರದರ್ಶನವನ್ನು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್ ಉದ್ಘಾಟಿಸಿದರು. ಇದೇ ವೇಳೆ ಅತ್ಯುತ್ತಮ ಛಾಯಾಚಿತ್ರ ಸ್ಪರ್ಧೆ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಎಂಪಿಎ ಅಧ್ಯಕ್ಷ ಶಾಂತಪ್ಪ, ಉಪಾಧ್ಯಕ್ಷ ಶೇಷಾದ್ರಿ, ಕಾರ್ಯದರ್ಶಿ ಮುರಳೀಧರ, ಜಂಟಿ ಕಾರ್ಯದರ್ಶಿ ರೂಪೇಶ್, ಖಜಾಂಚಿ ರವೀಂದ್ರಲಾಲ್, ಕಾರ್ಯಕಾರಿ ಸಮಿತಿ ಸದಸ್ಯರಾದ ರಾಮಪ್ರಸಾದ್, ವಿನ್ಸೆಂಟ್, ಕೊ.ಸು. ನರಸಿಂಹಮೂರ್ತಿ, ಅಭಿನಂದನ್, ಜಗದೀಶ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.





ಹಿರಿಯ ಛಾಯಾಗ್ರಾಹಕರಾದ ಸುತ್ತೂರು ನಂಜುಂಡ ನಾಯಕ ಅವರನ್ನು ಸನ್ಮಾನಿಸುತ್ತಿರುವುದು

ಮೈಸೂರು, ಆ.19(ಜಿಎ)–ವರದಿಗಳು ತಿಳಿಸುವ ವಿಷಯಕ್ಕಿಂತ ಹೆಚ್ಚು ಫೋಟೋಗಳು ತಿಳಿಸುತ್ತದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಸಂಘದ ಸಭಾಂಗಣದಲ್ಲಿ ವಿಶ್ವ ಛಾಯಾಗ್ರಹಣ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ಛಾಯಾಗ್ರಹಣ ಇಲ್ಲದ ದಿನಗಳೇ ಇಲ್ಲ. ಅದರಲ್ಲೂ ರಾಜಕಾರಣಿಗಳಿಗೆ ಛಾಯಾಗ್ರಹಕರು ಇಲ್ಲದಿದ್ದರೆ ಕಾರ್ಯಕ್ರಮವೇ ನಡೆಯುವುದಿಲ್ಲ ಎಂದರು.

ವನ್ಯಜೀವಿ ಫೋಟೋ ತೆಗೆಯುವುದು ಒಂದು ಸಾಹಸ ಹಾಗೂ ಕಷ್ಟಕರ. ವರದಿಗಳಿಗಿಂತಲೂ ಚಿತ್ರಗಳು ಬೇಗ ಗಮನ ಸೆಳೆಯುತ್ತದೆ. ಕೆಲ ಫೋಟೋಗ್ರಾಫರ್‌ಗಳ ಬಳಿ ಅತ್ಯುತ್ತಮ ವನ್ಯಜೀವಿ ಫೋಟೋಗಳಿವೆ ಅದನ್ನು ನನಗೆ ನೀಡಿದರೆ, ಕಾರ್ಯಕ್ರಮಗಳಲ್ಲಿ ಉಡುಗೊರೆ ನೀಡುತ್ತೇನೆ. ನಿಮ್ಮ ಜೊತೆ ಸದಾ ಇರುತ್ತೇನೆಂದು ಭರವಸೆ ನೀಡಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ಛಾಯಾಗ್ರಹಣ ಎಂಬುದು ಬಹಳಷ್ಟು ಕಷ್ಟಕರ ಜೊತೆಗೆ ಸಾಹಸದ ಕೆಲಸವಾಗಿದೆ. ಈ ಹಿಂದೆ ಪತ್ರಿಕೆಗಳಿಗೆ ಫೋಟೋ ಕಳುಹಿಸಬೇಕಾದರೆ, ಮೂರು ದಿನವಾಗುತ್ತಿದ್ದವು. ಆದರೆ, ಇಂದು ತಂತ್ರಜ್ಞಾನದ ಸಹಾಯದಿಂದ ಕ್ಷಣಾರ್ಧದಲ್ಲಿ ಫೋಟೋ ಕಳುಹಿಸಬಹುದು. ಮೈಸೂರಿನ ಛಾಯಾಗ್ರಹರು ಬದ್ಧತೆ ಕಾರ್ಯಕ್ಷಮತೆಯನ್ನು ಉಳಿಸಿಕೊಳ್ಳುವುದರ ಜೊತೆಗೆ ಮೈಸೂರು ಜಿಲ್ಲೆ ಮಾತ್ರವಲ್ಲದೆ ರಾಜ್ಯ ಘನತೆಯನ್ನು ಕಾಪಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಛಾಯಾ ಗ್ರಾಹಕರಾದ ಸುತ್ತೂರು ನಂಜುಂಡ ನಾಯಕ ಅವರನ್ನು ಸನ್ಮಾನಿಸಲಾಯಿತು.

ನಂತರ ಮಾತನಾಡಿದ ನಂಜುಂಡ ನಾಯಕ ಅವರು, ಗ್ರಾಮೀಣ ಪ್ರದೇಶದ ನನ್ನ ಗುರುತಿಸಿದ್ದಕ್ಕಾಗಿ ಸಂಘದ ಎಲ್ಲಾ ಪದಾಧಿಕಾರಿಗಳಿಗೆ ಧನ್ಯವಾದಗಳು ಈ ಪ್ರಶಸ್ತಿಯನ್ನು ಎಲ್ಲಾ ಮಾಧ್ಯಮ ಮಿತ್ರರಿಗೆ ಅರ್ಪಿಸುತ್ತೇನೆ ಎಂದರು.

ರೈತ ಮುಖಂಡ ಬಕ್ಕಳ್ಳಿ ನಂಜುಂಡ ಸ್ವಾಮಿ ಮಾತನಾಡಿ, ನಂಜುಂಡ ನಾಯಕರವರು ಕೃಷಿಯಲ್ಲಿ ತೊಡಗಿದ್ದು, ಹಸುಗಳ ಪೋಷಣೆ ಮಾಡಿ ನಂತರ ಪತ್ರಿಕಾ ಕೆಲಸದಲ್ಲಿ ತೊಡಗುವ ಸರಳ ವ್ಯಕ್ತಿಯಾಗಿದ್ದಾರೆ. ನಂಜನಗೂಡಿನ ಅನೇಕ ಸಮಸ್ಯೆಗಳಿಗೆ ತಮ್ಮ ಫೋಟೋಗಳನ್ನು ಪತ್ರಿಕೆಗಳಲ್ಲಿ ಬಿತ್ತರಿಸುವ ಮೂಲಕವೇ ಪರಿಹಾರ ಕಲ್ಪಿಸಿದ್ದು, ಕಪಿಲಾ ನದಿ ಶುಚಿತ್ವಕ್ಕೆ ಕಾರಣರಾಗಿದ್ದಾರೆ ಎಂದು ಸ್ಮರಿಸಿದರು. ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ಅನುರಾಗ ಬಸವರಾಜು, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಮಣ್ಯ, ನಗರ ಕಾರ್ಯದರ್ಶಿ ರಂಗಸ್ವಾಮಿ ಮತ್ತು ಖಜಾಂಚಿ ನಾಗೇಶ್ ಪಾಣತ್ತಲೆ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಬಿ.ರಾಘವೇಂದ್ರ, ಹಿರಿಯ ಛಾಯಗ್ರಾಹಕ ಪ್ರಗತಿ ಗೋಪಾಲ ಕೃಷ್ಣ, ನಂಜನಗೂಡು ತಾಲೂಕು ಸಂಘದ ಅಧ್ಯಕ್ಷ ಗಂಗಾಧರ್, ಎಸ್.ಆರ್. ಮಧುಸೂಧನ್, ಹಿರಿಯ ಪತ್ರಕರ್ತ ಕಾಶಿನಾಥ್ ಮತ್ತು ಸಾಹಿತಿ ಬನ್ನೂರು ಕೆರಾಜು ಉಪಸ್ಥಿತರಿದ್ದರು.

ಅತ್ಯುತ್ತಮ ಶಾಸಕ ಪ್ರಶಸ್ತಿ ಪಡೆದ ಕೆ.ಟಿ. ಶ್ರೀಕಂಠೇಗೌಡರಿಗೆ ಇಂದು ಅಭಿನಂದನೆ



ಮೈಸೂರು, ಆ.19(ಜಿಎ)–ಕರ್ನಾಟಕ ವಿಧಾನ ಪರಿಷತ್ತಿನ ಅತ್ಯುತ್ತಮ ಶಾಸಕ ಪ್ರಶಸ್ತಿ ಪಡೆದ ಕೆ.ಟಿ.ಶ್ರೀಕಂಠೇಗೌಡ ಅವರಿಗೆ ಕೆ.ಟಿ.ಶ್ರೀಕಂಠೇಗೌಡ ಅಭಿನಂದನಾ ಸಮಿತಿ ವತಿಯಿಂದ ಆ.20ರಂದು ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಡಾ.ಕೆ.ಕಾಳಚನ್ನೇಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4 ಗಂಟೆಗೆ ನಗರದ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಶ್ರೀಸುತ್ತೂರು ಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿದ್ದು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿ ಅವರು ಕೆ.ಟಿ.ಶ್ರೀಕಂಠೇಗೌಡ ಅವರನ್ನು ಸನ್ಮಾನಿಸಲಿದ್ದಾರೆ. ಕಾರ್ಯಕ್ರಮ ಅಧ್ಯಕ್ಷತೆಯನ್ನು ಶಾಸಕ ಜಿ.ಟಿ.ದೇವೇಗೌಡ ವಹಿಸಲಿದ್ದಾರೆ.

ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ.ಹೆಚ್.ಎಂ.ರಾಜಶೇಖರ್ ಮತ್ತು ಸಾಹಿತಿ ಪ್ರೊ.ಜಯಪ್ರಕಾಶ ಗೌಡ ಅವರಿಂದ ಅಭಿನಂದನಾ ನುಡಿ, ಶಾಸಕ ತನ್ವೀರ್ ಸೇಠ್, ಮಾಜಿ ಶಾಸಕರಾದ ಸಾ.ರಾ.ಮಹೇಶ್, ವಾಸು, ಎಂಎಲ್‌ಸಿಗಳಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ವಿಶ್ರಾಂತ ಕುಲಪತಿಗಳ ವೇದಿಕೆ ಅಧ್ಯಕ್ಷ ಡಾ.ಕೆ.ಎಸ್.ರಂಗಪ್ಪ, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಗುಂಡಪ್ಪಗೌಡ ಮತ್ತು ಲಯನ್ ಕೆ.ದೇವೇಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ನಂತರ ಸಮಿತಿ ಉಪಾಧ್ಯಕ್ಷ ಅಪ್ಪಾಜಿ ಗೌಡ ಕೊಪ್ಪ ಮಾತನಾಡಿ, ಈ ಅಭಿನಂದನಾ ಸಮಾರಂಭವು ಯಾವುದೇ ಪಕ್ಷಕ್ಕೆ ಸೀಮಿತವಾದದ್ದಲ್ಲ. ಕೆ.ಟಿ.ಶ್ರೀಕಂಠೇಗೌಡ ಅವರು ಎರಡು ಅವಧಿಯಲ್ಲಿಯೂ ತಮ್ಮ ವಾಕ್ ಚಾತುರ್ಯದಿಂದ ಶಿಕ್ಷಕರ ಮತ್ತು ಪದವೀಧರರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದರು. ಅದನ್ನು ನಮ್ಮ ಮುಂದಿನ ಪೀಳಿಗೆಗೆ ತಿಳಿಸುವ ನಿಟ್ಟಿನಲ್ಲಿ ಈ ಅಭಿನಂದನೆ ಮಾಡಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಸದಸ್ಯರಾದ ಎಸ್.ಬಿ.ಎಂ. ಮಂಜು, ಕೆ.ವಿ.ಶ್ರೀಧರ್, ಸಮಿತಿ ಸಂಘಟಕಿ ಎಂ.ಎಸ್. ಹೇಮಾವತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವಾರಾಂತ್ಯದಲ್ಲಿ ಸುರಿದ ಮಳೆಗೆ ಜನಜೀವನ ಅಸ್ತವ್ಯಸ್ತ

ಮೈಸೂರು, ಆ.19(ಜಿಎ)–ಮೈಸೂರು ನಗರದಾದ್ಯಂತ ಶನಿವಾರ ಮುಂಜಾನೆ ಸುರಿದ ಮಳೆಗೆ ಜನಜೀವನ ಅಸ್ತವ್ಯಸ್ತವಾಗಿ ಕೆಲಸ ಕಾರ್ಯಗಳಿಗೆ ತೆರಳುವವರು ಪರದಾಡುವ ಸ್ಥಿತಿ ನಿರ್ಮಾಣವಾಯಿತು.

ಕಳೆದ ಒಂದು ವಾರದಿಂದ ಮೈಸೂರಿನಲ್ಲಿ ಬಿಸಿಲಿನ ತಾಪ ಹೆಚ್ಚಾಗಿ ಕಾಣಿಸಿಕೊಂಡು ಬೇಸಿಗೆ ಕಾಲದಂತೆ ಭಾಸವಾಗಿತ್ತು. ಆದರೆ, ಶನಿವಾರ ಮುಂಜಾನೆ ಆರಂಭವಾದ ಮಳೆಯೂ ಮಧ್ಯಾಹ್ನದವರೆಗೂ ಸುರಿಯಿತು.

ಬೆಳ್ಳಂಬೆಳಗ್ಗೆ ಮಳೆ ಸುರಿದ ಪರಿಣಾಮ ಶಾಲೆ–ಕಾಲೇಜಿಗೆ ತೆರಳಬೇಕಿದ್ದ ವಿದ್ಯಾರ್ಥಿಗಳು, ಕೆಲಸಕ್ಕೆ ಹೋಗಬೇಕಿದ್ದ ಕಾರ್ಮಿಕರು ಪರದಾಡುವ ಸ್ಥಿತಿ ನಿರ್ಮಾಣವಾಯಿತು. ಬೆಳಗ್ಗೆ 9 ಗಂಟೆಗೆ ಮಳೆ ಕಡಿಮೆ ಆಗುವಂತೆ ಗೋಚರಿಸಿತು. ಆದರೆ, ಕಡಿಮೆ ಆಗಲಿಲ್ಲ. ನಂತರ ಎಲ್ಲರೂ ಕೊಡೆ, ರೈನ್ ಕೋಟ್ ಮೊರೆಯಿಂದ ಶಾಲಾ–ಕಾಲೇಜು, ಕೆಲಸ ಕಾರ್ಯಗಳಿಗೆ ತೆರಳಿದರು.

ಮಧ್ಯಾಹ್ನ 12 ಗಂಟೆ ನಂತರ ಮಳೆ ನಿಂತು ಬಿಸಿಲು ಮೂಡಲು ಆರಂಭವಾಯಿತು. ಆದರೆ, ಮತ್ತೆ 2.30ರ ನಂತರ ನಗರದ ಕೆಲವೆಡೆ ತುಂತುರು ಮಳೆ ಆರಂಭವಾಯಿತು. ನಂತರ ಸಂಜೆ 6 ಗಂಟೆವರೆಗೂ ಮೋಡ ಕವಿದ ವಾತವಾರಣವಿತು. ನಂತರ ಮತ್ತೆ ಮಳೆ ಆರಂಭವಾಯಿತು. ಮಳೆಯಿಂದ ಯಾವುದೇ ಅಹಿತಕರ ಘಟನೆ ಸಂಭವಿಸಿಲ್ಲ ಎಂದು ಪಾಲಿಕೆಯ ಅಭಯ ತಂಡದ ಸಿಬ್ಬಂದಿ ತಿಳಿಸಿದರು.


ನಟಿ ಉಮಾಶ್ರೀ ಸೇರಿದಂತೆ ಮೂವರು ಇನ್ನು ಎಂಎಲ್‌ಸಿ; ವಿಧಾನಪರಿಷತ್‌ಗೆ ಮೂವರ ನಾಮ ನಿರ್ದೇಶನ



ಬೆಂಗಳೂರು: ನಟಿ ಉಮಾಶ್ರೀ ಸೇರಿದಂತೆ ಮೂವರು ವಿಧಾನಪರಿಷತ್ ಸ್ಥಾನಕ್ಕೆ ನಾಮ ನಿರ್ದೇಶನಗೊಂಡಿದ್ದು, ರಾಜ್ಯಪಾಲರ ಅಂಕಿತವೂ ಸಿಕ್ಕಿದೆ. ಈ ಮೂಲಕ ಕಾಂಗ್ರೆಸ್‌ನಿಂದ ಮೂವರು ಮೇಲ್ಮನೆಗೆ ಪ್ರವೇಶ ಪಡೆದಿದ್ದಾರೆ.

ಮಾಜಿ ಸಚಿವೆ ಉಮಾಶ್ರೀ, ಎಂ.ಆರ್.ಸೀತಾರಾಂ ಹಾಗೂ ಸುಧಾಮ್‌ದಾಸ್ ಅವರನ್ನು ಕಾಂಗ್ರೆಸ್ ವಿಧಾನಪರಿಷತ್‌ಗೆ ನಾಮನಿರ್ದೇಶನ ಮಾಡಿದೆ. ಈ ಕುರಿತು ರಾಜ್ಯಪತ್ರದಲ್ಲಿ ಅಧಿಕೃತವಾಗಿ ಪ್ರಕಟಗೊಂಡಿದೆ. ಇದರ ಬೆನ್ನಿಗೇ ಸುಧಾಮ್‌ದಾಸ್ ನೇಮಕಕ್ಕೆ ಪಕ್ಷದ ಹಿರಿಯ ಸಚಿವರಿಂದಲೇ ವಿರೋಧ ವ್ಯಕ್ತವಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಬಲಿತ ಸುಧಾಮ್ ದಾಸ್ ನೇಮಕಕ್ಕೆ ಹಿರಿಯ ಸಚಿವರು ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಹಿಳಾ ಫಲಾನುಭವಿಗಳಿಗೆ ಪಾಲಿಕೆ ಆರ್ಥಿಕ ನೆರವು



ಮೈಸೂರು,ಆ.19(ಎಂಟಿವೈ)– ಬಡ ಕುಟುಂಬದ ಮಹಿಳೆಯರ ಸಬಲೀಕರಣಕ್ಕಾಗಿ ಡೇ–ನಲ್ಮ್ ಹಾಗೂ ಪಿಎಂ ಸ್ವ–ನಿಧಿ ಯೋಜನೆಯ ಫಲಾನುಭವಿ ಗಳಿಗೆ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಆರ್ಥಿಕ ನೆರವು ವಿತರಿಸಲಾಯಿತು.

ಮೈಸೂರಿನ ಪುರಭವನದ ಆವರಣದಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಆಯೋಜಿಸಿದ್ದ ಸವಲತ್ತು ವಿತರಣಾ ಕಾರ್ಯಕ್ರಮದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಾದ ದೀನ್ ದಯಾಳ್ ಅಂತ್ಯೋದಯ – ರಾಷ್ಟ್ರೀಯ ನಗರ ಜೀವನೋಪಾಯ (ಡೇ–ನಲ್ಮ್), ಪ್ರಧಾನ ಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮ ನಿರ್ಭರ ನಿಧಿ, (ಪಿಎಂ ಸ್ವ–ನಿಧಿ) ಹಾಗೂ ಪ್ರಧಾನಮಂತ್ರಿ ಕಿರು ಆಹಾರ ಉದ್ದಿಮೆ ಯೋಜನೆಗಳ ಫಲಾನುಭವಿಗಳಿಗೆ ಸಾಲ ಸೌಲಭ್ಯ ವಿತರಣೆ, ಪ್ರಮಾಣ ಪತ್ರ, ಉತ್ತಮ ಸಂಘಗಳಿಗೆ ಪ್ರಶಂಸನಾ ಪತ್ರವನ್ನು ವಿತರಿಸಲಾಯಿತು.

77ನೇ ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ 'ನನ್ನ ಮಣ್ಣು ನನ್ನ ದೇಶ' ಶೀರ್ಷಿಕೆಯಡಿ ಜೀವನೋಪಾಯ ವರ್ಷ–2023 ರಂದು ಆಚರಿಸಲಾಗುತ್ತಿದ್ದು, ಬೀದಿ ಬದಿ ವ್ಯಾಪಾರಿಗಳು ಸೇರಿದಂತೆ ಬಡ ಕುಟುಂಬದ ಮಹಿಳೆಯರನ್ನು ಸ್ವಾವಲಂಬಿಗಳಾಗಿ ಮಾಡುವ ನಿಟ್ಟಿನಲ್ಲಿ ಡೇ–ನಲ್ಮ್ ಹಾಗೂ ಪಿಎಂ ಸ್ವ–ನಿಧಿ ಯೋಜನೆಯಲ್ಲಿ ಸಾಲ ಸೌಲಭ್ಯ ನೀಡಲಾಗುತ್ತಿದೆ. ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್ ಫಲಾನುಭವಿಗಳಿಗೆ ಸಾಲ ಸೌಲಭ್ಯದ ಚೆಕ್ ವಿತರಿಸಿದರು.

ಬಳಿಕ ಮೇಯರ್ ಶಿವಕುಮಾರ್ ಮಾತನಾಡಿ, ಪಿಎಂ ಸ್ವನಿಧಿ ಬಳಕೆಯಲ್ಲಿ ಮೈಸೂರಿಗೆ ಎರಡನೇ ಸ್ಥಾನ ದೊರೆತಿದೆ. ನಗರದ ರಸ್ತೆ ಬದಿ ವ್ಯಾಪಾರಿಗಳು ಬ್ಯಾಂಕ್‌ಗಳಲ್ಲಿ ಸಾಲ ಪಡೆದು ಆರ್ಥಿಕವಾಗಿ ಸಬಲೀಕರಣಗೊಳ್ಳಲು ಈ ಯೋಜನೆ ಸಹಕಾರಿಯಾಗಿದೆ. ಬಡವರು, ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಪ್ರಧಾನಿ ನರೇಂದ್ರ ಮೋದಿ ಆತ್ಮನಿರ್ಭರ ಭಾರತ ಪಿಎಂ ಸ್ವನಿಧಿ ಯೋಜನೆ ಜಾರಿಗೆ ತಂದರು. ಇದರಿಂದ ದೇಶದಲ್ಲಿ 13.50 ಕೋಟಿ ಜನರು ಬಡತನ ರೇಖೆಗಿಂತ ಹೊರಗೆ ಬಂದಿದ್ದಾರೆ. ಈ ಹಿಂದೆ ಬ್ಯಾಂಕ್‌ಗಳಲ್ಲಿ ಸಾಲ ಸೌಲಭ್ಯ ಸಿಗುತ್ತಿರಲಿಲ್ಲ. ಆದರೆ, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಹಲವು ಕಾರ್ಯಕ್ರಮದೊಂದಿಗೆ ಫಲಾನುಭವಿಗಳಿಗೆ ಸಾಲಸೌಲಭ್ಯ ನೀಡುವಂತೆ ಗುರಿಯನ್ನು ನೀಡಿದೆ. ಇದರಿಂದ ವಿವಿಧ ಬ್ಯಾಂಕ್‌ಗಳು ಫಲಾನುಭವಿಗಳಿಗೆ ಸಾಲಸೌಲಭ್ಯ ನೀಡಲು ಉತ್ಸುಕವಾಗಿದೆ. ಇಂತಹ ಬದಲಾವಣೆಯನ್ನು ನಾವು ಕಾಣಬಹುದಾಗಿದೆ ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಯುವಕರು, ಬೀದಿಬದಿ ವ್ಯಾಪಾರಿಗಳು, ಮಹಿಳೆಯರು ಸೇರಿದಂತೆ ಅಸಂಘಟಿತರ ಏಳಿಗೆಗೆ ಪ್ರಧಾನಿ ಮೋದಿ ಹಲವು ಕಾರ್ಯಕ್ರಮ ಗಳನ್ನು ನೀಡಿದ್ದಾರೆ. ಸೈನ್ಯದಿಂದ ವಾಪಸಾದ ನನಗೆ ಹಸು ಸಾಕಾಣಿಕೆ ಮಾಡಲು 10 ಸಾವಿರ ರೂ. ಸಾಲ ಸಿಕ್ಕಿರಲಿಲ್ಲ. ಒಂದು ವೇಳೆ ದೊರೆತಿದ್ದರೆ ನಾನು ವಿಧಾನ ಪರಿಷತ್ ಸದಸ್ಯನಾಗುತ್ತಿರಲಿಲ್ಲ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಬೀದಿಬದಿ ವ್ಯಾಪಾರಿಗಳಿಗೆ ಪ್ರಸ್ತುತ ನೀಡುತ್ತಿರುವ 40 ಸಾವಿರ ರೂ. ವ್ಯಾಪಾರಕ್ಕೆ ಸಾಲುತ್ತಿಲ್ಲ. ಇದರಿಂದ ಸಾಲದ ಮೊತ್ತವನ್ನು ಒಂದು ಲಕ್ಷಕ್ಕೆ ಹೆಚ್ಚಳ ಮಾಡಬೇಕು. ಪಾಲಿಕೆಯ ಆದಾಯ ಹಾಗೂ ಸಿಎಸ್‌ಆರ್ ನಿಧಿಯಲ್ಲಿ ಮಹಿಳಾ ಸಬಲೀಕರಣ ಹಾಗೂ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಬಳಸಬೇಕು ಎಂದು ಸಲಹೆ ನೀಡಿದರು.

ವಸ್ತುಗಳ ಪ್ರದರ್ಶನ: ಸ್ವಸಹಾಯ ಸಂಘಗಳು ಉತ್ಪಾದಿಸಿರುವ ವಿವಿಧ ವಸ್ತು ಮಾರಾಟ ಹಾಗೂ ಪ್ರದರ್ಶನ ಏರ್ಪಡಿಸಲಾಗಿತ್ತು. ವರ್ಧಿನಿ ಗುಂಪು ಸಂಘದವರು ತಯಾರಿಸಿರುವ ಅಡಕೆ ತಟ್ಟೆ ತಯಾರಿಕೆ, ಶ್ರೀವೀರಾಂಜನೇಯಸ್ವಾಮಿ ಮಹಿಳಾ ಸ್ವಸಹಾಯ ಸಂಘದವರು ಉತ್ಪಾದಿಸಿದ ಕೃತಕ ಆಭರಣಗಳು, ಕುಂದನ್ ಡೆಕೋರೇಷನ್ ಐಟಮ್ಸ್, ಗೌರಿ ಅಲಂಕಾರದ ಮುಖವಾಡ, ದಸರಾ ಗೊಂಬೆ, ಹತ್ತಿ ಹಾರ, ಹಪ್ಪಳ, ಸಂಡಿಗೆ ಸೇರಿದಂತೆ ಇನ್ನಿತರ ಉತ್ಪನ್ನಗಳು ಪ್ರದರ್ಶನಕ್ಕಿಡಲಾಗಿತ್ತು.

ಆರೋಗ್ಯ ತಪಾಸಣೆ: ಪಾಲಿಕೆ ವತಿಯಿಂದ ಬೀದಿ ಬದಿ ವ್ಯಾಪಾರಿಗಳಿಗೆ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. ವಿವಿಧ ಆಸ್ಪತ್ರೆ ವೈದ್ಯರ ತಂಡ ಆಗಮಿಸಿ, ಬೀದಿ ಬದಿ ವ್ಯಾಪಾರಿಗಳ ಆರೋಗ್ಯ ತಪಾಸಣೆ ಮಾಡಿ, ಚಿಕಿತ್ಸೆ ನೀಡಿದರು.

ಕಾರ್ಯಕ್ರಮದಲ್ಲಿ ಉಪ ಮೇಯರ್ ಡಾ. ಎಂ.ಜಿ.ರೂಪ, ಸ್ಥಾಯಿ ಸಮಿತಿ ಅಧ್ಯಕ್ಷರಾದ ಹೆಚ್.ಎಂ.ಶಾಂತಕುಮಾರಿ, ಸವಿತಾ ರಮೇಶ್, ಆಡಳಿತ ಪಕ್ಷದ ನಾಯಕ ಮಾ.ವಿ. ರಾಮಪ್ರಸಾದ್, ಹೆಚ್ಚುವರಿ ಆಯುಕ್ತರಾದ ಎ.ಜಿ. ರೂಪ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಅತ್ಯುತ್ತಮ ಸಂಘಕ್ಕೆ ಪ್ರಶಸ್ತಿ

ಕಾರ್ಯಕ್ರಮದಲ್ಲಿ ಸಾಮಾಜಿಕ ಮತ್ತು ಕ್ರೋಢೀಕರಣ ಕಾರ್ಯಕ್ರಮದಡಿ 2023–24ನೇ ಸಾಲಿಗಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ ಶ್ರೀ ಅನ್ನಪೂರ್ಣೇಶ್ವರಿ ಸ್ತ್ರೀಶಕ್ತಿ ಸ್ವಸಹಾಯ ಗುಂಪು, ಶ್ರೀರಾಂಪುರ ಈ ಸ್ವಸಹಾಯ ಸಂಘಕ್ಕೆ ಫಲಕ ಮತ್ತು ಪ್ರಶಸ್ತಿ ಪತ್ರವನ್ನು ನೀಡಲಾಯಿತು. ಡೇ ನಲ್ಮ್ ಅಭಿಯಾನದ ಸ್ವಯಂ ಉದ್ಯೋಗ ಕಾರ್ಯಕ್ರಮದಡಿ ಗುಂಪು ಉದ್ಯಮ ಚಟುವಟಿಕೆ ಕೈಗೊಳ್ಳಲು ಮೂರು ಸ್ವಸಹಾಯ ಸಂಘಗಳಿಗೆ ತಲಾ 10 ಲಕ್ಷ ರೂ.ನಂತೆ 30 ಲಕ್ಷ ರೂ.ಗಳ ಸಾಲ ಮಂಜೂರಾತಿ ಪತ್ರವನ್ನು ಮಹಾಪೌರ ಶಿವಕುಮಾರ್ ವಿತರಿಸಿದರು. ಪ್ರಧಾನ ಮಂತ್ರಿ ಕಿರು ಆಹಾರ ಉದ್ದಿಮೆ ಯೋಜನೆಗಳಡಿ ಆಯ್ಕೆಯಾದ ಸ್ವಸಹಾಯ ಗುಂಪಿನ ಸದಸ್ಯರಿಗೆ ತಲಾ 40 ಸಾವಿರ ರೂ.ನಂತೆ ಚೆಕ್ ವಿತರಿಸಲಾಯಿತು.

✍ ಬಾಪುಲಿಂಗರಾಜ್ ಅರಸ್



ರಂಗಾಯಣದಲ್ಲಿ ಗ್ರಹಣದ ಛಾಯೆ

■ ನಿರ್ದೇಶಕರ ನೇಮಕಕ್ಕೆ ಕಾಂಗ್ರೆಸ್ ಸರ್ಕಾರ ಮೀನ-ಮೇಷ ■ ರಂಗ ಚಟುವಟಿಕೆಗಳಿಲ್ಲದೆ ಬಿಕೋ ಎನ್ನುತ್ತಿದೆ ರಂಗಸ್ಥಳ ■ ಈಗ ಎಲ್ಲಾ ವಿಚಾರದಲ್ಲೂ ಅಧಿಕಾರಿಗಳದೇ ಕಾರುಬಾರು ■ ಎಡ, ಬಲ ಪಂಥೀಯ ಮೇಲಾಟಗಳಿಂದ ನೈಜ ರಂಗಾಸಕ್ತರು ದೂರ... ದೂರ...

ಮೈಸೂರಿನ ರಂಗ ಸಂಸ್ಕೃತಿಯ ತಾಣ ರಂಗಾಯಣದಲ್ಲಿ ಗ್ರಹಣದ ಛಾಯೆ ಆವರಿಸಿದೆ ಎಂಬ ಚಿಂತೆ ರಂಗಾಸಕ್ತರಲ್ಲಿ ಮೂಡಿದೆ. ಪ್ರತಿ ದಿನ ಒಂದಲ್ಲ ಒಂದು ರಂಗ ಚಟುವಟಿಕೆ ನಡೆಯುತ್ತಿದ್ದ ರಂಗಾಯಣದಲ್ಲಿ ರಂಗಭೂಮಿಯ ಕಲರವವಿಲ್ಲದೆ ಈಗ ಬಿಕೋ ಎನ್ನುವ ವಾತಾವರಣ ನಿರ್ಮಾಣವಾಗಿದೆ. ರಂಗ ಚಟುವಟಿಕೆಗಳಿಗೆ ಚಾಲಕ ಶಕ್ತಿ ನಿರ್ದೇಶಕರನ್ನೇ ನೇಮಕ ಮಾಡದೆ ಸರ್ಕಾರ ಕಣ್ಮುಚ್ಚಿ ಕುಳಿತ್ತಿರುವುದರಿಂದ ರಂಗಾಯಣ ಈಗ ನಿದ್ರಾವಸ್ಥೆಗೆ ಜಾರಿದೆ. ಜೊತೆಗೆ ಎಡ ಹಾಗೂ ಬಲ ಪಂಥೀಯ ಮೇಲಾಟದಲ್ಲಿ ನಲುಗಿದೆ ಎಂಬ ನೋವು ರಂಗಾಸಕ್ತರಲ್ಲಿ ಮನೆ ಮಾಡಿದೆ.

ರಾಷ್ಟ್ರಕವಿ ಕುವೆಂಪು ಅವರ ಬರಹಕ್ಕೆ ಸ್ಫೂರ್ತಿಯ ನೆಲೆಯಾದ ಮೈಸೂರಿನ ಕುಕ್ಕರಹಳ್ಳಿ ಕೆರೆಗೆ ಹೊಂದಿಕೊಂಡಿರುವ ಹಸಿರು ವನದಲ್ಲಿ 1989ರಲ್ಲಿ ರಂಗಾಯಣ ಸ್ಥಾಪಿಸಲಾಯಿತು. ಹಿರಿಯ ರಂಗಕರ್ಮಿ ಬಿ.ವಿ.ಕಾರಂತರು ರಂಗಾಯಣದ ಸಂಸ್ಥಾಪಕ ನಿರ್ದೇಶಕರು. ಬಿ.ವಿ.ಕಾರಂತರ ಕನಸಿನ ಕೂಸಾದ ರಂಗಾಯಣ, ಹೊಸ ತಲೆಮಾರಿಗೆ ನಾಟಕದ ಮಹತ್ವವನ್ನು ಪರಿಚಯಿಸಿತು. ಸಿನಿಮಾ ಸೇರಿದಂತೆ ಹಲವು ರೀತಿಯ ಆಧುನಿಕ ಮನೋರಂಜನೆಯ ಪ್ರಭಾವವನ್ನು ಮೆಟ್ಟಿ ನಿಂತ ರಂಗಾಯಣ ನೈಜ ರಂಗ ಚಟುವಟಿಕೆ ಮೂಲಕ ಕೆಲವೇ ವರ್ಷದಲ್ಲಿ ಮನೆ ಮಾತಾಯಿತು. ನಾಟಕಗಳು ಇನ್ನೇನು ತೆರೆ ಮರೆಗೆ ಸರಿಯಿತು ಎಂಬ ಆತಂಕ ಎದುರಾಗಿದ್ದ ಸಮಯದಲ್ಲಿ ರಂಗಾಯಣ ರಂಗ ಉತ್ಸವಕ್ಕೆ ಮರು ಜೀವ ನೀಡಿತು.

ರಂಗಾಯಣದಲ್ಲಿ ಹಲವು ರೀತಿಯ ರಂಗ ಪ್ರಯೋಗಗಳು ದಿನ ನಿತ್ಯ ನಡೆಯುತ್ತಿತ್ತು. ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ರಂಗಾಯಣ ಪ್ರಖ್ಯಾತಿ ಹೊಂದಿತು. ರಂಗಾಯಣದ ಕಲಾವಿದರು ಅಮೆರಿಕಾ, ಇಂಗ್ಲೆಂಡ್, ಫ್ರಾನ್ಸ್ ಸೇರಿದಂತೆ ಹಲವು ದೇಶಗಳಲ್ಲಿ ರಂಗ ಪ್ರದರ್ಶನ ನೀಡುತ್ತಿದ್ದರು.


ಹವ್ಯಾಸಿ ರಂಗಭೂಮಿಯ ಹಲವು ಚಟುವಟಿಕೆಗಳು ಕೂಡ ರಂಗಾಯಣದಿಂದ ಮರು ಜೀವ ಪಡೆಯಿತು. ಬಿ.ವಿ.ಕಾರಂತರ ನಿರ್ದೇಶನದಲ್ಲಿ ಅದ್ಭುತ-ಅತ್ಯದ್ಭುತ ನಾಟಕಗಳು ಪ್ರದರ್ಶನಗೊಂಡವು. ಜೊತೆಗೆ ರಂಗ ತರಬೇತಿ ಶಿಬಿರಗಳು ಕೂಡ ಆರಂಭವಾದವು. ಬಿ.ವಿ.ಕಾರಂತರ ಅಮೋಘ ನಾಟಕ ಪರಿಕಲ್ಪನೆಯಿಂದ ದಿನ ಕಳೆದಂತೆ ರಂಗಾಯಣದ ಶಕ್ತಿ ವೃದ್ಧಿಗೊಳ್ಳುತ್ತಾ ಗಟ್ಟಿಯಾಗಿ ನೆಲೆಗೊಂಡಿತು. ಕಾರಂತರ ನಂತರ ರಂಗಾಯಣದ ನಿರ್ದೇಶಕರಾಗಿ ಬಂದವರು ಕೂಡ ರಂಗಾಯಣದ ಅಭಿವೃದ್ಧಿಗೆ ತಮ್ಮದೇ ಕೊಡುಗೆ ನೀಡಿದರು. ಬಸವಲಿಂಗಯ್ಯ, ಪ್ರಸನ್ನ, ಚಿದಂಬರರಾವ್ ಜಂಬೆ, ಜಯಶ್ರೀ, ಸುಮತಿ, ಬಿ.ವಿ.ರಾಜಾರಾಂ, ಜನಾರ್ಧನ್ (ಜನ್ನಿ), ಅಡ್ಡಂಡ ಕಾರ್ಯಪ್ಪ ನಿರ್ದೇಶಕರಾಗಿ ರಂಗಾಯಣದಲ್ಲಿ ಹಲವು ರಂಗ ಪ್ರಯೋಗಗಳನ್ನು ಮಾಡಿದರು.

ರಂಗಾಯಣಕ್ಕೆ ನಿರ್ದೇಶಕರನ್ನು ನೇಮಕ ಮಾಡಲು ರಂಗ ಸಮಾಜ ಸ್ಕ್ರೀನಿಂಗ್ ಕಮಿಟಿಯಾಗಿದೆ. ತಜ್ಞ ಕಲಾವಿದರು, ಸಾಹಿತಿಗಳು ಸದಸ್ಯರಾಗಿರುವ ರಂಗ ಸಮಾಜ, ರಂಗಾಯಣಕ್ಕೆ ನಿರ್ದೇಶಕರ ಆಯ್ಕೆ ಮಾಡಲು ಪ್ರಮುಖ ಪಾತ್ರ ವಹಿಸುತ್ತದೆ. ಬೀದರ್‌ನಿಂದ ಹಿಡಿದು ಚಾಮರಾಜನಗರದತನಕ ಎಲ್ಲಾ ಜಿಲ್ಲೆಗಳಲ್ಲಿ ಇರುವ ಸೃಜನಶೀಲ ಕಲಾವಂತಿಕೆಯ ಕಲಾವಿದರನ್ನು ರಂಗಾಯಣದ ನಿರ್ದೇಶಕನಾಗಿ ಆಯ್ಕೆ ಮಾಡಬಹುದು. ರಂಗ ಸಮಾಜ ಹೆಸರನ್ನು ಸರ್ಕಾರಕ್ಕೆ ಶಿಫಾರಸು ಮಾಡುತ್ತದೆ. ನಂತರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಕಾರ್ಯದರ್ಶಿ ಮಟ್ಟದ ಹಿರಿಯ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿ ರಂಗಾಯಣಕ್ಕೆ ನಿರ್ದೇಶಕರನ್ನು ಆಯ್ಕೆ ಮಾಡುತ್ತಾರೆ.

ಆದರೆ ಇತ್ತೀಚಿನ ವರ್ಷದಲ್ಲಿ ರಂಗಾಯಣಕ್ಕೆ ಪೂರ್ಣ ಪ್ರಮಾಣದ ನಿರ್ದೇಶಕರನ್ನು ನೇಮಕ ಮಾಡಲು ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿದೆ. ಒಂದು ಅವಧಿಗೆ ರಂಗಾಯಣಕ್ಕೆ ನಿರ್ದೇಶಕರನ್ನು ಆಯ್ಕೆ ಮಾಡಿ ಅವರ ಅವಧಿ ಮುಗಿದರೆ ಮತ್ತೊಬ್ಬ ನಿರ್ದೇಶಕರನ್ನು ನೇಮಕ ಮಾಡಲು ಸರ್ಕಾರ ಹತ್ತಾರು ತಿಂಗಳ ಸಮಯ ತೆಗೆದುಕೊಳ್ಳುತ್ತದೆ. ಈ ಅವಧಿಯಲ್ಲಿ ರಂಗಾಯಣದ ಬಹುತೇಕ ಚಟುವಟಿಕೆಗಳು ಸ್ಥಗಿತವಾಗುತ್ತಿವೆ. ಈಗ ಮೈಸೂರು ರಂಗಾಯಣದಲ್ಲಿ ಇದೇ ಪರಿಸ್ಥಿತಿ ನಿರ್ಮಾಣವಾಗಿದೆ. ಬದಲಾದ ಸರ್ಕಾರದ ಹಿನ್ನೆಲೆಯಲ್ಲಿ ರಂಗಾಯಣದ ನಿರ್ದೇಶಕರಾಗಿದ್ದ ಅಡ್ಡಂಡ ಕಾರ್ಯಪ್ಪ ರಾಜೀನಾಮೆ ನೀಡಿದ ನಂತರ ತೆರವಾದ ನಿರ್ದೇಶಕ ಸ್ಥಾನಕ್ಕೆ ಈ ತನಕ ಸರ್ಕಾರ ಯಾರನ್ನೂ ನೇಮಕ ಮಾಡಿಲ್ಲ. ರಂಗಾಯಣಕ್ಕೆ ಪೂರ್ಣ ಪ್ರಮಾಣದ ನಿರ್ದೇಶಕರು ಇಲ್ಲದ ಕಾರಣ ಕನ್ನಡ ಮತ್ತು ಸಂಸ್ಕೃತಿ ಸಚಿವರೇ ಇದರ ಹೊಣೆ ಹೊತ್ತಿದ್ದಾರೆ. ಮೈಸೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕರು ಇಲ್ಲಿನ ಕಾರ್ಯಭಾರ ನೋಡಿಕೊಳ್ಳುತ್ತಾರೆ. ಈ ವೇಳೆ ಯಾವುದೇ ತೀರ್ಮಾನ ಕೈಗೊಳ್ಳಬೇಕಿದ್ದರೂ ಇಲ್ಲಿನ ಅಧಿಕಾರಿಗಳು ಬೆಂಗಳೂರಿನಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಸಚಿವರ ಬಳಿ ಹೋಗಬೇಕು. ರಾಜಕೀಯ ಒತ್ತಡದ ಸನ್ನಿವೇಶದಿಂದ ಸಚಿವರು ಬೆಂಗಳೂರಿನಲ್ಲಿ ಸಿಗದಿದ್ದರೆ ಅಧಿಕಾರಿಗಳು ಬರಿಗೈಯಲ್ಲಿ ಬರಬೇಕು. ಸಚಿವರು ಅಂತಿಮ ಮುದ್ರೆ ಒತ್ತದಿದ್ದರೆ ಯಾವುದೇ ಕೆಲಸ ಕಾರ್ಯಗಳು ನಡೆಯುವಂತಿಲ್ಲ. ಈ ಕಾರಣದಿಂದ ಮೈಸೂರಿನ ರಂಗಾಯಣದಲ್ಲಿ ಬಹುತೇಕ ರಂಗ ಚಟುವಟಿಕೆಗಳು ಸ್ಥಗಿತವಾಗಿದೆ.

ಹಾಗಂತ ರಂಗಾಯಣದಲ್ಲಿ ನಾಟಕಗಳು ನಡೆಯುತ್ತಿಲ್ಲ ಎಂದು ಅರ್ಥವಲ್ಲ. ವಾರಕ್ಕೆ ಒಂದೋ... ಎರಡೋ... ನಾಟಕ ನಡೆಯಬಹುದು. ಆದರೆ ನಿರ್ದೇಶಕರು ಇರುವಾಗ ನಡೆಯುತ್ತಿದ್ದಷ್ಟು ರಂಗ ಚಟುವಟಿಕೆಗಳು ನಡೆಯುತ್ತಿಲ್ಲ. ರಂಗಾಯಣ ಸ್ವಾಯತ್ತ ಸಂಸ್ಥೆಯಾಗಿದ್ದು, ನಿರ್ದೇಶಕರಾಗಿ ಆಯ್ಕೆಯಾದವರು ತಮ್ಮ ವಿವೇಚನಾಧಿಕಾರದಿಂದ ಹಲವು ರಂಗ ಪ್ರಯೋಗಗಳನ್ನು ಮಾಡುತ್ತಾರೆ. ಆದರೆ ಅಧಿಕಾರಿಗಳಿಗೆ ಅಂತಹ ವಿವೇಚನಾಧಿಕಾರವಿಲ್ಲದೆ ಸರ್ಕಾರದ ನೀತಿ ನಿಯಮದ ಮಿತಿಯಲ್ಲೇ ಕೆಲಸ ಮಾಡಬೇಕು. ಇದರಿಂದ ಅಧಿಕಾರಿಗಳು ಆಡಳಿತಾತ್ಮಕವಾದ ಕೆಲಸ ಮಾಡುತ್ತಿದ್ದಾರೆಯೇ ಹೊರತು ಪರಿಣಾಮಕಾರಿ ರಂಗ ಚಟುವಟಿಕೆಗಳನ್ನು ನಡೆಸುತ್ತಿಲ್ಲ. ಈ ಕಾರಣದಿಂದ ಮೈಸೂರಿನ ರಂಗಾಯಣ ಈಗ ಮಂಕಾಗಿದೆ. 1989 ರಲ್ಲಿ ರಂಗಾಯಣ ಸ್ಥಾಪನೆ ಆಗಿದ್ದ ವೇಳೆ 27 ರಂಗ ಕಲಾವಿದರು ಸರ್ಕಾರದ ನೌಕರರಾಗಿದ್ದರು. ಆಗ ಅವರಿಗೆ ಜವಾಬ್ದಾರಿ, ಸರ್ಕಾರದ ನೀತಿ ನಿಯಮದ ಲಕ್ಷ್ಮಣ ರೇಖೆ ಇತ್ತು. ಸರ್ಕಾರದ ನಿಯಮಗಳಿಗೆ ಅನುಸಾರವಾಗಿ ರಂಗಾಯಣದ ಶ್ರೇಯೋಭಿಲಾಷೆಗೆ ತಕ್ಕಂತೆ ಹಲವು ರಂಗ ಪ್ರಯೋಗಗಳನ್ನು ನಡೆಸುತ್ತಿದ್ದರು. ಆದರೆ ಈಗ ಕೆಲವರು ನಿವೃತ್ತಿಯಾಗಿದ್ದು, ಇನ್ನು ಕೆಲವರು ರಾಜೀನಾಮೆ ನೀಡಿದ್ದಾರೆ. ಇದರಿಂದ ಈಗ ಕೇವಲ 7 ಕಲಾವಿದರು ರಂಗಾಯಣದಲ್ಲಿ ಇದ್ದಾರೆ. ಇದರಿಂದ ಹೊರಗಿನ ಹವ್ಯಾಸಿ ಕಲಾವಿದರನ್ನೇ ರಂಗಾಯಣಕ್ಕೆ ಕರೆಸಿ ರಂಗ ಪ್ರಯೋಗಗಳನ್ನು ಮಾಡಬೇಕಿದೆ. ಜಾತಿ, ಧರ್ಮದ ಸೋಗಿಲ್ಲದೆ ರಂಗ ಚಟುವಟಿಕೆಗಳಿಗೆ ಸೀಮಿತವಾಗಿದ್ದ ರಂಗಾಯಣದಲ್ಲಿ ಇತ್ತೀಚೆಗೆ ಎಡ ಹಾಗೂ ಬಲ ಪಂಥೀಯ ಮೇಲಾಟ ಆರಂಭವಾಗಿದೆ. ಹವ್ಯಾಸಿ ಕಲಾವಿದರೇ ಹೆಚ್ಚಾಗಿ ರಂಗ ಪ್ರಯೋಗ ಮಾಡುವ ಈ ರಂಗಾಯಣದಲ್ಲಿ ಈಗ ಒಡಕು ಮೂಡಿದೆ. ಎಡ ಪಂಥೀಯರು ತಮ್ಮದೇ ದೃಷ್ಟಿಕೋನದಲ್ಲಿ ವಾದ ಮಾಡಿದರೆ, ಬಲ ಪಂಥೀಯರು ಅದಕ್ಕೆ ಪ್ರತಿವಾದ ಮಂಡಿಸುತ್ತಿದ್ದಾರೆ. ಇದು ಸಹಜವಾಗಿಯೇ ರಂಗ ಚಟುವಟಿಕೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ನಾಟಕಕ್ಕೆ ಯಾವುದೇ ಜಾತಿ, ಧರ್ಮದ ಸೋಂಕಿಲ್ಲ. ಆದರೆ ಈಗ ರಂಗಾಯಣದಲ್ಲಿ ನಡೆಯುತ್ತಿರುವ ಎಡ, ಬಲ ಪಂಥೀಯ ಕಲಹದಲ್ಲಿ ನಾಟಕಗಳು ಕೂಡ ಒಂದೊಂದು ಪಂಥದ ಸಿದ್ಧಾಂತದ ನೆಲೆಗಟ್ಟಿನ ಮೇಲೆ ಪ್ರದರ್ಶನಗೊಳ್ಳುತ್ತಿವೆ. ಅವರವರ ಭಾವಕ್ಕೆ ತಕ್ಕಂತೆ ನಾಟಕ ವೀಕ್ಷಿಸುವ ಧೋರಣೆ ಅನುಸರಿಸಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಎಡ ಹಾಗೂ ಬಲ ಪಂಥೀಯ ಗೊಡವೆ ಬೇಡವೆನ್ನುವ ರಂಗಾಸಕ್ತರು ರಂಗಾಯಣದಿಂದ ದೂರ ಸರಿಯುತ್ತಿದ್ದಾರೆ.

ರಂಗಾಯಣದ ಇತಿಹಾಸದಲ್ಲಿ ಬಹಳ ದುರಂತದ ಸನ್ನಿವೇಶವೆಂದರೆ ಪೊಲೀಸರ ಸರ್ಪಗಾವಲಿನಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಿರುವುದು. ಯಾವುದೇ ಸಣ್ಣ ಲೋಪವೂ ಇಣುಕದ ರಂಗಾಯಣದಲ್ಲಿ ಈಗ ಖಾಕಿ ಸರ್ಪಗಾವಲಲ್ಲಿ ನಾಟಕ ನಡೆಸಬೇಕಾದ ಪರಿಸ್ಥಿತಿ ಬಂದಿದೆ. ಈ ಎಲ್ಲಾ ಲೋಪ ದೋಷದಿಂದ ರಂಗಾಯಣ ವನ್ನು ಮುಕ್ತ ಮಾಡಲು ಸರ್ಕಾರ ಅವಶ್ಯವಾಗಿ ಹಲವು ಸುಧಾರಣೆಗಳನ್ನು ತರಬೇಕಿದೆ. ರಂಗಾಯಣಕ್ಕೆ ನಿರ್ದೇಶಕರಾಗಿ ಆಯ್ಕೆ ಆಗುವವರು ಎಡ, ಬಲ ಪಂಥೀಯ ವಾದದವರಾಗಿರಬಾರದು. ರಂಗಾಯಣಕ್ಕೆ ಖಾಯಂ ಕಲಾವಿದರ ನೇಮಕವಾಗಬೇಕು. ಹೀಗೆ ಹಲವು ಸುಧಾರಣೆಗಳನ್ನು ತರದಿದ್ದರೆ ರಂಗಾಯಣ ನೈಜ ರಂಗಸ್ಥಳವಾಗದು ಎಂದು ಕಲಾಸಕ್ತರು ಅಭಿಪ್ರಾಯಪಟ್ಟಿದ್ದಾರೆ.



ರಂಗಾಯಣಕ್ಕೆ ನಿರ್ದೇಶಕರ ಆಯ್ಕೆ ಮಾಡದೆ ಇರುವುದು ಅಧಿಕಾರಿಗಳಿಗೆ ಖುಷಿಯಾಗಿದೆ. ಇನ್ನು ಒಂದು ವರ್ಷ ಹಾಗೆ ಖಾಲಿ ಬಿಟ್ಟರೆ ಅವರಿಗೆ ಮತ್ತಷ್ಟು ಸಂತೋಷವಾಗುತ್ತದೆ. ನಾನು ರಂಗಾಯಣಕ್ಕೆ ಬಂದಾಗ 20 ಲಕ್ಷ ಹಣ ಇತ್ತು. ನಾಟಕ ಪ್ರದರ್ಶನ ಸೇರಿದಂತೆ ಹಲವು ಮೂಲದಿಂದ ಈಗ ನಾನು 4.50 ಕೋಟಿ ಹಣ ಇಟ್ಟು ಬಂದಿದ್ದೇನೆ. ಹೀಗಿರುವಾಗ ರಂಗಾಯಣಕ್ಕೆ ನಿರ್ದೇಶಕರ ನೇಮಕವಾಗದಿದ್ದರೂ ಚಿಂತೆ ಇಲ್ಲದೆ ಅಧಿಕಾರಿಗಳು ರಂಗಾಯಣ ನಡೆಸುತ್ತಾರೆ.

– ಅಡ್ಡಂಡ ಕಾರ್ಯಪ್ಪ, ರಂಗಾಯಣದ ಮಾಜಿ ನಿರ್ದೇಶಕ



ಮೈಸೂರಿನ ರಂಗಾಯಣಕ್ಕೆ ಪೂರ್ಣ ಪ್ರಮಾಣದ ನಿರ್ದೇಶಕರು ಇಲ್ಲದ ಕಾರಣ ರಂಗ ಚಟುವಟಿಕೆಗಳು ಸ್ಥಗಿತವಾಗಿವೆ. ನಿರ್ದೇಶಕರು ಇಲ್ಲದ ಕಾರಣ ಅಧಿಕಾರಿಗಳು ಇತಿಮಿತಿಯಲ್ಲಿ ಆಡಳಿತಾತ್ಮಕವಾಗಿ ಕೆಲಸ ಮಾಡುತ್ತಾರೆ. ಆದರೆ ಸಾಂಸ್ಕೃತಿಕ ಸಂಸ್ಥೆಯಾಗಿ ರಂಗಾಯಣದಲ್ಲಿ ಯಾವ ರಂಗ ಚಟುವಟಿಕೆ ನಡೆಯಬೇಕೋ ಅದು ನಡೆಯುತ್ತಿಲ್ಲ. ರಂಗಾಯಣ ಸೃಜನಾತ್ಮಕ ಪರಿಕಲ್ಪನೆಯ ತಳಹದಿಯ ಮೇಲೆ ನಿಂತಿರುವ ಸಂಸ್ಥೆ. ರಂಗಾಯಣದಲ್ಲಿ ಕ್ರಿಯಾತ್ಮಕವಾಗಿ ಪ್ರತಿ ದಿನ ಹೊಸ ಆಯಾಮಗಳಲ್ಲಿ ರಂಗ ಚಟುವಟಿಕೆಗಳು ನಡೆಯಬೇಕು. ಸ್ವತಃ ಕಲಾವಿದನಾಗಿರುವ ನಿರ್ದೇಶಕನಿಗೆ ಮಾತ್ರ ಇಂತಹ ಕಲಾತ್ಮಕ ಚಟುವಟಿಕೆಗಳನ್ನು ಸೃಜನಶೀಲತೆಯಿಂದ ತೆರೆ ಮೇಲೆ ತರಲು ಸಾಧ್ಯ. ಆದರೆ ಅಧಿಕಾರಿಗಳಿಗೆ ಇದು ಸಾಧ್ಯವಾಗುವುದಿಲ್ಲ. ಆ ಕಾರಣದಿಂದ ರಂಗಾಯಣಕ್ಕೆ ಪೂರ್ಣ ಪ್ರಮಾಣದ ನಿರ್ದೇಶಕರ ಅವಶ್ಯಕತೆ ಇದೆ. ಈ ಕಾರಣದಿಂದ ಸರ್ಕಾರ ನಿರ್ದೇಶಕರ ಸ್ಥಾನವನ್ನು ಖಾಲಿ ಬಿಡುವುದು ಸರಿಯಲ್ಲ. ರಂಗಾಯಣ ಸಂಬಂಧಗಳನ್ನು ಕಟ್ಟುವ ಕೆಲಸ ಮಾಡುತ್ತದೆಯೇ ಹೊರತು, ಸಂಬಂಧಗಳಲ್ಲಿ ಬಿರುಕು ಮೂಡಿಸುವುದಲ್ಲ. ಈ ಪರಿಕಲ್ಪನೆಯಿಂದಲೇ ರಂಗಾಯಣ ಸ್ಥಾಪನೆ ಆಯಿತು. ಆದರೆ ಎಡ ಮತ್ತು ಬಲ ಪಂಥೀಯ ವಾದದಲ್ಲಿ ಜಗಳ ಮಾಡುವುದು ಸರಿಯಲ್ಲ.

–ಜನಾರ್ಧನ (ಜನ್ನಿ)– ರಂಗಾಯಣದ ಮಾಜಿ ನಿರ್ದೇಶಕ



ರಂಗಾಯಣದಲ್ಲಿ ನಿರ್ದೇಶಕರು ಇಲ್ಲದಿದ್ದರೂ ರಂಗ ಚಟುವಟಿಕೆಗಳು ನಿಂತಿಲ್ಲ. ರಂಗಾಯಣದಲ್ಲಿರುವ ಕಲಾವಿದರು ಸೇರಿದಂತೆ ಹವ್ಯಾಸಿ ರಂಗಕರ್ಮಿಗಳ ಮೂಲಕ ಹಲವು ನಾಟಕಗಳನ್ನು ಪ್ರದರ್ಶನ ಮಾಡುತ್ತೇವೆ. ಸರ್ಕಾರದ ಕ್ರಿಯಾ ಯೋಜನೆಯಂತೆ ರಂಗಾಯಣದಲ್ಲಿ ಕಲಾತ್ಮಕ ಹಾಗೂ ಆಡಳಿತಾತ್ಮಕ ಚಟುವಟಿಕೆ ನಡೆಯುತ್ತಿದೆ. ಕಳೆದ ಮೂರು ತಿಂಗಳಲ್ಲಿ ನಿರ್ದೇಶಕರಿಲ್ಲದಿದ್ದರೂ ರಂಗಾಯಣದಲ್ಲಿ ಎಲ್ಲಾ ಕಾರ್ಯಗಳು ಸುಸೂತ್ರವಾಗಿ ನಡೆಯುತ್ತಿವೆ.

– ನಿರ್ಮಲಾ ಮಠಪತಿ, ಉಪ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ




ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಂಗಾಯಣಕ್ಕೆ ನಿರ್ದೇಶಕರನ್ನು ನೇಮಕ ಮಾಡಬೇಕು. ಈ ಪ್ರಕ್ರಿಯೆ ಸರ್ಕಾರದ ಮಟ್ಟದಲ್ಲಿ ನಡೆಯುತ್ತಿದೆ. ರಂಗಾಯಣದಲ್ಲಿ ನಿರ್ದೇಶಕರು ಇಲ್ಲವೆಂದ ಮಾತ್ರಕ್ಕೆ ಅಲ್ಲಿನ ಚಟುವಟಿಕೆಗಳು ನಿಂತಿಲ್ಲ. ರಂಗಾಯಣಕ್ಕೆ ಸಂಬಂಧಿಸಿದಂತೆ ಯಾವುದೇ ಆಡಳಿತಾತ್ಮಕ ವಿಚಾರಗಳ ಫೈಲ್‌ಗಳು ನನ್ನ ಬಳಿಗೆ ಬಂದರೆ ಕೂಡಲೇ ಕ್ಲಿಯರ್ ಮಾಡಿ ಕಳುಹಿಸುತ್ತೇನೆ. ಇದೇ ಆ.30 ರಂದು ಮೈಸೂರಲ್ಲಿ ರಂಗಾಯಣ ಸೇರಿದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸುತ್ತೇನೆ.– **ಶಿವರಾಜ ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಸಚಿವ**

ಮಕ್ಕಳ ಚಿತ್ರಕಥೆ

ಏಳು ಮೇಲೆ... ಏನಾದರು ಕೆಲಸ ಮಾಡು ಹೋಗು...!


–ಹೆಚ್.ಜಿ.ಎನ್.ಪ್ರಸಾದ್, ಮೊ:9845376199



ಸ್ವಾಮಿ ವಿವೇಕಾನಂದರ ಒಬ್ಬ ಶಿಷ್ಯ, ಪರಮ ಸೋಮಾರಿ. ಏನೊಂದು ಕೆಲಸ ಮಾಡದೆ ಸಿಕ್ಕಿದ್ದನ್ನು ತಿಂದುಕೊಂಡು ಕುಂಭಕರ್ಣನಂತೆ ಮಲಗಿರುತ್ತಿದ್ದ. ಇದನ್ನು ನೋಡಿ, ನೋಡಿ ಸ್ವಾಮಿ ವಿವೇಕಾನಂದರಿಗೆ ಬಹಳ ಬೇಸರವಾಗಿತ್ತು.




ಒಂದು ದಿನ ವಿವೇಕಾನಂದರಿಗೆ ತಡೆಯಲಾರದ ಕೋಪ ಬಂದು, ಮಲಗಿದ್ದ ಆತನನ್ನು ಎಬ್ಬಿಸಿ,"ಏಳು ಮೇಲೆ...ಏನಾದರು ಕೆಲಸ ಮಾಡು ಹೋಗು...!" ಎಂದು ಗದರಿಸಿದರು.




ಗಾಬರಿಗೊಂಡ ಆ ಶಿಷ್ಯ,"ಏನೂಂತ ಮಾಡಲಿ ಗುರುಗಳೇ... ನನಗೆ ಏನೂ ಬರೋದಿಲ್ಲ..!" ಎಂದ. ಅದಕ್ಕೆ ಸ್ವಾಮಿ ವಿವೇಕಾನಂದರು "ಏ...ಮೂರ್ಖ, ನನ್ನ ಬಳಿ ಈಗ ಏನು ಹೇಳಿದೆಯೋ ಅದನ್ನೇ ಹೋಗಿ ಜಗತ್ತಿನೆದುರು ಹೇಳು, ಏನಾದರು ಒಳ್ಳೆಯದಾಗಬಹುದು...!" ಎಂದರು.



ಆದರೆ ಆ ಸೋಮಾರಿ ಶಿಷ್ಯ ಅಷ್ಟೇ ನಿರ್ಲಕ್ಷ್ಯದಿಂದ, "ಏನೂಂತ ಹೇಳಲಿ ಗುರುಗಳೆ...?" ಎಂದು ಕೇಳಿದ.



ಆಗ ಸ್ವಾಮಿ ವಿವೇಕಾನಂದರು ಹೇಳಿದರು, "ನನಗೆ ಏನೂ ಬರೋದಿಲ್ಲಾ... ನಾವು ಬರುವಾಗ ಏನೂ ತಂದಿಲ್ಲ, ಹೋಗುವಾಗ ನಮ್ಮ ಜೊತೆ ಏನೂ ಬರುವುದಿಲ್ಲ...ಎಂದು ಹೇಳುತ್ತಾ ಹೋಗು..!" ಎಂದರು.



ಅವರ ಈ ಮಿಂಚಿನ ವಾಣಿ, ಆ ಸೋಮಾರಿ ಶಿಷ್ಯನನ್ನು ಯಾವಮಟ್ಟದಲ್ಲಿ ಪರಿವರ್ತಿಸಿತು ಎಂದರೆ, ಕೆಲವೇ ದಿನಗಳಲ್ಲಿ ಆತ ಜಗತ್ತಿಗೆ "ವೇದಾಂತ" ಬೋಧಿಸಲು ಆರಂಭಿಸಿಬಿಟ್ಟ...!.



ವಾರಭವಿಷ್ಯ

20.8.2023 ರಿಂದ 26.8.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ :– ರವಿ–ಸಿಂಹ, ಚಂದ್ರ ಕನ್ಯಾ, ತುಲಾ, ವೃಶ್ಚಿಕ, ಕುಜ–ಕನ್ಯಾ, ಬುಧ–ಸಿಂಹ, ಗುರು–ಮೇಷ, ಶುಕ್ರ–ಕಟಕ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ನಿಮ್ಮ ಅನಿರೀಕ್ಷಿತ ನಡವಳಿಕೆಯಿಂದ ಕುಟುಂಬ ಸದಸ್ಯರಲ್ಲಿ ಸಾಮರಸ್ಯದ ಕೊರತೆ. ಸ್ವಯಂಕೃತಾಪರಾಧಗಳಿಂದ ಚಿಂತೆಗೆ ಗುರಿಯಾಗುವಿರಿ. ವಾರ ಮಧ್ಯಾನಂತರ ಸ್ನೇಹಿತರ ಸಹಾಯ, ಧಾನ್ಯ ವ್ಯಾಪಾರಿಗಳಿಗೆ ಹೆಚ್ಚಿನ ಧನಲಾಭ. ಸರ್ಕಾರಿ ನೌಕರರಿಗೆ ಸ್ಥಾನ ಪಲ್ಲಟ, ಊಟೋಪಚಾರಕ್ಕೆ ತೊಂದರೆ. ಆತುರದಿಂದ ಮಾಡುವ ಕೆಲಸ ಎಡವಟ್ಟಾದೀತು. ಮನೆ ಆಳುಗಳನ್ನು ನಂಬದಿರಿ.

ಶ್ರೀ ವಿನಾಯಕ ಪೂಜೆ. ಶುಭ ಸಂಖ್ಯೆ–9.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ಆರ್ಥಿಕ ಅಡಚಣೆಗಳಿಂದ ಪಾರು ಮಾಡಲು ಗುರುಗ್ರಹದ ಕೃಪೆಯಿದೆ. ಜೊತೆಗೆ ಹೊಸ ಆದಾಯ ಮೂಲಗಳು ಹೆಚ್ಚುವುದು. ನೂತನ ವಾಹನ ಖರೀದಿಸುವ ಯೋಗವಿದೆ. ಸಮಯಪ್ರಜ್ಞೆ ಮರೆದು ಕೆಲಸ ಕಾರ್ಯಗಳನ್ನು ಸಾಧಿಸಿಕೊಳ್ಳುವಿರಿ. ಆರೋಗ್ಯದಲ್ಲಿ ವ್ಯತ್ಯಯ ಉಂಟಾದರೂ ಸುಧಾರಿಸಿಕೊಳ್ಳುವಿರಿ. ವಾರದ ಕಡೆಗೆ ಪುಣ್ಯ ಕ್ಷೇತ್ರ ಸಂದರ್ಶನದಿಂದ ಧನ್ಯಾತಾ ಭಾವ.

ಶ್ರೀ ಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ–5.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

'ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯರು ಹೇಳಿದ್ದು ಹಾಲು ಅನ್ನ' ಎಂಬಂತೆ ಎಲ್ಲವೂ ಸಾಗಿದೆ. ತಾಳ್ಮೆಯಿಂದ ವೈಯಕ್ತಿಕ ಹಾಗೂ ಸಾಮಾಜಿಕ ಕೆಲಸಗಳನ್ನು ಸಂಪನ್ನಗೊಳಿಸಿಕೊಳ್ಳಿ. ಐಹಿಕ, ಸುಖಭೋಗಗಳು ನಿಮ್ಮನ್ನು ಅರಸಿ ಬರುವುದು. ನಿಮ್ಮ ಪ್ರತಿಜ್ಞೆಯನ್ನು ಪಾಲನೆ ಮಾಡಿ. ಮೆಚ್ಚುಗೆಗೆ ಪಾತ್ರರಾಗುವಿರಿ. ಮನೆಯಲ್ಲಿ ಪ್ರೀತಿ ವಾತ್ಸಲ್ಯದಿಂದ ಸಮಯ ಸಾಗುವುದು.

ಶ್ರೀ ವಿಷ್ಣು ಅರ್ಚನೆ. ಶುಭ ಸಂಖ್ಯೆ–5.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಹೊಂದಿಕೊಂಡು ಹೋದರೆ ಬದುಕೇ ಹೊನ್ನಾರು. ನಿಮ್ಮ ಶಕ್ತಿ ಸಾಮರ್ಥ್ಯಗಳು ಸದ್ವಿನಿಯೋಗವಾಗಲು ಇನ್ನೂ ಸ್ವಲ್ಪ ಸಮಯ ಕಾಯಬೇಕು. ಪ್ರೀತಿ, ಪ್ರಣಯ ವಿಷಯಗಳಲ್ಲಿ ನಿರಾಶೆಯನ್ನು ಹೊಂದಬೇಕಾಗುತ್ತದೆ. ವಾರ ಮಧ್ಯಾನಂತರ ನಿರೀಕ್ಷಿಸಿದ ಹಣ ಕೈಗೆ ಬರುವುದು. ಒಡವೆ, ವಸ್ತುಗಳ ಖರೀದಿಯಿಂದ ಗೃಹಿಣಿಗೆ ಸಂಭ್ರಮ. ಆತುರದ ವಾಹನ ಚಾಲನೆಯಿಂದ ಸಂಕಷ್ಟಗಳು ಎದುರಾಗುವುದು.

ಶ್ರೀ ಸಪ್ತಮಾತೃಕಾದೇವಿ ದರ್ಶನ. ಶುಭ ಸಂಖ್ಯೆ–8.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಸಪ್ತಾಹದ ಆದಿಗೆ ಹಲವು ರೀತಿಯಿಂದ ದ್ರವ್ಯ ಲಾಭ, ಸಾಂಸಾರಿಕ ಉನ್ನತಿ ದೀರ್ಘಕಾಲದಿಂದ ಬಾಕಿ ಇದ್ದ ಕೆಲಸ ಕಾರ್ಯಗಳು ಮುಕ್ತಾಯವಾಗಿ ಸಮಾಧಾನ ತರಲಿದೆ. ವೃತ್ತಿ ರಂಗದಲ್ಲಿ ಬರುವ ಹೊಸ ಅವಕಾಶಗಳು ನಿಮ್ಮ ಯಶಸ್ಸಿಗೆ ಸಾಧನವಾಗುತ್ತದೆ. ಇದರ ನಡುವೆಯೇ ಆಸ್ಪತ್ರೆ ಖರ್ಚುಗಳು ಎದುರಾಗುವ ಸಂಭವ. ಶ್ರೀಮತಿಯ ಸಹಮತವಿಲ್ಲದೇ ಕೆಲಸಗಳನ್ನು ಮಾಡುವುದರಿಂದ ಮನೆಯಲ್ಲಿ ಅಶಾಂತಿ.

ಶ್ರೀ ಸೂರ್ಯನಾರಾಯಣ ಸ್ತುತಿ. ಶುಭ ಸಂಖ್ಯೆ–4.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದಾರಂಭಕ್ಕೆ ಯತ್ನ ಕಾರ್ಯಗಳಲ್ಲಿ ವಿಘ್ನಗಳು ಉಂಟಾಗಿ ಖಿನ್ನತೆಯನ್ನು ಅನುಭವಿಸುವಿರಿ. ಮನೆಯಲ್ಲಾಗಲೀ, ಹೊರಗೆ ಆಗಲಿ ನಿಷ್ಠೂರದ ಮಾತುಬೇಡಿ. ವಾರ ಮಧ್ಯೆ ಹಲವು ಮೂಲಗಳಿಂದ ಉತ್ತಮ ಆದಾಯ ಪ್ರಾಪ್ತವಾಗಲಿದೆ. ಪ್ರೀತಿ–ಪ್ರೇಮ ವಿಷಯಗಳಲ್ಲಿ ಸಕಾರಾತ್ಮಕ ಫಲಿತಾಂಶವನ್ನು ಕಾಣುವಿರಿ. ಬೃಹತ್ ಉದ್ದಿಮೆದಾರರಿಗೆ ನೌಕರ ವರ್ಗದವರ ಸಹಕಾರದಿಂದ ಉತ್ತಮ ಆದಾಯ.

ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–7.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಉದ್ಯೋಗ ಕ್ಷೇತ್ರದಲ್ಲಿ ಅನಿರೀಕ್ಷಿತ ರೂಪದಲ್ಲಿ ಹೆಚ್ಚು ಲಾಭ ತರುವ ಆರ್ಡರ್‌ಗಳು ದೊರಕುವ ಸಾಧ್ಯತೆ ಇದೆ. ಸಮಾಜ ಸೇವಕರಿಗೆ ಗೌರವ, ಪ್ರಶಸ್ತಿಗಳು ದೊರಕುವ ಸಂಭವವಿದೆ. ಯುವಕ–ಯುವತಿಯರಿಗೆ ಪ್ರೇಮಾಂಕುರವಾಗಬಹುದು. ಅವಿವಾಹಿತರಿಗೆ ಸೂಕ್ತ ವಧು–ವರ ಕೂಡಿ ಬರಲಿದೆ. ಗುರುಬಲವಿದೆ. ನಿವೇಶನ, ಮನೆ ಹೊಂದಲು ಪ್ರಯತ್ನಿಸಬಹುದು. ಸ್ನಾಯು ಸೆಳೆತ ಕಾಡುವುದು.

ಶ್ರೀ ಸರ್ವಮಂಗಳ ಸ್ತೋತ್ರ ಜಪಿಸಿ. ಶುಭ ಸಂಖ್ಯೆ–1.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ವಾರದ ಆದಿಗೆ ವೈಯಕ್ತಿಕ ಆಶಾಭಾವನೆಗಳು ಕೈಗೂಡಲು ಚಂದ್ರಗ್ರಹದ ಶುಭ ಸಂಚಾರದ ದ್ಯೋತಕವಾಗಿದೆ. ಸಾಮಾಜಿಕ ವ್ಯವಹಾರಗಳಲ್ಲಿ ಕಂಡು ಬರುವ ಅಡ್ಡಿ ಆತಂಕಗಳನ್ನು ಬುದ್ಧಿವಂತಿಕೆಯಿಂದ ನಿವಾರಿಸಿಕೊಳ್ಳುವಿರಿ. ಭೂಮಿ ಕೃಷಿ ವ್ಯವಹಾರಗಳಲ್ಲಿ ಯಶಸ್ಸು ಉಂಟಾಗುತ್ತದೆ. ಸರ್ಕಾರಿ ನೌಕರರಿಗೆ ಮೇಲಧಿಕಾರಿಗಳ ವಕ್ರದೃಷ್ಟಿ ಹಾಗೂ ತನಿಖಾ ಅಧಿಕಾರಿಗಳಿಂದ ತೊಂದರೆ ಎದುರಿಸಬೇಕಾಗುತ್ತದೆ.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–6.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಬೃಹಸ್ಪತಿಯು ಶುಭ ಭಾವದಲ್ಲಿ ಸಂಚರಿಸುತಲಿದ್ದು ಜೀವನದಲ್ಲಿ ಬದಲಾವಣೆ ಹಾಗೂ ದೃಢತೆಗಳು ಬಲಗೊಳ್ಳಲಿವೆ. ಮಕ್ಕಳ ವಿಷಯದಲ್ಲಿ ಸಂತೋಷ ವಾರ್ತೆ ಇರುತ್ತದೆ. ಹಣಕಾಸಿನ ಸ್ಥಿತಿ ಸುಧಾರಿಸಿ, ಯತ್ನ ಕಾರ್ಯಗಳು ದಡ ಸೇರುವುದು. ಸಾಂಸಾರಿಕ ತಾಪತ್ರಯಗಳು ಉಪಶಮನವಾಗುತ್ತದೆ. ಮನೆಯಲ್ಲಿ ದೇವತಾಕಾರ್ಯ, ಮಂಗಳ ಕಾರ್ಯಗಳು ನಡೆದೀತು. ನಿಮ್ಮ ಆರೋಗ್ಯದ ಕಡೆ ಗಮನ ನೀಡಿ.

ಶ್ರೀ ಗುರುರಾಯರ ಸೇವೆ. ಶುಭ ಸಂಖ್ಯೆ–2.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಆರ್ಥಿಕವಾಗಿ ಲಾಭವನ್ನು ಹೊಂದುವಿರಾದರೂ, ವೃಥಾ ಅಲೆದಾಟಗಳು ಮತ್ತು ಪ್ರತಿಫಲ ಶೂನ್ಯತೆ ತಪ್ಪದು. ಸಾಡೇಸಾತಿ ಪ್ರಭಾವವಿದ್ದು ಗ್ರಹಗಳ ಮಾರ್ಗಸೂಚಿಯಿಂದ ಕಲಿಯುವುದು ಬಹಳ ಇದೆ. ಚಾಡಿ ಮಾತಿನಿಂದ ಚಾವಡಿ ಹಾಳಾಯಿತು ಎಂಬಂತೆ ನೆರೆಹೊರೆಯವರೊಂದಿಗೆ ಉತ್ತಮ ಬಾಂಧವ್ಯವಿರಲಿ. ಭೂಮಿ ಸಂಬಂಧಿತ ವ್ಯವಹಾರಗಳು ತಕ್ಕಮಟ್ಟಿಗೆ ಲಾಭವನ್ನು ತಂದುಕೊಡಲಿದೆ.

ಶ್ರೀ ಅಷ್ಟಾಕ್ಷರೀ ಮಂತ್ರ ಜಪಿಸಿ. ಶುಭ ಸಂಖ್ಯೆ–6.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಈ ಸಪ್ತಾಹದಲ್ಲಿ ಹೆಚ್ಚಿನ ಗ್ರಹಗಳು ನಿಮಗೆ ಅನುಕೂಲವಿಲ್ಲದ ಕಾರಣ ಕೆಲ ಸಮಯ ತಗ್ಗಿ ಬಗ್ಗಿ ನಡೆಯುವುದೇ ಜಾಣತನ. ಕಾಲಚಕ್ರ ಉರುಳುತ್ತಲೇ ಇರುತ್ತದೆ. ಯೋಚಿಸದಿರಿ. ವಾರದ ಉತ್ತರಾರ್ಧದ ನಂತರ ಚಂದ್ರಗ್ರಹ ಶುಭವಿದ್ದು, ಹಣಕಾಸಿನ ವಿಚಾರದಲ್ಲಿ ಸುಧಾರಣೆ ಕಂಡು ಬರುವುದು. ಹೊಸ ಹುರುಪು ಉತ್ಸಾಹ ಕಂಡು ಬರುವುದು. ಸ್ವಂತ ಪರಿಶ್ರಮದಿಂದ ಉನ್ನತ ಸ್ಥಾನ ದೊರಕುವುದು.

ಶ್ರೀ ಲಕ್ಷ್ಮೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–4.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆದಿಗೆ ಮನಸ್ಸಿಗೆ ಸಂತಸ ನೀಡುವ ಹಲವು ಘಟನೆಗಳಿಂದ ಪ್ರಸನ್ನಚಿತ್ತರಾಗಿರುತ್ತೀರಾ. ಹೋಟೆಲ್, ಟ್ರಾವೆಲ್ಸ್ ವ್ಯವಹಾರ ಮಾಡುವವರಿಗೆ ಹೇರಳ ಧನಲಾಭವಾಗುವುದು. ಇಂಜಿನಿಯರ್, ಕಾಂಟ್ರಾಕ್ಟರುಗಳಿಗೆ ದೊಡ್ಡ ಯೋಜನೆಗಳು ದೊರೆಯುವುದು. ಸರ್ಕಾರಿ ನೌಕರರಿಗೆ ಕೆಲಸದ ಹಾಗೂ ಮೇಲಧಿಕಾರಿಗಳ ಒತ್ತಡ ಇರುತ್ತದೆ. ಕಚೇರಿಯಲ್ಲಿ ನ್ಯಾಯ ಸಮ್ಮತವಲ್ಲದ ಕೆಲಸಗಳಿಂದ ದೂರವಿರಿ.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–3.

ಮೈಸೂರು ಮಿತ್ರ

ತಮಿಳುನಾಡಿಗೆ ನೀರು ಬಿಡುತ್ತಿರುವುದನ್ನು ವಿರೋಧಿಸಿ ರಸ್ತೆ ಬಂದ್

ಗಂಟೆಗೂ ಹೆಚ್ಚು ಕಾಲ ಮೈಸೂರು-ತಿ.ನರಸೀಪುರ ರಸ್ತೆಯಲ್ಲಿ ಸಂಚಾರ ಅಸ್ತವ್ಯಸ್ತ, ಪ್ರಯಾಣಿಕರ ಪರದಾಟ



ತಿ.ನರಸೀಪುರ, ಆ.19– ಕಬಿನಿ ಮತ್ತು ಕಾವೇರಿ ಜಲಾಶಯಗಳಿಂದ ತಮಿಳುನಾಡಿಗೆ ನೀರು ಬಿಡುತ್ತಿರುವುದನ್ನು ವಿರೋಧಿಸಿ ಮೈಸೂರು ಮುಖ್ಯ ರಸ್ತೆಯ ರಾಷ್ಟ್ರೀಯ ಹೆದ್ದಾರಿ ಬಿಂದಿಗೆ ಫ್ಯಾಕ್ಟರಿ ಬಳಿ ರೈತರು ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ರಸ್ತೆ ಬಂದ್ ಮಾಡಿ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ತಿ.ನರಸೀಪುರ– ಮೈಸೂರು ರಸ್ತೆಯಲ್ಲಿ ಸಂಚಾರ ಅಸ್ತವ್ಯಸ್ತಗೊಂಡು ಸಾರ್ವಜನಿಕರು ಪರದಾಡುವಂತಾಯಿತು.


ಈ ವೇಳೆ ತಾಲೂಕು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಸಿದ್ದೇಶ್ ಮಾತನಾಡಿ, ಹಿಂದೆ ಡಿ.ಕೆ.ಶಿವಕುಮಾರ್ ಅವರು ವಿರೋಧ ಪಕ್ಷದಲ್ಲಿದ್ದ ಸಂದರ್ಭದಲ್ಲಿ ಮೇಕೆದಾಟು ಯೋಜನೆಯನ್ನು ಅನುಷ್ಠಾನಕ್ಕೆ ತಂದು ಡ್ಯಾಮ್ ನಿರ್ಮಾಣ ಮಾಡಿ ರೈತರಿಗೆ ಅನುಕೂಲ ಮಾಡಿ ಕೊಡುತ್ತೇವೆ ಎಂದು ಹೇಳಿ ರಾತ್ರೋ ರಾತ್ರಿ ಕಾವೇರಿ ನದಿಯಿಂದ ತಮಿಳುನಾಡಿಗೆ ನೀರನ್ನು ಬಿಟ್ಟಿರುವುದು ರಾಜ್ಯದ ರೈತರಿಗೆ ಮಾಡಿದ ದ್ರೋಹವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಮ್ಮ ರಾಜ್ಯದ ರೈತರ ಹಿತ ಕಾಪಾಡದೇ ಪಕ್ಕದ ರಾಜ್ಯದ ರೈತರ ಹಿತ ಕಾಪಾಡುವಲ್ಲಿ ರಾಜ್ಯ ಸರ್ಕಾರ ಮುಂದೆ ಇದೆ. ಎಂಥಾ ದುರ್ದೈವ. ಇಲ್ಲಿ ನಮ್ಮ ರಾಜ್ಯದಲ್ಲಿ 15 ದಿನಕ್ಕೊಮ್ಮೆ ನೀರು ಬಿಡುತ್ತೇವೆ ಎಂದು ಹೇಳಿ ತಮಿಳುನಾಡಿಗೆ ನಿರಂತರವಾಗಿ ರಾತ್ರೋ ರಾತ್ರಿ ನೀರು ಹರಿಸುತ್ತಿರುವುದು ಎಷ್ಟು ಮಟ್ಟಿಗೆ ಸರಿ. ಈ ಸರ್ಕಾರಕ್ಕೆ ನಮ್ಮ ಸಂಘಟನೆಯಿಂದ ಧಿಕ್ಕಾರ ಎಂದರು.

ನೀರನ್ನು ಈ ಕೂಡಲೇ ನಿಲ್ಲಿಸದಿದ್ದರೆ ಆಯಾ ಗ್ರಾಮದ ನದಿ ಪಾತ್ರ ದಡದಲ್ಲಿರುವ ರೈತರು ನದಿಗೆ ಇಳಿದು ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಸರಕಾರಕ್ಕೆ ಎಚ್ಚರಿಕೆ ನೀಡಿದರು. ಪ್ರತಿಭಟನೆಯ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಮಾರು ಒಂದು ಗಂಟೆಗಳ ಕಾಲ ಎರಡೂ ಕಡೆಯೂ ವಾಹನಗಳು ಸಾಲುಗಟ್ಟಿ ನಿಂತು ಪ್ರಯಾಣಿಕರು ಪರದಾಡಬೇಕಾಯಿತು. ಚಳವಳಿ ನಿರತ ರೈತರನ್ನು ಪೊಲೀಸರು ಬಂಧಿಸಿ ಅನಂತರ ಬಿಡುಗಡೆ ಮಾಡಿದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ಹತ್ತಳ್ಳಿ ದೇವರಾಜ್, ಹಳ್ಳಿ ಕೆರೆಹುಂಡಿ ಭಾಗ್ಯರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್, ತಾಲೂಕು ಪ್ರಧಾನ ಕಾರ್ಯದರ್ಶಿ ಪ್ರಸಾದ್ ನಾಯಕ್, ಟೌನ್ ಅಧ್ಯಕ್ಷ ಅಪ್ಪಣ್ಣ ಸಂಘಟನಾ ಕಾರ್ಯದರ್ಶಿ ಕುರುಬೂರು ಪ್ರದೀಪ್, ರಾಜೇಶ್, ಆದಿ ಬೆಟ್ಟಳ್ಳಿ ನಂಜುಂಡಸ್ವಾಮಿ, ಅನಿಲ್ ಹೊಸೂರು, ಗೌರಿಶಂಕರ್, ವಾಚ್ ಕುಮಾರ್, ತರಕಾರಿ ನಿಂಗರಾಜು, ಮಹದೇವ ಪ್ರಸಾದ್, ಜಾಲಹಳ್ಳಿ ರಾಜೇಶ್, ಉಮೇಶ್ ಇನ್ನು ಹಲವು ರೈತರು ಚಳವಳಿಯಲ್ಲಿ ಭಾಗವಹಿಸಿದ್ದರು.

ಇಂದು ಹುಣಸೂರಲ್ಲಿ ಮಾಜಿ ಸಿಎಂ ದಿವಂಗತ ಡಿ.ದೇವರಾಜ ಅರಸು ಅವರ ಜನ್ಮ ದಿನಾಚರಣೆ



ಹುಣಸೂರು, ಆ.19– ತಾಲೂಕು ಪಂಚಾಯತ್, ತಾಲೂಕು ಆಡಳಿತ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ದಿವಂಗತ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸುರವರ 108ನೇ ಜನ್ಮದಿನಾಚರಣೆಯನ್ನು ಆ.20ರಂದು ಆಚರಿಸಲಾಗುವುದು.

ಅರಸು ಅವರ ಸ್ವಗ್ರಾಮ ಕಲ್ಲಹಳ್ಳಿಯಲ್ಲಿ ಭಾನುವಾರ ಬೆಳಿಗ್ಗೆ 8.30ಕ್ಕೆ ಸಮಾದಿಗೆ ಪೂಜೆ ಸಲ್ಲಿಸಲಾಗುವುದು. ಬೆಳಿಗ್ಗೆ 10 ಗಂಟೆಗೆ ನಗರದ ಎಪಿಎಂಸಿ ಬಳಿ ಇರುವ ಅರಸು ಅವರ ಪುತ್ಥಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಮಾಲಾರ್ಪಣೆ ಮಾಡುವ ಮೂಲಕ ಜನ್ಮ ದಿನಾಚರಣೆಗೆ ಚಾಲನೆ ನೀಡುವರು.

ನಂತರ ನಡೆಯುವ ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಜಿ.ಡಿ.ಹರೀಶ್‌ಗೌಡ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದ ಪ್ರತಾಪ್ ಸಿಂಹ, ವಿಧಾನ ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮಧು ಮಾದೇಗೌಡ, ಸಿ.ಎನ್.ಮಂಜೆಗೌಡ ಭಾಗವಹಿಸಲಿದ್ದಾರೆ.

ವಿಶೇಷ ಅಹ್ವಾನಿತರಾಗಿ ಉಪವಿಭಾಗಾಧಿಕಾರಿ ರುಚಿ ಬಿಂದಾಲ್, ಜಿ.ಪಂ ಮುಖ್ಯ ಲೆಕ್ಕಾಧಿಕಾರಿ ಸಿದ್ದಗಂಗಮ್ಮ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ರಾಘವೇಂದ್ರ ತಹಸೀಲ್ದಾರ್ ಡಾ.ಅಶೋಕ್, ತಾಪಂ ಕಾರ್ಯನಿರ್ವಹಣಾಧಿಕಾರಿ ಬಿ.ಕೆ. ಮನು, ಪೌರಾಯುಕ್ತೆ ಮಾನಸ, ತಾಲೂಕು ಕಲ್ಯಾಣಾಧಿಕಾರಿ ಸುಜೇಂದ್ರಕುಮಾರ್ ಹಾಗೂ ಇನ್ನಿತರ ಗಣ್ಯರು ಪಾಲ್ಗೊಳ್ಳುವರು.

ಧಾರ್ಮಿಕ ಕ್ಷೇತ್ರಗಳಿಂದಲೇ ಪ್ಲಾಸ್ಟಿಕ್ ಮುಕ್ತ ಕಾರ್ಯ



ಹಿರೀಕ್ಯಾತನಹಳ್ಳಿ, ಆ.19– ಧಾರ್ಮಿಕ ಕ್ಷೇತ್ರಗಳಿಂದಲೇ ಪ್ಲಾಸ್ಟಿಕ್ ಮುಕ್ತ ಕಾರ್ಯ ಆರಂಭವಾಗಲಿ ಎಂದು ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಕರೆ ನೀಡಿದ್ದಾರೆ.

ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಹೊನ್ನೇನಹಳ್ಳಿ ಗ್ರಾಮದ ಶ್ರೀ ಧನ್ವಂತರಿ ಸೇವಾ ಪ್ರತಿಷ್ಠಾಪನದ ವತಿಯಿಂದ ಅಮೃತ ಬಿಂದು ಕ್ಷೇತ್ರದಲ್ಲಿ ಧನ್ವಂತರಿ ಸ್ವಾಮಿಯ ವೈಭವದ ದೇಗುಲ ನಿರ್ಮಾಣದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನೂತನವಾಗಿ ನಿರ್ಮಾಣ ಮಾಡುತ್ತಿರುವ ದೇವಸ್ಥಾನದಲ್ಲಿ ಪ್ರಾರಂಭದಲ್ಲಿಯೇ ಪ್ಲಾಸ್ಟಿಕ್ ಮುಕ್ತ ಪ್ರದೇಶವೆಂದು ಘೋಷಿಸಲಿ ಎಂದರು.

ಕರ್ನಾಟಕದಲ್ಲಿ ಪ್ಲಾಸ್ಟಿಕ್ ಉತ್ಪನ್ನ ಉಪಯೋಗ ಹೆಚ್ಚಾಗುತ್ತಿದೆ. ಮೈಸೂರು ಸುತ್ತಮುತ್ತ ರಸ್ತೆ ಬದಿಗಳಲ್ಲಿ ಪ್ಲಾಸ್ಟಿಕ್ ಕಸ ಹೆಚ್ಚಾಗಿದೆ. ಇದನ್ನು ನಿಯಂತ್ರಿಸಲು ಜನರು ಕೂಡ ಪ್ರಯತ್ನಿಸಬೇಕು. ಪ್ಲಾಸ್ಟಿಕ್ ಮುಕ್ತ ಕಾರ್ಯ ಧಾರ್ಮಿಕ ಕ್ಷೇತ್ರಗಳಲ್ಲಿಂದಲೇ ಶುರುವಾಗಬೇಕಾಗಿದೆ. ಪ್ಲಾಸ್ಟಿಕ್ ಚಿಕ್ಕ ಚಿಕ್ಕ ಚೂರುಗಳಾಗಿ ಭೂಮಿ ಸೇರುವುದರಿಂದ ಮಣ್ಣು ಹಾಗೂ ನೀರು ಮಾಲಿನ್ಯವಾಗಿ ನಂತರ ಆಹಾರದಲ್ಲಿ ಸೇರಿ ವಿಷವಾಗುತ್ತಿದೆ. ಇದನ್ನು ಉಪಯೋಗಿಸುತ್ತಿರುವುದರಿಂದ ಕ್ಯಾನ್ಸರ್ ಮುಂತಾದ ದೊಡ್ಡ ದೊಡ್ಡ ಕಾಯಿಲೆಗಳಿಗೆ ತುತ್ತಾಗುತ್ತಿದ್ದೇವೆ ಎಂದರು.

ಜನರು ಹಿಂದಿನ ರೀತಿ ಪೂಜೆಗೆ ಸಾಮಗ್ರಿಗಳನ್ನು ಬಿದಿರಿನ ಬುಟ್ಟಿ ಹಾಗೂ ಬಟ್ಟೆ ಬ್ಯಾಗ್ ಉಪಯೋಗಿಸುವ ಮೂಲಕ ಪ್ಲಾಸ್ಟಿಕ್‌ಗೆ ವಿದಾಯ ಹೇಳಬೇಕು. ಜೊತೆಗೆ ಗ್ರಾಮಸ್ಥರ ಬೆಂಬಲ ಅತಿ ಮುಖ್ಯ ಎಂದರು.

ಶ್ರೀ ಕ್ಷೇತ್ರ ಬೇಬಿ ಮಠ ಚಂದ್ರವನ ಆಶ್ರಮದ ಶ್ರೀ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿ ಆಶೀರ್ವಚನ ನೀಡಿ, ಯತಿಗಳ ದರ್ಶನ, ರಾಜರ ದರ್ಶನ ಮಾಡಬೇಕಾದರೆ ಯೋಗವಿರಬೇಕು ಎಂದರು.

ಬ್ರಹ್ಮರ್ಷಿ ಆನಂದ ಸಿದ್ಧಿ ಪೀಠದ ಮಹರ್ಷಿ ಡಾ. ಶ್ರೀ ಶ್ರೀ ಆನಂದ ಗುರೂಜಿ, ಯಜ್ಞ ಮಹಾಯಾಗ ವೇದ ಬ್ರಹ್ಮ ಶ್ರೀ ಭವಾನಿ ಶಂಕರ್, ಧನ್ವಂತರಿ ಸೇವಾ ಟ್ರಸ್ಟ್ ಅಧ್ಯಕ್ಷೆ ತುಳಸಿ ಮಾತಾ, ಉಪಾಧ್ಯಕ್ಷ ಡಾ. ಸಿದ್ದರಾಜು, ಟ್ರಸ್ಟಿಗಳಾದ ಪ್ರಭಾಕರ್, ಡಾ.ಎಸ್ ಅಭಿನಾಶ್, ಎಸ್ ಕಾರ್ತಿಕ್, ಅಭಿಲಾಶ್, ಹಾಗೂ ಹಲವಾರು ಭಕ್ತರು ಮುಖಂಡರು ಹಾಜರಿದ್ದರು.

ನನ್ನ ಮಣ್ಣು ನನ್ನ ದೇಶ ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ವೀರಯೋಧರ ಸ್ಮರಣೆ



ನಂಜನಗೂಡು, ಆ.19– ಮಾತೃ ಭೂಮಿಯ ಘನತೆ ಹಾಗೂ ಸ್ವಾತಂತ್ರ್ಯ ಕಾಪಾಡಲು ತಮ್ಮ ಪ್ರಾಣ ತ್ಯಾಗ ಮಾಡಿದ ಹೋರಾಟಗಾರರು ಹಾಗೂ ವೀರ ಯೋಧ'ರ' ತ್ಯಾಗ ಬಲಿದಾನಗಳನ್ನು ಸ್ಮರಿಸಿ ಗೌರವ ಸೂಚಿಸಬೇಕಾದ್ದು ಪ್ರತಿಯೊಬ್ಬ ನಾಗರೀಕನ ಕರ್ತವ್ಯವಾಗಿದೆ ಎಂದು ನಗರಸಭೆ ಆಯುಕ್ತ ನಂಜುಂಡಸ್ವಾಮಿ ತಿಳಿಸಿದರು.

ನಗರದ ನಗರಸಭೆ ಆವರಣದಲ್ಲಿ 76 ನೇ ಸ್ವಾತಂತ್ರೋತ್ಸವದ ಪ್ರಯುಕ್ತ ಶನಿವಾರ ಆಯೋಜಿಸಲಾಗಿದ್ದ "ನನ್ನ ಮಣ್ಣು ನನ್ನ ದೇಶ" ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಸಾವಿರಾರು ಮಂದಿ ದೇಶವಾಸಿಗಳು ತಮ್ಮ ಪ್ರಾಣ ತ್ಯಾಗ ಮಾಡಿದ್ದಾರೆ, ನಮ್ಮ ವೀರ ಯೋಧರು ಮಾತೃ ಭೂಮಿಯ ಘನತೆಗಾಗಿ ಶತ್ರುಗಳ ವಿರುದ್ದ ಹೋರಾಟ ನಡೆಸುವಾಗ ತಮ್ಮ ಪ್ರಾಣತ್ಯಾಗ ಮಾಡಿದ್ದಾರೆ, ಅವರ ತ್ಯಾಗ ಬಲಿದಾನ ಗಳಿಂದಾಗಿ ನಾವು ಸ್ವತಂತ್ರ ಭಾರತದಲ್ಲಿ ಹೆಮ್ಮೆಯಿಂದ ಬದುಕುತ್ತಿದ್ದೇವೆ ಎಂದು ಅವರು ನುಡಿದರು.

ದೇಶದ ಪ್ರತಿ ಇಂಚು ಭೂಮಿ ನಮಗೆ ತಾಯಿಯ ಸಮಾನ, ಹೀಗಾಗಿ ದೇಶದಾದ್ಯಂತದ ಭೂಮಿಯ ಮಣ್ಣನ್ನು ಸಂಗ್ರಹಿಸಿ ದೆಹಲಿಯ ಉದ್ಯಾನದಲ್ಲಿ ಹೋರಾಟಗಾರರು ಹಾಗೂ ವೀರ ಯೋಧರ ಸವಿನೆನಪಿಗಾಗಿ ಗಿಡಗಳನ್ನು ಬೆಳೆಸುವ ಮೂಲಕ ಗೌರವವನ್ನು ಸಮರ್ಪಿಸಲಾಗುತ್ತಿದೆ, ದೇಶದ ಬಗ್ಗೆ ಇಂದಿನ ತಲೆಮಾರಿಗೆ ಅಭಿಮಾನ ಮೂಡಿಸುವ ಈ ಅಭಿಯಾನದಲ್ಲಿ ನಾಗರೀಕರು ಪಾಲ್ಗೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಸುಬ್ಬಣ್ಣ ಅವರ ಮಗಳು ಶೈಲಜ, ನಿವೃತ್ತ ಯೋಧ ರಂಗಪ್ರಸಾದ್, ರಾಘವೇಂದ್ರ, ಲೇಟ್ ನಾಯಕ್ ಶಿವಾನಂದ್ ಅವರ ಪತ್ನಿ ಸುವರ್ಣ, ವೀರ ಯೋಧ ಲೇಟ್ ಮಾದಯ್ಯ ಅವರ ಪತ್ನಿ ರಂಗಮ್ಮ ಅವರುಗಳಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ನಗರಸಭೆ ಎಇಇ ಶ್ರೀನಿವಾಸ್, ಪರಿಸರ ಇಂಜಿನಿಯರ್ ಮೈತ್ರಾದೇವಿ, ನಗರಸಭೆ ಸದಸ್ಯರಾದ ಮಹದೇವಪ್ರಸಾದ್, ಮಹೇಶ್, ಖಾಲೀದ್ ಅಹಮ್ಮದ್ ಉಪಸ್ಥಿತರಿದ್ದರು.



ಮಲ್ಕುಂಡಿ ಸಮೀಪದ ದೇಮಾಯಶೆಟ್ಟಿಪುರ ಗ್ರಾಮ ಪಂಚಾಯತಿಯಲ್ಲಿ 77 ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಗ್ರಾಪಂ ಅಧ್ಯಕ್ಷೆ ಶಿಲ್ಪ ಸುರೇಶ್ ನೆರವೇರಿಸಿದರು ಗ್ರಾ ಪಂ ಉಪಾಧ್ಯಕ್ಷ ಬಿ.ಟಿ.ಕುಮಾರ್, ಸದಸ್ಯರುಗಳಾದ ಜಗದೀಶ್, ಪಾಂಡು, ಸಿದ್ದರಾಜು, ಬಾನುಬೇಗಂ, ಜವರೇಗೌಡ, ಸೋಮನಾಯಕ, ಕಾರ್ಯದರ್ಶಿ ಶಿವಪ್ಪ ಸೇರಿದಂತೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಹುಣಸೂರು ಪಟ್ಟಣದಲ್ಲಿ ತಲೆಯೆತ್ತುತ್ತಿದೆ ಅನಧಿಕೃತ ಕಟ್ಟಡ

ಕ್ರಮಕ್ಕೆ ಆಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ನಗರಸಭೆ ವಿರುದ್ಧ ದೂರು



ಹುಣಸೂರು, ಆ.19– ನಗರಸಭೆ ವ್ಯಾಪ್ತಿಯಲ್ಲಿ ಅಕ್ರಮ ಕಟ್ಟಡಗಳು, ವಾಣಿಜ್ಯ ಮಳಿಗೆಗಳು ಮತ್ತು ಅನಧಿಕೃತ ಬಡಾವಣೆಗಳು ನಿರ್ಮಾಣವಾಗುತ್ತಿದ್ದು, ಅಧಿಕಾರಿಗಳ ನಿರ್ಲಕ್ಷ್ಯತೆ ಬಗ್ಗೆ ಜಿಲ್ಲಾಧಿಕಾರಿಗಳಿಗೆ ದೂರು ನೀಡಿರುವುದಾಗಿ ತಾಲೂಕು ಅಲ್ಪಸಂಖ್ಯಾತರ ಒಕ್ಕೂಟದ ಅಧ್ಯಕ್ಷ ಇಂಟಕ್ ರಾಜು ತಿಳಿಸಿದ್ದಾರೆ.

ಹುಣಸೂರು ನಗರ ವ್ಯಾಪ್ತಿಯಲ್ಲಿ ಕಳೆದ 20 ವರ್ಷಗಳಿಂದ ಸುಮಾರು 97 ಅನಧಿಕೃತ ಬಡಾವಣೆಗಳು ನಿರ್ಮಾಣವಾಗಿದ್ದು, ಈ ಬಡಾವಣೆಗಳಲ್ಲಿ ನಿವೇಶಗಳನ್ನು ಖರೀದಿಸಿರುವ ಸಾರ್ವಜನಿಕರು ನಗರಸಭೆಯಿಂದ ನಮೂನೆ–3 ಫಾರಂ ಪಡೆಯಲು ಸಾಧ್ಯವಾಗದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಬಗ್ಗೆ ಸರ್ಕಾರವು ಯಾವುದೇ ಕ್ರಮ ಕೈಗೊಳ್ಳದಿರುವುದು ವಿಪರ್ಯಾಸ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಕಳೆದ 20 ವರ್ಷಗಳಿಂದ ನೂರಾರು ಅನಧಿಕೃತ ಕಟ್ಟಡಗಳು ನಿರ್ಮಾಣಗೊಂಡಿದ್ದು ಈ ಕಟ್ಟಡಗಳಿಗೂ ನಮೂನೆ–3 ಫಾರಂ ಪಡೆದುಕೊಳ್ಳಲು ಆಗದೆ ಸಾರ್ವಜನಿಕರು ಕಂಗಾಲಾಗಿದ್ದಾರೆ. ಪರಿಸ್ಥಿತಿಯನ್ನು ಅರಿತ ಕೆಲವು ವ್ಯಕ್ತಿಗಳು ನಗರಸಭೆಯನ್ನು ಕಡೆಗಣಿಸಿ ರಾಜಾರೋಷವಾಗಿ ಅನಧಿಕೃತ ಕಟ್ಟಡಗಳನ್ನು ನಿರ್ಮಾಣ ಮಾಡುತ್ತಿದ್ದಾರೆ ಹಾಗೂ ಕೆಲವು ಅನಧಿಕೃತ ಬಡಾವಣೆಗಳಲ್ಲಿ ಪ್ರತಿಷ್ಠಿತ ವ್ಯಕ್ತಿಗಳು ಹಾಗೂ ಅಧಿಕಾರಿಗಳ ಸಂಭಂಧಿಕರು ನಗರಸಭೆಯಿಂದ ಕಟ್ಟಡ ನಿರ್ಮಾಣ ಮಾಡಲು ಯಾವುದೇ ರೀತಿಯ ಲೈಸೆನ್ಸ್ ಪಡೆಯದೇ ಕಟ್ಟಡ ನಿರ್ಮಾಣ ಮಾಡುತ್ತಿದ್ದಾರೆ ಎಂದು ಅವರು ಗಂಭೀರ ಆರೋಪ ಮಾಡಿದರು.

ಹುಣಸೂರಿನ ಬಿ.ಎಂ.ರಸ್ತೆಯ ಮಾರುತಿ ಪೆಟ್ರೋಲ್ ಬಂಕ್ ಸರ್ಕಲ್ ಬಳಿ ಅನೇಕ ಕಟ್ಟಡಗಳು ಯಾವುದೆ ಲೈಸೆನ್ಸ್ ಇಲ್ಲದೆ ನಿರ್ಮಾಣವಾಗಿವೆ. ಇದರ ಬಗ್ಗೆ ನಗರಸಭೆಯ ಅಧಿಕಾರಿಗಳು ಕೈ ಕಟ್ಟಿ ಕುಳಿತಿದ್ದಾರೆ. ಲೋಕೋಪಯೋಗಿ ಇಲಾಖೆಗೆ ಸೇರಿದ ಬಿ.ಎಂ.ರಸ್ತೆಯ ಮಾರ್ಜಿನ್ ಸ್ಥಳವನ್ನು ಒತ್ತುವರಿ ಮಾಡಿಕೊಂಡು ವಾಣಿಜ್ಯ ಕಟ್ಟಡ ನಿರ್ಮಾಣ ಮಾಡುತ್ತಿರುವ ಬಗ್ಗೆ ನಿರ್ಲಕ್ಷತೆಯಿಂದ ನಡೆದುಕೊಂಡಿರುವ ನಗರಸಭೆ ಅಧಿಕಾರಿಗಳು ಮತ್ತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ವಿರುದ್ದ ಸೂಕ್ತ ಕ್ರಮ ಕೈಗೊಂಡು ಅಕ್ರಮ ಕಟ್ಟಡ ಕೆಲಸವನ್ನು ತಡೆಹಿಡಿಯಬೇಕೆಂದು ಜಿಲ್ಲಾಧಿಕಾರಿಯವರನ್ನು ಒತ್ತಾಯ ಮಾಡಲಾಗಿದೆ ಎಂದರು.

ಛಾಯಾಗ್ರಾಹಕರ ಭವನಕ್ಕೆ ಐದುಗುಂಟೆ ಜಾಗ ನೀಡುವೆ

ವಿಶ್ವ ಛಾಯಾಗ್ರಹಣ ದಿನಾಚರಣೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಭರವಸೆ



ಹೆಚ್.ಡಿ.ಕೋಟೆ, ಆ.19– ಛಾಯಾಗ್ರಾಹಕರ ಭವನ ನಿರ್ಮಾಣಕ್ಕೆ 5ಗುಂಟೆ ಜಾಗವನ್ನು ಗುರುತಿಸಲಾಗಿದ್ದು, ಶೀಘ್ರದಲ್ಲೇ ಅದನ್ನು ಹಸ್ತಾಂತರಿಸುವ ಪ್ರಕ್ರಿಯೆ ನಡೆಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕು ಛಾಯಾಗ್ರಾಹಕರ ಸಂಘದ ವತಿಯಿಂದ ಏರ್ಪಡಿಸಲಾಗಿದ್ದ 184ನೇ ವಿಶ್ವ ಛಾಯಾಗ್ರಹಣ ದಿನಾಚರಣೆಯನ್ನು ಕ್ಯಾಮರಾ ಕ್ಲಿಕ್ಕಿಸುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಛಾಯಾಗ್ರಹಕರಿಗೆ ಭವನ ನಿರ್ಮಾಣಕ್ಕೆ ಎಂದು 5 ಗುಂಟೆ ಜಾಗವನ್ನು ತಾರಕ ವಿದ್ಯಾ ಸಂಸ್ಥೆ ಸಮೀಪ ಗುರುತಿಸಲಾಗಿದ್ದು, ಮುಂದಿನ ದಿನಗಳಲ್ಲಿ ಭವನ ನಿರ್ಮಾಣ ಮಾಡಿಕೊಡುವ ಭರವಸೆ ನೀಡಿದರು. ಮೈಸೂರಿನಲ್ಲಿರುವ ರುಡ್‌ಸೆಟ್ ಸಂಸ್ಥೆ ರೀತಿ ತಾಲೂಕಿನಲ್ಲಿ ಛಾಯಾಗ್ರಾಹಣ ತರಬೇತಿ ಕೇಂದ್ರ ಸ್ಥಾಪನೆ ಮಾಡಿದರೆ ಹೆಚ್ಚು ಅನುಕೂಲ. ಹಾಗಾಗಿ ಅದನ್ನು ಮಾಡಲು ಸಿದ್ದನಿದ್ದೇನೆ. ಅದಕ್ಕೆ ಸಂಘದ ಸದಸ್ಯರ ಸಹಕಾರ ಮುಖ್ಯ ಎಂದರು.

ಕಳೆದ ಐದು ವರ್ಷದಿಂದ ಛಾಯಾಗ್ರಾಹಕರ ದಿನಾಚರಣೆಯಲ್ಲಿ ನಾನು ಭಾಗವಹಿಸಿದ್ದು, ಭವನ ನಿರ್ಮಾಣಕ್ಕೆ ಜಾಗವನ್ನು ಗುರುತಿಸಿ ಕೊಡಿ ಎಂದು ಹಲವಾರು ಬಾರಿ ಮನವಿ ಮಾಡಿದ್ದಿರಿ. ನಾನು ನಿಮಗೆ ಮಾತು ಕೊಟ್ಟಂತೆ 5 ಗುಂಟೆ ಜಾಗವನ್ನು ಈಗಾಗಲೇ ಗುರುತಿಸಿದ್ದು ಭವನ ನಿರ್ಮಾಣ ಹಾಗೂ ನಿಮ್ಮ ಇನ್ನೂ ಹಲವಾರು ಬೇಡಿಕೆಗಳನ್ನು ಹಂತ ಹಂತವಾಗಿ ಬಗೆಹರಿಸುವ ಕೆಲಸ ಮಾಡುತ್ತೇನೆ ಎಂದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಚರ್ಮರೋಗ ತಜ್ಞೆ ಡಾ.ಕೆ.ಎಸ್.ಸಹನಾ ಮಾತನಾಡಿ, ಜೀವನಕ್ಕಾಗಿ ವೃತ್ತಿ ಮಾಡುತ್ತೇವೆ. ಯಾವುದೇ ಒಂದು ವೃತ್ತಿಗೆ ಬದ್ದತೆ ಇರಬೇಕು. ಆಗ ಮಾತ್ರ ನಾವು ಏನನ್ನಾದರು ಸಾಧನೆ ಮಾಡಲು ಸಾಧ್ಯ. ಅವಶ್ಯಕತೆ ಇರುವವರೆಗೆ ಏನಾದರೂ ನೀಡಬೇಕು ಅದನ್ನು ಅವರು ಸದ್ಭಳಕೆ ಮಾಡಿಕೊಳ್ಳುತ್ತಾರೆ ಎಂದರು.

ಇದೇ ಸಂದರ್ಭದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರು ಛಾಯಾಗ್ರಹಕರು ತೆಗೆದಿರುವ ಚಿತ್ರಗಳನ್ನು ವೀಕ್ಷಣೆ ಮಾಡಿದರು. ಮೊದಲನೇ ಬಹುಮಾನ ಬಾಲಸುಬ್ರಹ್ಮಣ್ಯ, ಎರಡನೇ ಬಹುಮಾನ ನಂದಕುಮಾರ್ ಶೈಲಿಯವರಿಗೆ ನೀಡಿದರು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕ ಪಡೆದ ಛಾಯಾಗ್ರಾಹಕರ ಮಕ್ಕಳಿಗೆ ಹಾಗೂ ಹಿರಿಯ ಛಾಯಾಗ್ರಹಕರಾದ ಸ್ವಾಮಿ, ಶಂಕರ್, ಕೆಎಸ್‌ಆರ್‌ಟಿಸಿ ಚಾಲಕ ನಾಗಣ್ಣ ಬಂಗಾರಗುಂಡ ಅವರುಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಛಾಯಾಗ್ರಹಕ ಸಂಘದ ಅಧ್ಯಕ್ಷ ಶಿವಣ್ಣ, ವನ್ಯಜೀವಿ ಛಾಯಾಗ್ರಾಹಕ ಹುಲಿ ರವಿಶಂಕರ್, ಪುರಸಭಾ ಮುಖ್ಯಧಿಕಾರಿ ಸುರೇಶ್, ಸದಸ್ಯ ಎಚ್.ಸಿ. ನರಸಿಂಹಮೂರ್ತಿ, ಎಪಿಎಂಸಿ ಕಾರ್ಯದರ್ಶಿ ವಸಂತ್ ಕುಮಾರ್, ಪ್ರಿನ್ಸ್ ಲ್ಯಾಬ್ ನ ಮಾಲೀಕರಾದ ಮಾದೇವಸ್ವಾಮಿ, ಸರ್ಕಾರಿ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಸೋಮಣ್ಣ, ಡಾ: ಸಹನ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪ್ರಮೋದ್, ಛಾಯಾಗ್ರಹ ಸಂಘದ ಉಪಾಧ್ಯಕ್ಷ ಪಾರಿ ವಿಶ್ವನಾಥ್, ಪ್ರಧಾನ ಕಾರ್ಯದರ್ಶಿ ವೆಂಕಟೇಶ್, ಕಾರ್ಯಾಧ್ಯಕ್ಷ ಲಿಂಗರಾಜು, ಗೌರವಾಧ್ಯಕ್ಷ ರಘುರಾಮ್, ಸ್ವಾಮಿ ರಮೇಶ್ ಶಿವಕುಮಾರ್ ಪರಮೇಶ್ ಮನೋಜ್ ಮೋಹನ್ ಕುಮಾರ್ ರವಿ ಆರಾಧ್ಯ ಕೃಷ್ಣ ಚಿಕ್ಕ ನಾಯಕ ಸುರೇಶ್ ಗುರು ಆಚಾರ್ ರೇವಣ್ಣ ನಂಜುಂಡ ಸ್ವಾಮಿ, ಮಾದೇವಸ್ವಾಮಿ, ನಾಗು ಸಾಗರ್, ಬಾಲು, ಛಾಯಾಗ್ರಾಹಕರ ಕುಟುಂಬದವರು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

- ಸ್ಕ್ರೀನ್ 1 ಕೌಸಲ್ಯ ಸುಪ್ರಜಾ ರಾಮ (ಕ): ಬೆ.10ಕ್ಕೆ, ರಾ.10.10ಕ್ಕೆ, ಜೈಲರ್ (ತ): ಮ.1ಕ್ಕೆ, ಬ್ಯಾಂಗ್ (ಕ): ಸಂ.4.30ಕ್ಕೆ ಓಎಂಜಿ 2 (ಹಿಂ): ರಾ.7.10ಕ್ಕೆ.
- ಸ್ಕ್ರೀನ್ 2 ಗೂಮರ್ (ಹಿಂ): ಬೆ.10.15ಕ್ಕೆ, ರಾ.7.25ಕ್ಕೆ, ಜೈಲರ್ (ಕ): ಮ.12.55ಕ್ಕೆ, ಗದರ್ 2 (ಹಿಂ): ಸಂ.4.05ಕ್ಕೆ, ಮಿಸ್ಟರ್ ಪ್ರಗ್ನೆಂಟ್ (ತೆ): ರಾ.10.10ಕ್ಕೆ.
- ಸ್ಕ್ರೀನ್ 3 ಕ್ಷೇತ್ರಪತಿ (ಕ): ಬೆ.10.40ಕ್ಕೆ, ಆಚಾರ್ & ಕೋ (ಕ): ಮ.1.45ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಸಂ.4ಕ್ಕೆ, ಬ್ಲೂ ಬೀಟಲ್ (ಇಂ): ರಾ.7.15ಕ್ಕೆ, ರಾ.9.55ಕ್ಕೆ.
- ಸ್ಕ್ರೀನ್ 4 ಜೈಲರ್ (ತ): ಬೆ.9.50ಕ್ಕೆ, ಮ.3.50ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.1ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

- ಸ್ಕ್ರೀನ್ 1 ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
- ಸ್ಕ್ರೀನ್ 2 ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
- ಸ್ಕ್ರೀನ್ 3 ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
- ಸ್ಕ್ರೀನ್ 4 ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

- ಸ್ಕ್ರೀನ್ 1 ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
- ಸ್ಕ್ರೀನ್ 2 ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
- ಸ್ಕ್ರೀನ್ 3 ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
- ಸ್ಕ್ರೀನ್ 4 ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಬೇಬಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬೇಬಿ (ತೆ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗದರ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ನಮೋ ಭೂತಾತ್ಮ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಗದರ್ –2 (ಹಿಂ)	4 ಪ್ರದರ್ಶನಗಳು
ಸಂಗಂ	
ಕ್ಷೇತ್ರಪತಿ (ಕ)	4 ಪ್ರದರ್ಶನಗಳು
ಲಿಡೋ	
ಕೌಸಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೋಳಾಶಂಕರ (ತೆ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ–2 (ಕ)	4 ಪ್ರದರ್ಶನಗಳು

ಬನ್ನೂರಿನಲ್ಲಿ ರಕ್ತದಾನ ಶಿಬಿರ



ಆರ್‌ಜಿಎಸ್ ಗ್ರೂಪ್ ವತಿಯಿಂದ 77ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಶಾಸಕ ಜಿ.ಟಿ.ದೇವೇಗೌಡ, ವೈದ್ಯರಾದ ಡಾ.ಸಿದ್ದೇಶ್, ಪರಿಸರ ಜಾಗೃತಿ ವೇದಿಕೆ ಅಧ್ಯಕ್ಷ ಡಾ.ಮಹೇಂದ್ರಸಿಂಗ್‌ಕಾಳಪ್ಪ ಪಾರಸ್ ಬೋರಾಣ, ಭಕ್ತರಾಮು, ಜಿ.ಸಂತೋಷ್‌ಕುಮಾರಿ, ವನ್ಯಸಿಂಗ್, ವಿರಾಟ್‌ಸಿಂಗ್, ಅಮರರಾಮ್, ನಾರಾಯಣ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಮೈಸೂರು ತಾಲೂಕು ಡಿಎಂಜಿ ಹಳ್ಳಿ ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ ಗ್ರಂಥಾಲಯದ ಪಿತಾಮಹ ಎಸ್.ಆರ್. ರಂಗನಾಥ್ ಅವರ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕಿ ಸೀತಾ ಲಕ್ಷ್ಮೀ, ಗ್ರಾಪಂ ಸದಸ್ಯ ಭಗವಂತಸ್ವಾಮಿ, ಮಾಜಿ ಸದಸ್ಯ ಮಾಲೇಗೌಡ, ಗ್ರಂಥಪಾಲಕ ಪುಟ್ಟೇಗೌಡ ಮತ್ತು ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

FARMS FOR SALE

Fully developed farms for sale. ½ acre and 4 acres on Mysore Ooty Highway. 7 kms from Nanjangud.

Contact Owner: 9739009284

Brokers Please Excuse

2.5 BHK HOME INTERIORS @ Rs. 2.50 Lacs

ISO 9001:2015 Certified Company Depot

ಶಿಶಿ Build Mart®

TALK TO OUR DESIGN TEAM

9901291267

30 x 40 CORNER HOUSE FOR SALE

Ground and 1st floor No. 47/A, 5th main 1st Stage, Brindavan Extn., Mysore. Contact:

6366100472 / 9845739607

9008958301 / 9845764686

ಛತ್ರ ಖಾಲಿ ಇದೆ

ಮದುವೆ ಮತ್ತು ಇತರೆ ಶುಭ ಸಮಾರಂಭಗಳಿಗೆ ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಛತ್ರ ಖಾಲಿ ಇದೆ.

ವಿಳಾಸ: ಶ್ರೀಮತಿ ಲೀಲಾ ಶ್ರೀ ಎಚ್ ಚನ್ನಯ್ಯ ಕಲ್ಯಾಣಮಂಟಪ ವಾಲ್ಮೀಕಿ ರಸ್ತೆ, ಹೊಸ ಮಹಾರಾಣಿ ವಾಣಿಜ್ಯ ಕಾಲೇಜು ಪಕ್ಕ, ಪಡುವಾರಹಳ್ಳಿ, ಮೈಸೂರು

ಫೋನ್ : 63624 21885, 93530 69499

OWN YOUR DREAM HOUSE @ KUMARABEEDU Mysuru

Ready for Registration

Near to Bogadi Road

Loanable with all leading banks

Best Plots @ Best Prices

Call Now @

99160 21212 / 87622 42134

MUDA SITE FOR SALE

30X40 & 30X50

Near Sardar Vallabh Bhai Patel Nagar,

T Narasipura Road

READY FOR REGISTRATION

99458 57017



ಸುಧಾರಿತ ಫಲವತ್ತತೆ ಮತ್ತು ಐವಿಎಫ್ ಚಿಕಿತ್ಸೆ

ಈಗ ಮೈಸೂರಿನಲ್ಲಿ

ಗರ್ಭಧರಿಸಲು ಸಾಧ್ಯವಾಗುತ್ತಿಲ್ಲವೇ?

ಈಗಲೇ ನಮ್ಮ ಫಲವತ್ತತೆ ತಜ್ಞರಿಗೆ ಕರೆ ಮಾಡಿ!


7230002155

ಇಂದಿರಾ ಐವಿಎಫ್, ಜೋಯಾಲುಕ್ಕಾಸ್ ಕಟ್ಟಡ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಹತ್ತಿರ, ಬೆಂಗಳೂರು–ನೀಲಗಿರಿ ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು

• ಬೆಂಗಳೂರು • ದಾವಣಗೆರೆ • ಗುಲ್ಬರ್ಗ • ಹುಬ್ಬಳ್ಳಿ • ತುಮಕೂರು • ಬಾಗಲಕೋಟೆ • ಬಳ್ಳಾರಿ • ಬೆಳಗಾವಿ

• 110+ ಫಲವತ್ತತೆ ಕೇಂದ್ರಗಳು ಪ್ಯಾನ್ ಇಂಡಿಯಾ • ಚಿಕಿತ್ಸೆ ಪ್ರೋಟೋಕಾಲ್ ರೋಗಿಗಳ ಅಗತ್ಯದ ಪ್ರಕಾರ • 250+ ಫಲವತ್ತತೆ ವೈದ್ಯರ ಅನುಭವಿ ತಂಡ

REMEMBRANCE



Theetharamada Ravi Nanjappa

11.12.1947 — 20.08.2021

You are dearly missed and you will forever be in our hearts.

Wife-Indira, daughter, son, son-in-law, daughter-in-law, relatives and family members.

HOUSE FOR RENT

60x40 size, 25 years old, independent house, first floor available for family or home cum office, spacious 4 rooms, approximate 15 square feet at Behind Gokulam Telephone Exchange Office, V.V. Mohalla.

Owner is in Mysuru for two days. Contact:

Mob: 93419-34319

READY TO BUILT 40X60 MUDA APPROVED SITE FOR SALE WITH BORE

NEAR ST.JOSEPH SCHOOL YELWALA, MYSORE

8217851695

ತಕ್ಷಣ ಬೇಕಾಗಿದ್ದಾರೆ

EXPERIENCED PHARMA AIDE

ಔಷಧಿಗಳ ಬಗ್ಗೆ ಅನುಭವವುಳ್ಳ ಸಹಾಯಕರು

For MEDICAL SHOP

Location: Bogadi. Contact:

Mob: 9880587586

ಬೇಕಾಗಿದ್ದಾರೆ

ಮ್ಯಾನೇಜರ್

ಡಾ॥ ಗೌರಿ ರಮೇಶ್ ಮೂಳೆರೋಗ ಆಸ್ಪತ್ರೆ, ದೊಡ್ಡ ಗಡಿಯಾರದ ಎದುರು, ಅಶೋಕ ರಸ್ತೆ, ಮೈಸೂರು–01

8762156344

HERITAGE HOMES

MYSURU - HUNSUR HIGHWAY, MYSORE

MEGA RESIDENTIAL TOWNSHIP

MUDA LIMITS

30x40 | 30x50

40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಕೆಲವೇ ಸೈಟ್‌ಗಳು ಮಾತ್ರ ಲಭ್ಯ

ಕೇವಲ ₹550/ ಪ್ರತಿ ಚದರ ಅಡಿ

ಸುಲಭ 4 ಕಂತುಗಳ ಸೌಲಭ್ಯವಿದೆ

ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ

ಅದ್ವಿಕಾ ವೆಂಚರ್ಸ್

9071386615 / 9513301854

ಮುಡಾ ಅನುಮೋದಿತ ಸೈಟುಗಳು ಮಾರಾಟಕ್ಕಿದೆ

ಶ್ರೀನಿಧಿ ಎನ್‌ಕ್ಲೇವ್ ಬೆಳವಾಡಿ, ಮೈಸೂರು

ಬ್ಯಾಂಕ್ ಲೋನ್ ಸೌಲಭ್ಯವಿದೆ.

ಸಂಪೂರ್ಣ ಅಭಿವೃದ್ಧಿ ಹೊಂದಿದೆ । ಮನೆಗಳು ಕಟ್ಟಲ್ಪಟ್ಟಿವೆ

•20x33 | •20x40 | ಕೆಲವೇ ನಿವೇಶನಗಳು ಲಭ್ಯವಿದೆ.

ಶಾಹಿ ಗಾರ್ಮೆಂಟ್ ಹತ್ತಿರ, ಹುಂಡೈ ಕಾರು ಶೋ ರೂಂ ಹಿಂಭಾಗ ಎಕ್ಸೆಲ್ ಪಬ್ಲಿಕ್ ಸ್ಕೂಲ್ ರಸ್ತೆ, ಬೆಳವಾಡಿ, ಮೈಸೂರು. 91484 34989

Shakya Decipher (P) Ltd

Inbound Process/ Non-voice Process

We are looking for Food E-Commerce Inbound and Customer Care Support General Shift / Day Shift/ Night Shift. Any Graduate with English and Tamil Fluency. Walk-In Interview with your updated resume

9611473071,6360589874

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316

ದೂರವಾಣಿ :08226-234848 E-mail: admnchamul@gmail.com

ಪತ್ರಿಕಾ ಪ್ರಕಟಣೆ

2022–23 ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ 2022–23 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ **29.08.2023** ರ ಮಂಗಳವಾರ ಬೆಳಗ್ಗೆ **11.00** ಗಂಟೆಗೆ ಒಕ್ಕೂಟದ ಆಡಳಿತ ಕಛೇರಿ ಆವರಣ, ಕುದೇರು ಗ್ರಾಮ, ಚಾಮರಾಜನಗರ ಜಿಲ್ಲೆ ಇಲ್ಲಿ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ.ವೈ.ಸಿ.ನಾಗೇಂದ್ರ ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದ್ದು, ಸದಸ್ಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಪ್ರತಿನಿಧಿಗಳು ಸಭೆಗೆ ಸಕಾಲದಲ್ಲಿ ಹಾಜರಾಗಬೇಕಾಗಿ ಕೋರಿದೆ. ಪೂರ್ಣ ವಿವರಗಳನ್ನೊಳಗೊಂಡ ಸೂಚನಾ ಪತ್ರವನ್ನು ಎಲ್ಲಾ ಸದಸ್ಯ ಸಂಘಗಳಿಗೆ ಅಂಚೆ / ಮುದ್ದಾಂ ಮೂಲಕ ಕಳುಹಿಸಿಕೊಡಲಾಗಿದೆ. ಸೂಚನಾ ಪತ್ರ ತಲುಪದಿದ್ದಲ್ಲಿ ಇದನ್ನೇ ಸಾಮಾನ್ಯ ಸಭೆಯ ಅಧಿಕೃತ ಸೂಚನಾ ಪತ್ರವೆಂದು ಪರಿಗಣಿಸುವುದು.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ

ಸಹಿ/–

ವ್ಯವಸ್ಥಾಪಕ ನಿರ್ದೇಶಕರು

WANTED ACCOUNTS EXECUTIVE

We are looking for a Commerce Graduate below 35 years with minimum 3 years experience in Accounts Department, capable of handling **Debtors Management & Bank reconciliation. Knowledge of MS Office & Tally is essential.**

Candidates having above qualification may email their resume along with a recent passport sized photograph to :

finance@starofmysore.com



